ವಾರ್ಷಿಕ ಚಂದಾ ರೂ.25/-

# ಜನಪದ

ಸಂಪುಟ–06 • ಸಂಚಿಕೆ–08 • ಮೇ 2023




## ಮತದಾನಕ್ಕಿಂತ ಇನ್ನೊಂದಿಲ್ಲ....
## ನಾನು ಖಚಿತವಾಗಿ ಮತದಾನ ಮಾಡುವೆ

Downloaded From:www.kpscvaani.com





ಮುಖ್ಯ ಚುನಾವಣಾಧಿಕಾರಿ ಕಚೇರಿಯ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಕಟ್ಟಡದ ಗೋಡೆಗಳ ಮೇಲೆ ಮತದಾನದ ಮಹತ್ವ ಸಾರುವಂತಹ ಆಕರ್ಷಕ ವರ್ಣಚಿತ್ರಗಳನ್ನು ಬಿಡಿಸಿರುವ ಪ್ರತಿಭಾವಂತ ತೃತೀಯ ಲಿಂಗಿ ಕಲಾವಿದರಾದ ಅರವಾಣಿ ಆರ್ಟ್ ಪ್ರಾಜೆಕ್ಟ್ ತಂಡದವರೊಂದಿಗೆ ಮುಖ್ಯ ಚುನಾವಣಾಧಿಕಾರಿಗಳಾದ ಮನೋಜ್ ಕುಮಾರ್ ಮೀನಾ ಅವರು ಮತ್ತು ಮಾಧ್ಯಮ ವಿಭಾಗದ ವಿಶೇಷ ಅಧಿಕಾರಿಗಳಾದ ಎ.ವಿ.ಸೂರ್ಯಸೇನ್ ಅವರು ಉಪಸ್ಥಿತರಿದ್ದಾರೆ.

Downloaded From:www.kpscvaani.com



ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-08 • ಮೇ 2023


**06** ಬಂದಿದೆ ಪ್ರಜಾಪ್ರಭುತ್ವದ ಹಬ್ಬ ಪ್ರಬುದ್ಧ ಪ್ರಭುತ್ವ ಸ್ಥಾಪನೆಗಿದು ಸಕಾಲ
• ಚಂದ್ರಮುಖಿ

**09** ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಅತಿಮುಖ್ಯ ಘಟ್ಟ
• ಡಾ. ಆರ್.ಶಂಕರಪ್ಪ

**12** ಓಟ್ ಫೆಸ್ಟ್ (ಮತದಾನದ ಹಬ್ಬ) ಕಾರ್ಯಕ್ರಮಕ್ಕೆ ಚಾಲನೆ
• ಹೆಚ್.ವಿ.ವೀಣಾ

**15** ಚುನಾವಣೆ ನೀತಿ ಸಂಹಿತೆ ಪರಿಧಿ
• ವೆಂಕಿ

**18** ಮತದಾನ ಜಾಗೃತಿಗಾಗಿ ವಿಶೇಷ ಸಾಂಪ್ರದಾಯಿಕ ನಡಿಗೆ
• ವಸಂತ್ ಮಡಳೂರ್

**20** ಎಲೆಕ್ಥಾನ್ 2023 : ಯುವಜನರಿಂದ ಪರಿಹಾರ ಐಡಿಯಾಗಳ ಹ್ಯಾಕಥಾನ್
• ಜಡಿಯಪ್ಪ ಗೆದ್ಲಗಟ್ಟಿ

**23** ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಚುನಾವಣಾ ಪೂರ್ವಸಿದ್ಧತಾ ಪರಿಶೀಲನೆ
• ಎಂ. ಬುಂಜಣ್ಣ






**25** ಸಂಚಾರಿ ಅಣಕು ಮತಗಟ್ಟೆ
• ಮುತ್ತು ಹಳ್ಳದ

**27** ಶಾಂತಿಯುತ ಚುನಾವಣೆಗೆ ಪೋಲೀಸರ ಸಹಕಾರ ಅತ್ಯವಶ್ಯಕ
• ಪಿ.ಕೌಸಲ್ಯ

**29** ಚುನಾವಣಾ ಅಕ್ರಮ ತಡೆಯಲು ಬಳಸಿರಿ 'ಸಿ-ವಿಜಿಲ್' ಆ್ಯಪ್
• ಸುಲೈಮಾನ್.ದ. ನದಾಫ್

**31** ಚುನಾವಣಾ ಪ್ರಚಾರದ ಅನುಮತಿಗಾಗಿ ಸು-ವಿಧಾ ತಂತ್ರಾಂಶ
• ಸುರೇಶ್ ಹಿರೇಮಠ್





**32** ಭಾರತದ ಪ್ರಪ್ರಥಮ ಮತ್ತು ಏಕೈಕ ಮ್ಯೂಸಿಕ್ ಮ್ಯೂಸಿಯಂ ಬೆಂಗಳೂರಿನಲ್ಲಿ
• ಡಿ. ಪಿ. ಮುರಳೀಧರ್

**37** ಸತತ ಏಳು ದಶಕಗಳ ಕಾಲ ಹೆರಿಗೆ ಕಾಯಕ ನಡೆಸಿದ ನರಸಮ್ಮ
• ಆರ್. ರೂಪಕಲಾ

**40** ಗೀಳು ರೋಗಕ್ಕೆ ಸಂಬಂಧಿಸಿದಂತಹ ಪ್ರಶ್ನೆಗಳಿಗೆ ಉತ್ತರಗಳು
• ಡಾ. ಶಿವಮೂರ್ತಿ. ಎನ್

**43** ಹಾಲಿನಂತೆ ಹರಿಯುವ ಹನುಮನ ಗುಂಡಿ ಜಲಪಾತ
• ಆರ್.ಕೆ. ಪ್ರಸಾದ್ ಶೆಟ್ಟಿ

**45** ನೃತ್ಯಲೋಕದ ರಸಋಷಿ ಪ್ರೊ. ಎಂ. ಆರ್. ಕೃಷ್ಣಮೂರ್ತಿ
• ವೈ. ಕೆ. ಸಂಧ್ಯಾ ಶರ್ಮಾ

**50** ಪದಬಂಧ-42



**ಪ್ರಧಾನ ಸಂಪಾದಕರು**
ಡಿ.ಪಿ. ಮುರಳೀಧರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜಿ. ಪೂರ್ಣಿಮ

**ಪ್ರಕಾಶಕರು**
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು–50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ವಿದ್ಯುನ್ಮಾನ ಮತ ಯಂತ್ರದ ಬಗ್ಗೆ ಬಹಳಷ್ಟು ಜನರಿಗೆ ಅನುಮಾನ ಇದ್ದೇ ಇದೆ. ಈ ಅನುಮಾನಗಳಿಗೆ ಸ್ವತಃ ಜಂಟಿ ಚುನಾವಣಾಧಿಕಾರಿ ಅವರೇ ತಮ್ಮ ಪತ್ರಿಕೆಯಲ್ಲಿ ಸಾಕಷ್ಟು ಮಾಹಿತಿಯನ್ನು ನೀಡಿದ್ದಾರೆ.

ಲೇಖನದಲ್ಲಿ ವಿದ್ಯುನ್ಮಾನ ಮತ ಯಂತ್ರವನ್ನು ಅಕ್ರಮವಾಗಿ ವ್ಯತ್ಯಸ್ತಗೊಳಿಸಲು ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಜೊತೆಗೆ ಮತ ಯಂತ್ರವನ್ನು ಅಕ್ರಮವಾಗಿ ವ್ಯತ್ಯಸ್ತಗೊಳಿಸಬಹುದೆಂದು ನ್ಯಾಯಾಲಯಗಳಲ್ಲಿ ಹೂಡಲಾಗಿದ್ದ ಮೊಕದ್ದಮೆಗಳ ಮೇಲೆ ನೀಡಿದ ತೀರ್ಪುಗಳನ್ನು ಉಲ್ಲೇಖ ಮಾಡಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಮಾಹಿತಿಯನ್ನು ಒದಗಿಸಿದ್ದಾರೆ. ಲೇಖನ ಓದಿ ನನಗೂ ಮತಯಂತ್ರದ ಮೇಲೆ ಇದ್ದ ಅಲ್ಪಸ್ವಲ್ಪ ಅನುಮಾನ ಕೂಡ ನಿವಾರಣೆಯಾಯಿತು.

**–ರೇಖಾ ಶಿವಣ್ಣ, ಚನ್ನಪಟ್ಟಣ**

* * *

ವಾರ್ತಾ ಜನಪದ ಪತ್ರಿಕೆಯ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಉಗುರ ತುದಿಯ ಕಲೆಗಿದೆ ಕಿಮ್ಮತ್ತು' ಲೇಖನವು ಮತದಾರನಿಗೆ ಇರುವ ಶಕ್ತಿ ಎಷ್ಟು ಎಂಬುದರ ಮೇಲೆ ಬೆಳಕು ಚೆಲ್ಲಿದೆ. ಲೇಖಕರು ಹೇಳಿರುವಂತೆ ಕಳೆದ ಐದು ವರ್ಷಗಳ ಕಾಲ ಅಧಿಕಾರ ನಡೆಸಿದವರು ಹಾಗೂ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತವರ ಕಾರ್ಯನಿರ್ವಹಣೆಯನ್ನು ಅತ್ಯಂತ ಎಚ್ಚರಿಕೆಯಿಂದ ಅಳೆಯುವ ಸಮಯವಿದು. ಹಾಗೆಯೇ ಅವರು ಹೇಳಿರುವಂತೆ ನಾವು ಚಲಾಯಿಸುವ ಹಕ್ಕು ನಮಗೆ ಮಾತ್ರ ಅನ್ವಯಿಸಿದ್ದಲ್ಲ. ಅದು ನಮ್ಮ ಮುಂದಿನ ತಲೆಮಾರಿಗೂ ಅನ್ವಯಿಸಿದ್ದಾಗಿದೆ. ಆದ್ದರಿಂದ ಪ್ರಜಾಪ್ರಭುತ್ವದ ಹಬ್ಬದ ಇಂತಹ ಸಂಭ್ರಮ ಸಡಗರದ ಹೊತ್ತಿನಲ್ಲಿ ಪ್ರಜೆಗಳೇ ಪ್ರಭುಗಳು ಎಂಬುದನ್ನು ನಾವು ಮರೆಯಬಾರದು. ನಮ್ಮ ಮತದಾನದ ಹಕ್ಕನ್ನು ತಪ್ಪದೇ ಚಲಾಯಿಸಬೇಕು.

**–ಚಂದ್ರಶೇಖರ್ ಸಿ. ಕೆ, ಚಿತ್ರದುರ್ಗ**

ಜಂಟಿ ಚುನಾವಣಾಧಿಕಾರಿ ವಿ. ರಾಘವೇಂದ್ರ ಅವರು ವಿದ್ಯುನ್ಮಾನ ಮತಯಂತ್ರವನ್ನು ಅಕ್ರಮವಾಗಿ ವ್ಯತ್ಯಸ್ತಗೊಳಿಸಲು ಸಾಧ್ಯವಿಲ್ಲ ಎಂಬ ವಿಷಯದಲ್ಲಿ ವಿಸ್ತಾರವಾಗಿ ಬರೆದಿರುವ ಲೇಖನ ತುಂಬಾ ಉಪಯುಕ್ತವಾಗಿದೆ. ವಿಧಾನಸಭಾ ಚುನಾವಣೆ ಮುಂಚಿತವಾಗಿ ಇಂತಹ ಲೇಖನ ನೀಡಿರುವುದು ಹೆಚ್ಚು ಸೂಕ್ತವೆನಿಸಿತು.


ವಿದ್ಯುನ್ಮಾನ ಮತಯಂತ್ರದ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದವರಿಗೆ ಭಾರತ ಚುನಾವಣಾ ಆಯೋಗವು 2009 ರಲ್ಲಿ ಅಕ್ರಮವಾಗಿ ವ್ಯತ್ಯಸ್ತಗೊಳಿಸುವ ಬಗ್ಗೆ ಪ್ರಾತ್ಯಕ್ಷಿಕೆ ನೀಡುವಂತೆ ಆಹ್ವಾನ ನೀಡಿದ್ದು, ಅದರಲ್ಲಿ ಯಾರಿಗೂ ವ್ಯತ್ಯಸ್ತಗೊಳಿಸುವ ಸಾಧ್ಯತೆಯನ್ನು ವಾಸ್ತವವಾಗಿ ಪ್ರಾತ್ಯಕ್ಷಿಕೆ ಮೂಲಕ ಸಾಬೀತು ಪಡಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ಕೂಡ ಅವರು ಲೇಖನದಲ್ಲಿ ಉಲ್ಲೇಖ ಮಾಡಿದ್ದಾರೆ.

ಮತಯಂತ್ರದ ಮೇಲೆ ನಂಬಿಕೆ ಇಲ್ಲದವರು ಈ ಲೇಖನವನ್ನು ಓದಿದರೆ ಸಾಕು ವಿದ್ಯುನ್ಮಾನ ಮತಯಂತ್ರವನ್ನು ಎಷ್ಟು ಸುರಕ್ಷಿತವಾಗಿ ವಿನ್ಯಾಸಗೊಳಿಸಲಾಗಿದೆ ಎಂಬುದು ತಿಳಿಯುತ್ತದೆ.

**–ಷಣ್ಮುಖಪ್ಪ, ಬಾಗಲಕೋಟೆ**

* * *

ಏಪ್ರಿಲ್ ಮೇ ತಿಂಗಳುಗಳಲ್ಲಿ ಸಾಲು ಸಾಲಾಗಿ ಪರೀಕ್ಷಾ ಫಲಿತಾಂಶಗಳು ಪ್ರಕಟವಾಗುತ್ತವೆ. ಮಕ್ಕಳು ಫಲಿತಾಂಶ ವೇಳೆಯಲ್ಲಿ ಆತಂಕಕ್ಕೆ ಒಳಗಾಗುತ್ತಾರೆ.




ಇಂತಹ ಸಮಯದಲ್ಲಿ ಗುರುಗಳು ಮತ್ತು ಪೋಷಕರು ಮಕ್ಕಳಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕು. ಇಂತಹ ಸಮಯದಲ್ಲಿ ವಾರ್ತಾ ಜನಪದ ಸಂಚಿಕೆಯಲ್ಲಿ ಡಾ. ಮೋಹನ್ ಕುಮಾರ್ ಆರ್ ಅವರು ಬರೆದಿರುವ 'ಪರೀಕ್ಷಾ ಫಲಿತಾಂಶ ಎದುರಿಸುವುದು ಹೇಗೆ' ಎಂಬ ಲೇಖನ ಹೆಚ್ಚು ಪ್ರಸ್ತುತವಾಗಿತ್ತು.

ಅವರು ಲೇಖನದಲ್ಲಿ ವಿದ್ಯಾರ್ಥಿಗಳಿಗೂ ಸಲಹೆಗಳನ್ನು ನೀಡುವ ಜೊತೆಗೆ ಪೋಷಕರು ಹಾಗೂ ಗುರುಗಳು ಫಲಿತಾಂಶ ಸಮಯದಲ್ಲಿ ಯಾವ ರೀತಿಯಲ್ಲಿ ಮಕ್ಕಳ ಆತಂಕವನ್ನು ದೂರ ಮಾಡಬೇಕು, ಅವರಲ್ಲಿ ಹೇಗೆ ಆತ್ಮವಿಶ್ವಾಸವನ್ನು ಹೆಚ್ಚಿಸಬೇಕು, ಹೇಗೆ ಧೈರ್ಯ ಹೇಳಬೇಕು ಎಂಬುದನ್ನು ತಿಳಿಸಿದ್ದಾರೆ. ಇದು ಉಪಯುಕ್ತ ಲೇಖನವಾಗಿದೆ.

**–ಸವಿತಾ ಕೃಷ್ಣರಾವ್, ಮಂಗಳೂರು**

* * *

ಪಕ್ಷಿಗಳ ಪ್ರೇಮಿ ಸಲ್ಲಾವುದ್ದೀನ್ ಅವರ ಕುರಿತು ಪ್ರಕಟವಾಗಿರವ ಲೇಖನ ಅತ್ಯಂತ ಮನಸೆಳೆಯಿತು. ಪಕ್ಷಿಗಳು ಮನೆಯಲ್ಲಿ ಗೂಡ ಕಟ್ಟಲು ಪ್ರಾರಂಭಿಸಿದರೆ ಮನೆ ಗಲೀಜಾಗುತ್ತದೆ ಎಂದು ಕೂಡನ್ನು ಕಿತ್ತು ಹಾಕುವ ಜನರೇ ಹೆಚ್ಚಿರುವ ಈಗಿನ ಕಾಲದಲ್ಲಿ ತಮ್ಮ ಮನೆಯಲ್ಲಿಯೇ ಪಕ್ಷಿಗಳಿಗೂ ಕೂಡ ಗೂಡು ನಿರ್ಮಿಸಿಕೊಟ್ಟು ಸಲಹುತ್ತಿರುವ ಸಲ್ಲಾವುದ್ದೀನ ಅವರಿಗೆ ನನ್ನದೊಂದು ಸಲಾಮ್.

ಪರಿಸರದ ಸಮತೋಲನವು ಸಕಲ ಜೀವರಾಶಿಗಳ ಮೇಲೂ ಪರಿಣಾಮವನ್ನುಂಟು ಮಾಡುತ್ತವೆ. ವಿಶೇಷವಾಗಿ ಪರಿಸರ ಸಮತೋಲನದಲ್ಲಿ ಪಕ್ಷಿಗಳು ಸಹ ಸಂಕಷ್ಟವನ್ನು ಅನುಭವಿಸುತ್ತವೆ. ಈ ನಿಟ್ಟಿನಲ್ಲಿ ಅವುಗಳ ಪಾಲನೆ ಮತ್ತು ಪೋಷಣೆ ಅಗತ್ಯವಾಗಿರುತ್ತದೆ. ಇಂತಹ ಸಮಯದಲ್ಲಿ ಸಲ್ಲಾವುದ್ದೀನ್ ಅವರು ಪ್ರಾಣಿ ಮತ್ತು ಪಕ್ಷಿಗಳ ರಕ್ಷಣೆಯಲ್ಲಿ ತೊಡಗಿರುವುದಲ್ಲದೆ ಅವರು ಗಾಯಗೊಂಡ ಪ್ರಾಣಿ–ಪಕ್ಷಿಗಳಿಗೂ ಚಿಕಿತ್ಸೆ ಕೊಡಿಸಿ ರಕ್ಷಣೆ ಮಾಡಿ ಮಾನವೀಯತೆ ಮೆರೆಯುತ್ತಿರುವುದು ನಿಜಕ್ಕೂ ಪ್ರಶಂಸನೀಯವಾದುದು.

**–ಆಶ್ರಯ್.ಬಿ.ಎಸ್, ಬೆಂಗಳೂರು**

ಏಪ್ರಿಲ್ 2023 ರ ವಾರ್ತಾ ಜನಪದ ಸಂಚಿಕೆಯು ಸಮಯೋಚಿತ ಮತ್ತು ಸಂದರ್ಭೋಚಿತ ಸಂಚಿಕೆಯಾಗಿ ಮೂಡಿ ಬಂದಿದೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ನಮ್ಮ ಭಾರತ ದೇಶವು ಅತ್ಯಂತ ಖ್ಯಾತಿ ಹೊಂದಿದ ದೇಶವಾಗಿದೆ. ಹಾಗಾಗಿ ಹದಿನೆಂಟು ವರ್ಷ ತುಂಬಿದ ಪ್ರತಿಯೊಬ್ಬರೂ ಯೋಗ್ಯ ಅಭ್ಯರ್ಥಿಗೆ ಮತದಾನ ಮಾಡಿ ಪ್ರಜಾತಂತ್ರವನ್ನು ಬಲಪಡಿಸಬೇಕಾಗಿದೆ. ಸಂಪಾದಕೀಯದಲ್ಲಿ ಡಾ.ಪಿ.ಎಸ್.ಹರ್ಷ ಅವರು ವಿಧಾನಸಭೆಗೆ ಜರುಗುವ ಮತದಾನದ ಸಮಯದಲ್ಲಿ ಸರ್ವರೂ ಮರೆಯದೆ ಮತದಾನ ಮಾಡಬೇಕೆಂದು ತಿಳಿಸಿದ್ದು ಯೋಗ್ಯವಾಗಿದೆ. ಪತ್ರಿಕೆಯ ಮುಖಪುಟವೂ ಸಹ ಮತದಾನಕ್ಕೆ ಪ್ರೇರಣೆ ನೀಡುವಂತಿತ್ತು.

**–ಬಸವರಾಜ ಹೂಗಾರ, ಇಲಕಲ್ಲ**

'ವಾರ್ತಾ ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ನಮ್ಮ ಭಾರತ ದೇಶವು ಇಡೀ ಜಗತ್ತಿನಲ್ಲಿ ಅತೀ ದೊಡ್ಡ ಪ್ರಜಾಪ್ರಭುತ್ವ ಹೊಂದಿರುವ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ರಚಿತವಾಗಿರುವ ಸರಕಾರವೇ ಪ್ರಜಾಪ್ರಭುತ್ವ ಸರ್ಕಾರ. ಪ್ರಜೆಗಳು ಒಬ್ಬ ವ್ಯಕ್ತಿಯನ್ನು ತಮ್ಮ ಪ್ರತಿನಿಧಿಯಾಗಿ ಚುನಾಯಿಸುತ್ತಾರೆ. ಬಹುಮತ ಪಡೆಯುವ ಪಕ್ಷವು ಸರ್ಕಾರವನ್ನು ರಚಿಸುತ್ತದೆ.

ಪ್ರಜಾಪ್ರಭುತ್ವ ಹೊಂದಿರುವ ದೇಶದಲ್ಲಿ ಪ್ರಜೆಗಳೇ ಪ್ರಭುಗಳು. ಹಾಗಾಗಿ ಭಾರತದ ಪ್ರಜೆಗಳಾದ ನಾವು ಮತದಾನ ಮಾಡುವ ಹಕ್ಕನ್ನು ಚಲಾಯಿಸಿದಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸಿ ಬೆಳೆಸಲು ಸಾಧ್ಯ ಎಂಬುದನ್ನು ಮರೆಯಬಾರದು. ಹಾಗೆಯೇ ಯಾವುದೇ ಆಮಿಷಗಳಿಗೆ ಒಳಗಾಗದೇ ನಮ್ಮ ಮತದಾನದ ಹಕ್ಕನ್ನು ಯೋಗ್ಯ ವ್ಯಕ್ತಿಗೆ ನೀಡುವುದು ಅಷ್ಟೇ ಮುಖ್ಯ. ಮತದಾನ ಮಾಡುವ ಜೊತೆಗೆ ಚುನಾವಣಾ ಅಕ್ರಮಗಳನ್ನು ತಡೆಯುವ ನಿಟ್ಟಿನಲ್ಲಿ ಕೂಡ ನಾವು ಚುನಾವಣಾ ಆಯೋಗದೊಂದಿಗೆ ಸಹಕರಿಸಬೇಕು.

ಚುನಾವಣಾ ಆಯೋಗವು ಮುಕ, ನಿಷ್ಪಕ್ಷಪಾತ ಮತ್ತು ನ್ಯಾಯ ಸಮ್ಮತ ಚುನಾವಣೆ ನಡೆಸುವ ಸಲುವಾಗಿ ಸಾರ್ವಜನಿಕರನ್ನು ಸಹಭಾಗಿಗಳಾಗಿಸಿಕೊಳ್ಳಲು ಸಿ–ವಿಜಿಲ್ ಎಂಬ ಮೊಬೈಲ್ ಅಪ್ಲಿಕೇಷನ್ ಅನ್ನು ನೀಡಿದೆ. ಈ ಆ್ಯಪ್ ಮೂಲಕ ಸಾರ್ವಜನಿಕರು ತಮ್ಮ ಸುತ್ತಮುತ್ತ ಕಂಡುಬರುವ ಚುನಾವಣಾ ಅಕ್ರಮಗಳು ಮತ್ತು ಚುನಾವಣಾ ನೀತಿ ಸಂಹಿತೆ ಉಲ್ಲಂಘನಾ ಪ್ರಕರಣಗಳ ನೇರವಾಗಿ ದೂರು ನೀಡಬಹುದು. ಆಯೋಗವು ದೂರುದಾರರ ಹೆಸರನ್ನು ಗೌಪ್ಯವಾಗಿ ಇಡಲಿದೆ. ಹಾಗಾಗಿ ಪ್ರಜ್ಞಾವಂತ ಪ್ರಜೆಗಳಾದವರು ಚುನಾವಣಾ ಅಕ್ರಮಗಳ ತಡೆಗೆ ಕೂಡ ಮುಂದಾಗಬೇಕು.

ಮತಗಟ್ಟೆಗೆ ಬಂದು ಮತದಾನ ಮಾಡಲು ಕಷ್ಟವಾಗಬಹುದು ಎಂಬ ಕಾರಣಕ್ಕೆ ಈ ಬಾರಿ ಚುನಾವಣಾ ಆಯೋಗವು 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಮನೆಯಲ್ಲಿಯೇ ಮತದಾನ ಮಾಡಲು ಅವಕಾಶವನ್ನು ಒದಗಿಸಿದೆ.

ಹಾಗೆಯೇ ತಮ್ಮ ಬಳಿ ಮತದಾನದ ಗುರುತಿನ ಚೀಟಿ ಇಲ್ಲ ಎಂಬ ಕಾರಣಕ್ಕೆ ಬಹಳಷ್ಟು ಜನರು ಮತದಾನ ಮಾಡದಿರುವುದರಿಂದ ಚುನಾವಣಾ ಆಯೋಗವು ಮತದಾರರ ಪಟ್ಟಿಯಲ್ಲಿ ಹೆಸರಿದ್ದವರಿಗೆ ಭಾವಚಿತ್ರವುಳ್ಳ ಇತರೆ ಗುರುತಿನ ಚೀಟಿಯನ್ನು ತೋರಿಸಿ ಮತದಾನ ಮಾಡಲು ಅವಕಾಶವನ್ನು ಕಲ್ಪಿಸಿದೆ. ಅಲ್ಲದೆ, ಚುನಾವಣಾ ಆಯೋಗದ ಜಾಲತಾಣದಲ್ಲಿ ಮತದಾರನ ಮತಗಟ್ಟೆ ಯಾವುದು, ಎಪಿಕ್ ಸಂಖ್ಯೆ, ಸರಣಿ ಸಂಖ್ಯೆ, ಇವೇ ಮುಂತಾದ ಎಲ್ಲಾ ಮಾಹಿತಿಯನ್ನು ಒದಗಿಸಲಾಗಿದೆ.

**'ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ' (Nothing like voting, I vote for sure)** ಎಂಬ ಘೋಷವಾಕ್ಯದೊಂದಿಗೆ ಮುಖ್ಯ ಚುನಾವಣಾ ಕಚೇರಿಯು ರಾಜ್ಯದಾದ್ಯಂತ ಮತದಾರರಲ್ಲಿ ಮತದಾನ ಮತ್ತು ಚುನಾವಣೆ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸುತ್ತಿದೆ.

ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಈ ಸಂಚಿಕೆಯಲ್ಲಿ ಕೂಡಾ ಬಹುಪಾಲು ಚುನಾವಣೆಗೆ ಸಂಬಂಧಿಸಿದಂತಹ ಲೇಖನಗಳಿಗೇ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿದೆ.

ಒಟ್ಟಿನಲ್ಲಿ ಮೇ 10 ರಂದು ನಮ್ಮ ರಾಜ್ಯದಲ್ಲಿ ನಡೆಯಲಿರುವ ಪ್ರಜಾಪ್ರಭುತ್ವದ ಹಬ್ಬಕ್ಕೆ ಸಕಲ ಸಿದ್ಧತೆಗಳು ನಡೆದಿದೆ. ಐದು ವರ್ಷಗಳಿಗೊಮ್ಮೆ ಬರುವ ಈ ಪ್ರಜಾಪ್ರಭುತ್ವ ಹಬ್ಬದಲ್ಲಿ ನಾವು ನೀವೆಲ್ಲರೂ ಭಾಗಿಯಾಗುವ ಮೂಲಕ ಸದೃಢ, ಸುಸ್ಥಿರ ಹಾಗೂ ಉತ್ತಮ ಆಡಳಿತ ನೀಡುವ ಸರ್ಕಾರವನ್ನು ರಚಿಸೋಣಾ.

**ಓದುಗರೆಲ್ಲರಿಗೂ ಕಾರ್ಮಿಕ ದಿನಾಚರಣೆಯ ಶುಭಾಶಯಗಳು**

**ಡಿ. ಪಿ. ಮುರಳೀಧರ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com




# ಬಂದಿದೆ ಪ್ರಜಾಪ್ರಭುತ್ವದ ಹಬ್ಬ
# ಪ್ರಬುದ್ಧ ಪ್ರಭುತ್ವ ಸ್ಥಾಪನೆಗಿದು ಸಕಾಲ

ಚಂದ್ರಮುಖಿ

ಐದು ವರ್ಷಕ್ಕೊಮ್ಮೆ ನಡೆಯುವ ಕರ್ನಾಟಕದ ಮಹಾಹಬ್ಬಕ್ಕೆ ದಿನಾಂಕ ನಿಗದಿಯಾಗಿದೆ. ಇದು ಪ್ರಜಾಪ್ರಭುತ್ವದ ಹಬ್ಬ. ಇದಕ್ಕೆ ತೋರಣ ಕಟ್ಟುವ ಕೈಂಕರ್ಯದಲ್ಲಿ ನಾಡಿನ ಜನತೆ ತೊಡಗಿಕೊಂಡಿದ್ದಾಗಿದೆ. ಈ ಹಬ್ಬಕ್ಕೆ ನಿಗದಿಯಾಗಿರುವ ದಿನಾಂಕ ಮೇ 10 ಬುಧವಾರ. ಇದಕ್ಕೆ ದಿನಾಂಕವನ್ನು ಪ್ರಕಟಿಸಿದವರು ಕೇಂದ್ರ ಚುನಾವಣಾ ಆಯೋಗ.

ಇಡೀ ವಿಶ್ವದಲ್ಲಿಯೇ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಅತ್ಯುನ್ನತ ಸ್ಥಾನದಲ್ಲಿರುವ ಭಾರತದ ಒಕ್ಕೂಟ ವ್ಯವಸ್ಥೆಯ ಒಂದು ಭಾಗವಾಗಿರುವ ಕರ್ನಾಟಕ ಈಗ ಈ ಹಬ್ಬದ ಸಂಭ್ರಮದಲ್ಲಿದೆ. ಇಂತಹುದೊಂದು ವಿಶೇಷ ಹಬ್ಬದಲ್ಲಿ ರಾಜ್ಯದ ಜನತೆ ಸಂಪೂರ್ಣವಾಗಿ ಭಾಗಿಯಾಗಬೇಕು ಎಂಬುದು ಇದರ ಜವಾಬ್ದಾರಿಯನ್ನು ಹೊತ್ತಿರುವ ಚುನಾವಣಾ ಆಯೋಗಕ್ಕೆ ಇರುವ ಕಾಳಜಿ. ಈ ಕಳಕಳಿಯಿಂದಲೇ ಅದು ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದೆ. 'ಹಬ್ಬ'ದಲ್ಲಿ ಭಾಗವಹಿಸುವ ಅರ್ಹತೆಯನ್ನು ಪಡೆದಿರುವ ಯಾರೊಬ್ಬರೂ ಅದರಿಂದ ವಿಮುಖರಾಗಬಾರದು ಎಂಬ ಕಾರಣಕ್ಕೆ ಅನೇಕ ಕಾರ್ಯತಂತ್ರಗಳನ್ನೂ ಅದು ರೂಪಿಸಿದೆ.

ಈ ಹಬ್ಬದ ಬಹುಮುಖ್ಯ ಭಾಗ 'ಮತದಾನ'. ಅದು ನಡೆಯುವುದು ಮೇ 10ರಂದು. ಬೆಳಗಿನಿಂದ ಸಂಜೆಯ ತನಕ ನಡೆಯುವ ಜನರ ಹಕ್ಕಿನ ಚಲಾವಣೆಗೆ ಅಪಾರ ಮಹತ್ವ.

ಪ್ರಜೆಗಳಿಗಿರುವ ಅತ್ಯುನ್ನತವಾದ ಅಧಿಕಾರವನ್ನು ಚಲಾಯಿಸಲು ಬೇಕಾದ ಎಲ್ಲ ಸಿದ್ಧತೆಗಳೂ ಪೂರ್ಣಗೊಂಡಿವೆ. ವಾರದ ಮಧ್ಯಭಾಗದಲ್ಲಿ ಮತದಾನದ ದಿನಾಂಕ ನಿಗದಿ. ಅಂಚೆ ಮತದಾನಕ್ಕೆ ಅವಕಾಶ. ಬುಡಕಟ್ಟು ಜನಾಂಗದವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಹೆಚ್ಚು ಮತಗಟ್ಟೆಗಳ ನಿರ್ಮಾಣ. ವಿಶೇಷ ಚೇತನರಿಗೆ ಮನೆಯಿಂದಲೇ ಮತದಾನ ಮಾಡಲು ಅವಕಾಶ. ಯುವಕರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಮತಗಟ್ಟೆಗಳು...


Downloaded From:www.kpscvaani.com

ಇದು ಚುನಾವಣಾ ಆಯೋಗ ಕೈಗೊಂಡಿರುವ ಅನೇಕ ವಿನೂತ ಕ್ರಮಗಳಲ್ಲಿ ಕೆಲವು. ರಾಜ್ಯದಲ್ಲಿ ಸುಭದ್ರವಾದ 'ಪ್ರಭುತ್ವ'ವನ್ನು ಸ್ಥಾಪಿಸಲು ಬೇಕಾದ ಎಲ್ಲ ವ್ಯವಸ್ಥೆಗಳನ್ನು ಸ್ವಾಯತ್ತ ಸಂಸ್ಥೆಯಾದ ಚುನಾವಣಾ ಆಯೋಗ ಮಾಡಿದೆ. ಇಂತಹ ಅತ್ಯುತ್ತಮ ಅವಕಾಶವನ್ನು ಪ್ರಜೆಗಳು ಬಳಸಿಕೊಳ್ಳಬೇಕು. ಆ ಮೂಲಕ ಮತದಾನದ ಪ್ರಮಾಣ ಕೂಡ ಹೆಚ್ಚಾಗಬೇಕು. ಪ್ರಜೆಗಳು ತಮ್ಮ ಹಕ್ಕು ಚಲಾಯಿಸುವ ವಿಷಯದಲ್ಲಿ ಅಸಡ್ಡೆ ತೋರಬಾರದು, ಅದು ಆದ್ಯತೆಯ ಕೆಲಸವಾಗಬೇಕು ಈ ಎಲ್ಲ ಸಿದ್ಧತೆಗಳ ಹಿಂದಿರುವ ಉದ್ದೇಶ.

ಚುನಾವಣೆ ದಿನಾಂಕಗಳನ್ನು ಪ್ರಕಟಿಸಿದ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತರಾದ ರಾಜೀವ್ ಅವರು ಹೇಳಿದ ಒಂದು ಮಾತು ವಿಶೇಷವಾಗಿತ್ತು; "ಮತದಾನ ಮಾಡುವ ದಿನಾಂಕವನ್ನು ಸೋಮವಾರ ಅಥವಾ ಶುಕ್ರವಾರಕ್ಕೆ ನಿಗದಿಗೊಳಿಸಿದರೆ ಮತದಾನದಂತಹ ಅಮೂಲ್ಯ ಕೆಲಸಗಳನ್ನು ಬಿಟ್ಟು ನಗರ ಪ್ರದೇಶದ ಜನ ಕುಟುಂಬ ಸಮೇತ ಪ್ರವಾಸ ಹೊರಟು ಬಿಡುತ್ತಾರೆ. ಇದರಿಂದಾಗಿ ಮತದಾನದ ಪ್ರಮಾಣ ಕಡಿಮೆಯಾಗುತ್ತದೆ. ಅವೆಲ್ಲವನ್ನೂ ಮನಸ್ಸಿನಲ್ಲಿ ಇಟ್ಟುಕೊಂಡೇ ಈ ಬಾರಿ ವಾರದ ಮಧ್ಯಭಾಗವಾದ ಬುಧವಾರ ಮತದಾನದ ದಿನಾಂಕವನ್ನು ನಿಗದಿ ಮಾಡಿದ್ದೇವೆ."



ಈ ಎಲ್ಲ ಕಾರಣಗಳಿಂದಲೇ ಆಯೋಗ ಇಡೀ ಪ್ರಕ್ರಿಯೆಗೆ 'ಪ್ರಜಾಪ್ರಭುತ್ವದ ಹಬ್ಬ' ಎಂದೇ ಕರೆದಿದೆ. ಈ ಹಬ್ಬದಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಂಡರೆ ಮಾತ್ರ ಆಯೋಗದ ಉದ್ದೇಶ ಸಾಕಾರಗೊಳ್ಳಲು, ಅದರ ಮೌಲ್ಯ ಹೆಚ್ಚಾಗಲು ಸಾಧ್ಯ. ಮತದಾರರ ಒಗ್ಗಟ್ಟಿನ ನಿರ್ಧಾರವೇ ಗಟ್ಟಿ ಸರ್ಕಾರ ರಚನೆಗೆ ಅಡಿಪಾಯ. ದಿನಾಂಕವನ್ನು ನಿಗದಿ ಮಾಡುವ ಮೊದಲ ಕೆಲಸದಲ್ಲಿಯೇ ಆಯೋಗವು ಈ ರೀತಿಯ ಮುಂದಾಲೋಚನೆಯನ್ನು ಕೈಗೊಂಡಿದೆ. ಇದು ಮತದಾರರನ್ನು ಉತ್ತೇಜಿಸುವ ಕೆಲಸ. ಇದನ್ನು ಅಕ್ಷರಶಃ ಜಾರಿಗೆ ತರುವ ಹೊಣೆ ಜನರ ಮೇಲಿದೆ ಎಂಬುದು ಸತ್ಯ.

ನಗರ ಪ್ರದೇಶದ ಜನ ಮತದಾನದ ದಿನವೇ ಕರ್ತವ್ಯದಿಂದ ವಿಮುಖರಾಗುತ್ತಿರುವುದು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಹಿಮಾಚಲ ಪ್ರದೇಶ, ಗುಜರಾತ್ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿಯೂ ಕಡಿಮೆ ಪ್ರಮಾಣದ ಮತದಾನವಾಗಿದೆ. 2019ರಲ್ಲಿ ಲೋಕಸಭೆ ಚುನಾವಣೆ ನಡೆದಾಗಲೂ ಇದೇ ಟ್ರೆಂಡ್ ಇತ್ತು. ಪ್ರಜೆಗಳ ಹಕ್ಕಿನ ವಿಚಾರದಲ್ಲಿ ನಗರ ಪ್ರದೇಶದ ಅಕ್ಷರಸ್ಥರಿಗಿಂತ ಗ್ರಾಮೀಣ ಪ್ರದೇಶದ ಅನಕ್ಷರಸ್ಥರೇ ಮೇಲು ಎಂಬುದು ಪರಿಸ್ಥಿತಿಯ ವ್ಯಂಗ್ಯ. ಬುಡಕಟ್ಟು ಜನಾಂಗದವರು, ದುರ್ಬಲ ವರ್ಗದವರು ವಾಸಿಸುತ್ತಿರುವ ಪ್ರದೇಶಗಳಿಗೆ ಮತದಾನ ಮಾಡಲು ಸೂಕ್ತ ವ್ಯವಸ್ಥೆಯನ್ನು ಕೈಗೊಂಡರೆ ಅವರು ಸಹಜವಾಗಿ ತಮ್ಮ ಹಕ್ಕುಗಳನ್ನು ಚಲಾಯಿಸುವಲ್ಲಿ ಹಿಂಜರಿಯುವುದಿಲ್ಲ. ಆ ಹಿನ್ನೆಲೆಯಲ್ಲಿಯೇ ಆಯೋಗವು ಕರ್ನಾಟಕದಲ್ಲಿ ಇಂಥವರಿಗಾಗಿಯೇ 40 ಎಥ್ನಿಕ್ ಪೋಲಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಮುಂದಾಗಿರುವುದು ಶ್ಲಾಘನೀಯ ಕೆಲಸ.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿರುವ ಇದು ಹದಿನೈದನೇ ವಿಧಾನಸಭೆ. 224 ಸ್ಥಾನಗಳನ್ನು ಹೊಂದಿರುವ ಇದರ ಅವಧಿಯು ಮೇ 23ರಂದು ಮುಕ್ತಾಯಗೊಳ್ಳುತ್ತದೆ. ಅಷ್ಟರೊಳಗೆ ಹದಿನಾರನೇ ವಿಧಾನಸಭೆ ರಚನೆ ಪೂರ್ಣಗೊಳ್ಳಬೇಕು. ಆ ಹಿನ್ನೆಲೆಯಲ್ಲಿಯೇ ಮೇ 10ರಂದು ಮತದಾನ ನಡೆದು



## ಭವಿಷ್ಯ ನುಡಿಯಲಿರುವ ಪಂಚ ಕೋಟಿ ಮತದಾರರು

ರಾಜ್ಯದಲ್ಲಿ ಮತದಾರರ ಪಟ್ಟಿಯ ಅಂತಿಮ ಪ್ರಕಟಣೆಯನ್ನು 2023ರ ಜನವರಿ ಐದರಂದು ಮಾಡಲಾಗಿದೆ. ಅದರಂತೆ ರಾಜ್ಯದಲ್ಲಿ ಇರುವ ಅರ್ಹ ಮತದಾರರ ಸಂಖ್ಯೆ 5,24,11,577. ಈ ಬಾರಿ 18 ವರ್ಷ ತುಂಬಿದ ಮೊದಲ ಬಾರಿ ಮತ ಚಲಾಯಿಸುವ ಅರ್ಹತೆಯನ್ನು ಪಡೆದ ಯುವಜನತೆಯ ಸಂಖ್ಯೆ 9,58,806. ಅಂದರೆ ಈ ಬಾರಿ ಐದು ಕೋಟಿಗೂ ಹೆಚ್ಚು ಸಂಖ್ಯೆಯ ಜನ ರಾಜ್ಯದ ಭವಿಷ್ಯ ಬರೆಯಲಿದ್ದಾರೆ.



Downloaded From:www.kpscvaani.com

## ಗುರುತಿಗೆ ಹೀಗೆ ಮಾಡಿ

ಮತ ಚಲಾಯಿಸಲೆಂದು ಮತದಾನ ಕೇಂದ್ರಕ್ಕೆ ತೆರಳಿದಾಗ ಮತದಾರರನ್ನು ಗುರುತಿಸಲು ಎಪಿಕ್ ಈ ಕೆಳಗಿನ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಹೊಂದಿದ್ದರೆ ಸಾಕು ಎಂದು ಚುನಾವಣಾ ಆಯೋಗ ತಿಳಿಸಿದೆ:

ಆಧಾರ್ ಕಾರ್ಡ್, ಎಂನರೇಗಾ ಉದ್ಯೋಗ ಕಾರ್ಡ್, ಬ್ಯಾಂಕ್, ಪೋಸ್ಟ್ ಆಫೀಸ್ ನೀಡಿದ ಭಾವಚಿತ್ರವಿರುವ ಪಾಸ್‌ಬುಕ್, ಕಾರ್ಮಿಕ ಸಚಿವಾಲಯ ನೀಡಿದ ಆರೋಗ್ಯ ವಿಮಾ ಸ್ಮಾರ್ಟ್ ಕಾರ್ಡ್, ಚಾಲನಾ ಪರವಾನಗಿ, ಪ್ಯಾನ್ ಕಾರ್ಡ್, ಆರ್‌ಜಿಐ ನೀಡಿದ ಸ್ಮಾರ್ಟ್ ಕಾರ್ಡ್. ಭಾರತದ ಪಾಸ್‌ಪೋರ್ಟ್, ಭಾವಚಿತ್ರವಿರುವ ಪಿಂಚಣಿ ದಾಖಲೆ, ವಿಶಿಷ್ಟ ವಿಕಲಚೇತನ ಐಡಿ ಕಾರ್ಡ್, ಸಂಸದರು, ಶಾಸಕರಿಗೆ ನೀಡಲಾದ ಅಧಿಕೃತ ಗುರುತಿನ ಚೀಟಿ, ಕೇಂದ್ರ, ರಾಜ್ಯ, ಪಿಎಸ್‌ಯು, ಸಾರ್ವಜನಿಕ ವಲಯದ ಕಂಪೆನಿಗಳು ಉದ್ಯೋಗಿಗಳಿಗೆ ನೀಡಿದ ಭಾವಚಿತ್ರ ಸಹಿತ ಗುರುತಿನ ಚೀಟಿ.

13ರಂದು ಫಲಿತಾಂಶ ಪ್ರಕಟವಾಗಲಿದೆ. ರಾಜ್ಯದ ಅಷ್ಟೂ ವಿಧಾನಸಭೆ ಕ್ಷೇತ್ರಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಯುತ್ತದೆ.

ಮತದಾನ ಪ್ರಕ್ರಿಯೆಯನ್ನು ಒಟ್ಟಾರೆಯಾಗಿ ಜನಸ್ನೇಹಿ ವಾತಾವರಣದಲ್ಲಿ ನಡೆಸಲು ಚುನಾವಣಾ ಆಯೋಗ ಹೆಚ್ಚಿನ ಆದ್ಯತೆ ನೀಡಿದೆ. ಅಂಗವಿಕಲ ವ್ಯಕ್ತಿಗಳು ಮತ್ತು ಹಿರಿಯ ನಾಗರಿಕರಿಗೆ ಅನುಕೂಲವಾದ ಮೂಲ ಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಅವರಿಗಾಗಿ ರ್‍ಯಾಂಪ್‌ಗಳನ್ನು ನಿರ್ಮಿಸುವ, ಅಗತ್ಯವೆನಿಸಿದರೆ ಗಾಲಿ ಕುರ್ಚಿಗಳನ್ನು ಒದಗಿಸಲು ಸೂಚನೆ ನೀಡಲಾಗಿದೆ. ಯಾವುದೇ ಅಹಿತಕರ ಘಟನೆಗಳನ್ನು ತಪ್ಪಿಸಲು ಪ್ರತ್ಯೇಕ ಪ್ರವೇಶ ಮತ್ತು ನಿರ್ಗಮನ ವ್ಯವಸ್ಥೆಯನ್ನು ಮಾಡಲಾಗಿದೆ.

ಪ್ರತಿ ಜಿಲ್ಲೆಯಲ್ಲಿ ಒಂದು ಮಾದರಿ ಮತಗಟ್ಟೆಯನ್ನು ಸ್ಥಾಪಿಸಲು ಯೋಜಿಸಲಾಗಿದೆ. ಇದರ ವಿಶೇಷತೆ ಏನೆಂದರೆ ಪರಿಸರ ಸ್ನೇಹಿ ವಸ್ತುಗಳನ್ನು ಬಳಸುವುದು ಮತ್ತು ಸ್ಥಳೀಯ ಸಂಸ್ಕೃತಿ ಮತ್ತು ಕಲೆಯನ್ನು ಮತಗಟ್ಟೆಯಲ್ಲಿ ಪ್ರದರ್ಶಿಸುವುದು. ಆ ಮೂಲಕ ಮತದಾರರು ಮತಗಟ್ಟೆಯ ಕಡೆಗೆ ಹರಿದು ಬಂದು ತಮ್ಮ ಹಕ್ಕನ್ನು ಚಲಾಯಿಸಲಿ ಎಂಬುದು ಆಯೋಗದ ಆಶಯ. ಮತದಾನದಲ್ಲಿ ಮಹಿಳೆಯರು ಮತ್ತು ವಿಕಲಚೇತನರು ಸಕ್ರಿಯವಾಗಿ ಭಾಗಿಯಾಗಬೇಕು ಎಂಬ ಉದ್ದೇಶದಿಂದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ ಒಂದು ವಿಶೇಷ ಮತದಾನ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ. ಇಲ್ಲಿ ಪೊಲೀಸ್, ಚುನಾವಣಾ ಸಿಬ್ಬಂದಿ ಸೇರಿದಂತೆ ಎಲ್ಲರೂ ಮಹಿಳೆಯರೇ ಆಗಿರುತ್ತಾರೆ. ಇದಕ್ಕೆ ಆಯೋಗ ವಿಶೇಷ ಮುತುವರ್ಜಿಯಿಂದ ಕೆಲಸ ಮಾಡುತ್ತಿದೆ.

ವಿಶೇಷಚೇತನರು, ಹಿರಿಯ ನಾಗರಿಕರು ಮತ್ತು ಕೋವಿಡ್ ಪೀಡಿತ ವ್ಯಕ್ತಿಗಳು ಅಂಚೆ ಮತಪತ್ರದ ಮೂಲಕ ಮತದಾನ ಮಾಡಲು ಅವಕಾಶ ಕಲ್ಪಿಸಿರುವುದು ವಿಶೇಷ. ಅದಕ್ಕಾಗಿ ಮಾರ್ಗಸೂಚಿಗಳನ್ನು ಚುನಾವಣಾ ಆಯೋಗ ಹೊರಡಿಸಿದೆ. ಅದರಂತೆ ಕ್ಷೇತ್ರ ಚುನಾವಣಾ ಅಧಿಕಾರಿಗೆ ನಮೂನೆ-12ರ ಮೂಲಕ ಅರ್ಜಿ ಸಲ್ಲಿಸಬೇಕು. ಈ ಅರ್ಜಿಯು ಚುನಾವಣೆ ಅಧಿಸೂಚನೆ ಹೊರಡಿಸಿದ ದಿನಾಂಕದ ನಂತರ ಐದು ದಿನಗಳ ಅವಧಿಯಲ್ಲಿ ಅಧಿಕಾರಿಗೆ ತಲುಪಿಸಬೇಕು. ಈ ಅರ್ಜಿಗಳ ವಿತರಣೆ ಮತ್ತು ಸಂಗ್ರಹ ಮಾಡಲೂ ಆಯೋಗ ವ್ಯವಸ್ಥೆ ಮಾಡಿದೆ. ಸೆಕ್ಟರ್ ಅಧಿಕಾರಿಗೆ ಆ ಜವಾಬ್ದಾರಿಯನ್ನು ವಹಿಸಲಾಗಿದೆ.

ಮತದಾನ ಪ್ರಕ್ರಿಯೆಯು ತ್ರಾಸದಾಯಕವಾಗದೇ ಇರಲಿ, ನಾಗರಿಕರಿಗೆ ಎಲ್ಲ ಸೌಕರ್ಯಗಳೂ ಸುಲಭವಾಗಿ ಸಿಗಲಿ ಎಂಬ ಕಾರಣಕ್ಕೆ ಈ ಎಲ್ಲ ವ್ಯವಸ್ಥೆಗಳನ್ನು ಚುನಾವಣಾ ಆಯೋಗ ಕೈಗೊಂಡಿದೆ. ಪ್ರತಿ ಮತಗಟ್ಟೆಯೂ ನೆಲಮಹಡಿಯಲ್ಲಿಯೇ ಇರಬೇಕು, ಮತದಾನ ಕೇಂದ್ರಕ್ಕೆ ತೆರಳಲು ಉತ್ತಮ ರಸ್ತೆ ಇರಬೇಕು, ಕುಡಿಯುವ ನೀರು, ಸಾಲಿನಲ್ಲಿ ಕಾದು ನಿಲ್ಲಲು ನೆರಳಿನ ವ್ಯವಸ್ಥೆ, ಶೌಚಾಲಯ, ಬೆಳಕಿನ ವ್ಯವಸ್ಥೆ ಕೈಗೊಳ್ಳಲು ಸೂಚನೆ ನೀಡಲಾಗಿದೆ. 2018ರಲ್ಲಿ ವಿಧಾನಸಭೆ ಚುನಾವಣೆ ನಡೆದಾಗ ರಾಜ್ಯದಲ್ಲಿ ಸ್ಥಾಪಿಸಲಾದ ಮತಕೇಂದ್ರಗಳ ಸಂಖ್ಯೆ 58008. ಈಗ ಅದನ್ನು 58282ಕ್ಕೆ ಏರಿಸಲಾಗಿದೆ.

ಬಹಳಷ್ಟು ಮತದಾರರಿಗೆ ಮತಗಟ್ಟೆ ಎಲ್ಲಿದೆ, ಎಪಿಕ್ ಸಂಖ್ಯೆ ಯಾವುದು, ಸರಣಿ ಸಂಖ್ಯೆ ಏನು ಮುಂತಾದ ವಿಚಾರಗಳು ತಿಳಿದಿರುವುದಿಲ್ಲ. ಇವೆಲ್ಲವನ್ನೂ ಚುನಾವಣಾ ಆಯೋಗದ ವೆಬ್ ತಾಣದ ಮೂಲಕ ಪಡೆಯಲು ಅವಕಾಶವಿದೆ. ಆದರೂ 'ಮತದಾರರ ಮಾಹಿತಿ ಚೀಟಿ'ಯನ್ನು ನೀಡಲಾಗುತ್ತದೆ. ಇದರಲ್ಲಿ ಸರಣಿ ಸಂಖ್ಯೆ, ಮತದಾನ ದಿನಾಂಕ, ಸಮಯ, ಮತಗಟ್ಟೆ ಇರುವ ತಾಣ ಇತ್ಯಾದಿ ವಿವರಗಳು ಲಭ್ಯ. ಮತದಾರರ ಭಾವಚಿತ್ರ ರಹಿತವಾದ ಈ ಸ್ಲಿಪ್‌ನಲ್ಲಿ 'ವೋಟರ್ ಇನ್ಫರ್ಮೇಷನ್ ಕ್ಯೂಆರ್ ಕೋಡ್' ಒಳಗೊಂಡಿರುತ್ತದೆ, ಈ ಮಾಹಿತಿ ಚೀಟಿಯನ್ನು ಕನಿಷ್ಠ ಐದು ದಿನಗಳಿಗೆ ಮೊದಲು ಜಿಲ್ಲಾ ಚುನಾವಣಾ ಅಧಿಕಾರಿಯಿಂದ ನೋಂದಣಿಯಾದ ಎಲ್ಲ ಮತದಾರರಿಗೆ ವಿತರಿಸುವ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಹಿರಿಯ ನಾಗರಿಕರು ಮತ್ತು ವಿಕಲಚೇತನರಿಗೆ ಸೂಕ್ತವಾದ ಸಾರಿಗೆ ಸೌಲಭ್ಯ ಕಲ್ಪಿಸಲೂ ಸೂಚಿಸಲಾಗಿದೆ. Saksham- ECIನಲ್ಲಿ ಅರ್ಜಿ ಸಲ್ಲಿಸುವ ಮೂಲಕ ಗಾಲಿಕುರ್ಚಿ ವ್ಯವಸ್ಥೆ ಮಾಡುವಂತೆಯೂ ಮನವಿ ಮಾಡಿಕೊಳ್ಳಬಹುದು. ದೃಷ್ಟಿ ವಿಕಲಚೇತನರು ಒಬ್ಬರು ಸಹಚರರನ್ನು ಕರೆದುಕೊಂಡು ಹೋಗಲು ಅವಕಾಶವಿದೆ. ಇವರಿಗಾಗಿ ಬ್ರೈಲ್ ಲಿಪಿಯ ಡಮ್ಮಿ ಬ್ಯಾಲೆಟ್‌ಶೀಟ್‌ಗಳ ವ್ಯವಸ್ಥೆಯನ್ನೂ ಮತದಾನ ಕೇಂದ್ರದಲ್ಲಿ ಮಾಡಲಾಗಿದೆ.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮತದಾನಕ್ಕಿಂತ ಪವಿತ್ರವಾದ ಮತ್ತು ಮುಖ್ಯವಾದ ಕೆಲಸ ಇನ್ನೊಂದಿಲ್ಲ. ಅದನ್ನು ಪ್ರಜ್ಞಾವಂತಿಕೆಯಿಂದ, ಪ್ರಬುದ್ಧತೆಯಿಂದ ನಿರ್ವಹಿಸಿದರೆ ಅಷ್ಟೇ ಪ್ರಬುದ್ಧವಾದ ಪ್ರಭುತ್ವ ನಮಗೆ ಲಭ್ಯವಾಗುತ್ತದೆ. ಪ್ರಭುತ್ವವನ್ನು ಸ್ಥಾಪಿಸುವ 'ಪ್ರಜಾಪ್ರಭುತ್ವದ ಹಬ್ಬ'ದಲ್ಲಿ ನಮ್ಮ ಹೊಣೆ ಯಾವ ಆಮಿಷಕ್ಕೂ ಒಳಗಾಗದೇ ಸ್ವಸ್ಥ ಮನಸ್ಸಿನಿಂದ ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು. ನಿಮ್ಮ ಬೆರಳ ತುದಿಗೆ ಆ ಅದಮ್ಯ ಶಕ್ತಿ ಬರಲಿ. ■



Downloaded From:www.kpscvaani.com



# ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ

## ಚುನಾವಣೆ ಅತಿಮುಖ್ಯ ಘಟ್ಟ

ಸಂವಿಧಾನದ ನೀತಿ ನಿಯಮಗಳಿಗೆ ಅನುಸಾರವಾಗಿ ದೇಶ ಮತ್ತು ರಾಜ್ಯವನ್ನಾಳಲು ಸೂಕ್ತ ಪ್ರತಿನಿಧಿಗಳನ್ನು ಐದು ವರ್ಷಗಳಿಗೊಮ್ಮೆ ಆಯ್ಕೆ ಮಾಡುವ ಪ್ರಕ್ರಿಯೆಯೇ ಚುನಾವಣೆ. ಪ್ರಜಾಪ್ರಭುತ್ವದ ಯಶಸ್ಸಿಗೆ ಬುನಾದಿಯಾಗಿರುವ ಈ ಪ್ರಕ್ರಿಯೆಯಲ್ಲಿ ಮತದಾರರು ಪಾಲ್ಗೊಂಡು ತಪ್ಪದೇ ಮತ ಚಲಾಯಿಸುವುದು ಅತ್ಯವಶ್ಯ.

ಡಾ. ಆರ್.ಶಂಕರಪ್ಪ

ಭಾರತದಲ್ಲಿ ಸ್ವಾತಂತ್ರ್ಯದ ನಂತರ ಜಾರಿಗೆ ಬಂದಿರುವ ಸಂವಿಧಾನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿ ಕೊಳ್ಳಲಾಗಿದೆ. ಚುನಾವಣೆ ಪ್ರಜಾಪ್ರಭುತ್ವದ ಜೀವಾಳ ಮತ್ತು ಅತ್ಯಂತ ಪವಿತ್ರ ಪ್ರಕ್ರಿಯೆ. ಆದ್ದರಿಂದ ಚುನಾವಣೆ ಯಾವುದೇ ಹಿತಾಸಕ್ತಿಗೆ ಬಲಿಯಾಗದೆ ಸ್ವತಂತ್ರವಾಗಿರಬೇಕು. ಚುನಾವಣೆ ಸಂದರ್ಭದಲ್ಲಿ ಆಡಳಿತ ನಡೆಸುವ ರಾಜಕೀಯ ಪಕ್ಷಗಳು ಆಡಳಿತ ಯಂತ್ರವನ್ನು ತಮ್ಮ ಪಕ್ಷದ ಲಾಭಕ್ಕೆ ಬಳಸಿಕೊಳ್ಳುವುದನ್ನು ತಪ್ಪಿಸಲು ಚುನಾವಣೆ ವ್ಯವಸ್ಥೆಗಾಗಿಯೇ ಒಂದು ಸ್ವಾಯತ್ತ ಸಂಸ್ಥೆಯನ್ನು ರಚಿಸಲು ತೀರ್ಮಾನಿಸಲಾಯಿತು.

ಇದರ ಫಲವೇ ಚುನಾವಣಾ ಆಯೋಗ ಭಾರತ ಸಂವಿಧಾನದ 15ನೇ ಭಾಗದಲ್ಲಿರುವ 324ರಿಂದ 329ನೇ ವಿಧಿಗಳು ಚುನಾವಣಾ ಆಯೋಗದ ರಚನೆ, ಅಧಿಕಾರ, ಕರ್ತವ್ಯ ಇತ್ಯಾದಿ ವಿಷಯಗಳನ್ನು ಒಳಗೊಂಡಿದೆ. ಜನವರಿ 25, 1950 ರಂದು ಚನಾವಣಾ ಆಯೋಗ ಅಸ್ತಿತ್ವಕ್ಕೆ ಬಂದಿದೆ. ಚುನಾವಣಾ ಆಯೋಗದ ಸ್ವಾಯತ್ತತೆಯನ್ನು ರಕ್ಷಿಸುವ ದೃಷ್ಟಿಯಿಂದ ಚುನಾವಣಾ ಅಧಿಕಾರಿಗಳನ್ನು ರಾಷ್ಟ್ರಪತಿಗಳು ನಿರ್ಧಿಷ್ಟ ಅವಧಿಗೆ ನೇಮಕ ಮಾಡುತ್ತಾರೆ.

ಚುನಾವಣಾ ಆಯೋಗದ ಮುಖ್ಯ ಕೆಲಸ ಚುನಾವಣೆಗಳನ್ನು ನಡೆಸುವುದು. ಸಂವಿಧಾನದಲ್ಲಿ "ಚುನಾವಣೆ" ಎಂಬ ಪದವನ್ನು ವಿಸ್ತಾರವಾದ ಅರ್ಥದಲ್ಲಿ ಬಳಸಲಾಗಿದೆ. ಚುನಾವಣೆ ಎಂದರೆ ಕೇವಲ ಮತ ಚಲಾಯಿಸುವುದಲ್ಲ. ಚುನಾವಣೆ ಅನೇಕ ಸ್ಥರಗಳಲ್ಲಿ ನಡೆಯುವ ಪ್ರಕ್ರಿಯೆಯನ್ನು ಒಳಗೊಂಡಿದೆ.



Downloaded From:www.kpscvaani.com



ಚುನಾವಣೆ ಘೋಷಣೆ ಮಾಡುವುದು, ದಿನಾಂಕ ನಿಗದಿಪಡಿಸುವುದು, ಚುನಾವಣೆ ನಡೆಸುವುದು, ಮತಗಳ ಎಣಿಕೆ, ಜಯಗಳಿಸಿದ ಅಭ್ಯರ್ಥಿಗಳ ಘೋಷಣೆ ಇತ್ಯಾದಿ.

ಪ್ರಜಾಪ್ರಭುತ್ವ, ಚುನಾವಣೆ ಮತ್ತು ಮತದಾನ ಒಂದಕ್ಕೊಂದು ನಿಕಟವಾದ ಸಂಪರ್ಕ ಮತ್ತು ಸಂಬಂಧ ಹೊಂದಿರುವ ತ್ರಿಕೋನ ಅಂಶಗಳು. ಮತದಾನದ ಮೂಲಕ ಚುನಾವಣೆಗಳಲ್ಲಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುತ್ತದೆ. ಹಾಗೆ ಆಯ್ಕೆಯಾದ ಪ್ರಜಾಪ್ರತಿನಿಧಿಗಳು ಸರ್ಕಾರವನ್ನು ರಚಿಸಿ, ದೇಶದ ಶಾಂತಿ ಸುಭದ್ರತೆ ಮತ್ತು ಜನರ ರಕ್ಷಣೆಗಾಗಿ ಕಾನೂನುಗಳನ್ನು ರಚಿಸಿ ಜಾರಿಗೆ ತರುತ್ತಾರೆ. ಜನರು ಮತ್ತು ದೇಶದ ಪ್ರಗತಿಗಾಗಿ ಯೋಜನೆಗಳನ್ನು ರೂಪಿಸಿ ಜಾರಿಗೆ ತರುತ್ತಾರೆ. ನಾಗರಿಕರು ಮತ ಚಲಾಯಿಸುವ ಮೂಲಕ ಈ ದೇಶದ ಅಭಿವೃದ್ಧಿ, ಬೆಳವಣಿಗೆಗೆ, ಸೂಕ್ತ ಜನಪ್ರತಿನಿಧಿಯನ್ನು ಆಯ್ಕೆ ಮಾಡುತ್ತಾರೆ. ಆದ್ದರಿಂದ ಮತದಾನ ಮಾಡುವುದು ಜನರ ಜವಾಬ್ದಾರಿ. ಆದ್ದರಿಂದ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗ ಮತದಾನದ ಬಗ್ಗೆ ಅನೇಕ ಕ್ರಮಗಳನ್ನು ಕೈಗೊಂಡಿವೆ. ಮತದಾನವನ್ನು ಸುಸೂತ್ರವಾಗಿ ನಡೆಸಲು ಪ್ರತ್ಯೇಕ ಸಂರಚನೆಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಪ್ರಜೆಗಳು ಮತದಾನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಎಲ್ಲಾ ರೀತಿಯ ಪ್ರೋತ್ಸಾಹ ನೀಡುತ್ತಿದೆ. ಮತದಾನ ಸುಸೂತ್ರವಾಗಿ ನಡೆಯಲು ಅಗತ್ಯವಾದ ಎಲ್ಲಾ ಕ್ರಮಗಳನ್ನು



ಕೈಗೊಳ್ಳುತ್ತದೆ. ಇವೆಲ್ಲವನ್ನು ಗಂಭೀರವಾಗಿ ಪರಿಗಣಿಸಿ ಪ್ರಜೆಗಳು ಚುನಾವಣೆಯಲ್ಲಿ ಭಾಗವಹಿಸಿದಾಗ ಮಾತ್ರ ಪ್ರಜಾಪ್ರಭುತ್ವ ಸಾರ್ಥಕವಾಗುತ್ತದೆ.

**ಜವಾಬ್ದಾರಿಯುತ ಮತದಾನ ಅಗತ್ಯ**

ಉತ್ತಮ ಪ್ರಜಾಪ್ರಭುತ್ವಕ್ಕಾಗಿ ಜವಾಬ್ದಾರಿಯುತ ಮತದಾನ ಅಗತ್ಯ ಎಂದು ಭಾರತದ ಚುನಾವಣಾ ಆಯೋಗ 2011 ರಿಂದ ಜನವರಿ 25ನೇ ತಾರೀಖನ್ನು "ರಾಷ್ಟ್ರೀಯ ಮತದಾರರ ದಿನ" ಎಂದು ಘೋಷಿಸಿ ಆಚರಿಸುತ್ತಿದೆ. ಒಂದೊಂದು ವರ್ಷ ಒಂದೊಂದು ಘೋಷಣೆಯೊಂದಿಗೆ ಸ್ವೀಪ್ (SVEEP) ಸಮಿತಿ ಜನರಲ್ಲಿ ಮತದಾನದ ಅರಿವು ಮತ್ತು ಜಾಗೃತಿಯನ್ನು ಮೂಡಿಸುತ್ತಿದೆ. ಪ್ರೌಢಶಾಲಾ ಹಂತದಿಂದ ಪದವಿ ಮತ್ತು ನಂತರದ ಹಂತದವರೆಗೂ ಶಾಲಾ ಕಾಲೇಜುಗಳಲ್ಲಿ ಮತದಾರ ಜಾಗೃತಿ ಸಮಿತಿಗಳನ್ನು ರಚಿಸಿ ಈ ಸಮಿತಿಗಳ ಮೂಲಕ ಚುನಾವಣೆ ಮತ್ತು ಮತದಾನದ ಬಗ್ಗೆ ಜಾಗೃತಿ ಮೂಡಿಸಲು ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಮತ್ತು ಪೋಸ್ಟರ್ ರೈಟಿಂಗ್ ಸ್ಪರ್ಧೆಗಳನ್ನು ಏರ್ಪಡಿಸಿ ಜನವರಿ 25 ರಂದು ಪುಸ್ತಕ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ನೀಡಲಾಗುತ್ತಿದೆ. "ಹೆಮ್ಮೆಯ ಮತದಾರರಾಗಿ ಮತದಾನಕ್ಕೆ ಸಿದ್ಧರಾಗಿ, ಚಲಾಯಿಸಿ ನಿಮ್ಮ ಮತ, ಕಾಪಾಡಿ ದೇಶದ ಹಿತ" ಸುಭದ್ರ ಪ್ರಜಾಪ್ರಭುತ್ವಕ್ಕಾಗಿ ಸರ್ವರು ಪಾಲ್ಗೊಳ್ಳುವಿಕೆ, ಉತ್ತಮ ಪ್ರಜಾಪ್ರಭುತ್ವದ ರಚನೆಗಾಗಿ ಜವಾಬ್ದಾರಿಯುತ ಮತದಾನ ಅಗತ್ಯ ಎಂಬ ಧ್ಯೇಯದೊಂದಿಗೆ ಜಾಗೃತಿ ಮೂಡಿಸಲಾಗುತ್ತಿದೆ.

ಮತದಾರರು ಬಲವಾದ ಪ್ರಜಾಪ್ರಭುತ್ವ ದೇಶವನ್ನು ರಚಿಸಲು ಪ್ರತಿ ಚುನಾವಣೆಯಲ್ಲಿ ತಪ್ಪದೇ ಮತದಾನದ ಹಕ್ಕನ್ನು ಚಲಾಯಿಸಬೇಕು. ಮತ ಚಲಾಯಿಸುವ ಅವಕಾಶವನ್ನು ಎಂದಿಗೂ ಕಳೆದುಕೊಳ್ಳಬಾರದು. ಪ್ರತಿಯೊಂದು ಮತವೂ ಅಮೂಲ್ಯವಾಗಿರುವುದರಿಂದ ರಾಷ್ಟ್ರದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಎಲ್ಲರೂ ಮುಂದಾಗಿ ಮತ ಚಲಾಯಿಸಿ. ನಾವು ಮತ ಚಲಾಯಿಸಿದಾಗ ನಮ್ಮ ಮೌಲ್ಯಗಳನ್ನು ಕಾರ್ಯರೂಪಕ್ಕೆ ತರಲಾಗುತ್ತದೆ ಮತ್ತು ನಮ್ಮ ಧ್ವನಿಯನ್ನು ಕೇಳಲಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಸಾಮಾನ್ಯ ಜನರಲ್ಲಿ ಅಸಾಧಾರಣ ಸಾಧ್ಯತೆಗಳಿವೆ. ಆದರೆ ನಾವೆಲ್ಲರೂ ಮತ ಚಲಾಯಿಸದೇ ಹೋದರೆ ನಾವು ಎಂದಿಗೂ ಸಮಾನರಾಗಿರುವುದಿಲ್ಲ. ಆದ್ದರಿಂದ ಏನನ್ನು ನಿರೀಕ್ಷಿಸದೆ ಮತ ಚಲಾಯಿಸಬೇಕು.

ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಸ್ವತಂತ್ರಗಳಿಸಿದ ಏಳು ದಶಕಗಳಲ್ಲಿ ಪ್ರಜಾಪ್ರಭುತ್ವದ ಸಫಲತೆಯ ಬಗ್ಗೆ ಸಣ್ಣಪುಟ್ಟ ಅಪವಾದಗಳು ಕೇಳಿಬರುತ್ತಿದ್ದರೂ ಬೇರೆ ರಾಷ್ಟ್ರಗಳಿಗೆ ಹೋಲಿಸಿದಾಗ ಭಾರತದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು ಜೀವಂತವಾಗಿವೆ ಎಂಬುದನ್ನು ತಳ್ಳಿಹಾಕುವಂತಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಚುನಾವಣೆಗಳಲ್ಲಿ ಮತಕ್ಕಾಗಿ ಹಣ ಮತ್ತು ಇತರೆ ಉಡುಗೊರೆಗಳನ್ನು ಹಂಚುವುದು ದುರದೃಷ್ಟಕರ. ಈ ವಿಚಾರದಲ್ಲಿ ಜನರು ಪ್ರಜ್ಞಾವಂತರಾಗಿ ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೆ ಮತ ಚಲಾಯಿಸಬೇಕು. ಭಾರತದ ಚುನಾವಣೆ ವಿಶ್ವದಲ್ಲೇ ಅತಿ ದೊಡ್ಡ ಕಸರತ್ತು. ಚಾರಿತ್ರಿಕ ದೃಷ್ಟಿಯಿಂದಲೂ ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಚುನಾವಣೆಗೆ ಮಹತ್ವ ಪಡೆದುಕೊಂಡಿದೆ. ದಾಖಲೆಗಳು ಮತ್ತು ಮಾಹಿತಿ ಪ್ರಕಾರ 1892ರ ಹಿಂದೆಯೇ



Downloaded From:www.kpscvaani.com



ಮೈಸೂರಿನ ಪೌರಸಭೆಗೆ ಚುನಾವಣೆ ನಡೆದಿತ್ತು. ಈ ಪ್ರಥಮ ಚುನಾವಣೆಯಲ್ಲಿದ್ದವರು ಕೇವಲ 250 ಮತದಾರರು. ಬ್ರಿಟಿಷ್ ಆಡಳಿತವು 1861 ರಲ್ಲಿ ಎಲ್ಲಾ ಸಂಸ್ಥಾನಗಳಲ್ಲೂ ಪೌರಸಭೆ ಸ್ಥಾಪಿಸಬೇಕೆಂಬ ಆದೇಶ ಹೊರಡಿಸಿತ್ತು. ಇದರ ಫಲವಾಗಿ 1862 ರಲ್ಲಿ ಮೈಸೂರು ಪೌರಸಭೆ ರಚನೆಯಾಯಿತು. ಇಪ್ಪತ್ತು ವರ್ಷಗಳ ನಂತರ ಆಡಳಿತ ನಡೆಸುತ್ತಿದ್ದ ಮಹಾರಾಜ ಚಾಮರಾಜ ಒಡೆಯರ್ ಅವರು ಪೌರಸಭೆಗೆ ತಾವೇ ನೇಮಕ ಮಾಡುವ ಬದಲು ಗಣ್ಯರ ಮೂಲಕ ಮಾಡಿಸುವ ಪದ್ಧತಿಯನ್ನು ಜಾರಿಗೊಳಿಸಿದರು. ಈ ರೀತಿ ಮತದಾನದ ಪರಿಕಲ್ಪನೆ ಹುಟ್ಟಿತು.

**ಪ್ರಜಾಪ್ರಭುತ್ವ ಮತ್ತು ಚುನಾವಣೆ**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಅತ್ಯಗತ್ಯ. ಚುನಾವಣೆಯು ಪ್ರಜಾಪ್ರಭುತ್ವದ ಆಧಾರಸ್ತಂಭ. ಪ್ರಜಾಪ್ರಭುತ್ವ ಮತ್ತು ಚುನಾವಣೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಚುನಾವಣೆ ಇಲ್ಲದಿದ್ದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆ ಆಗಲಾರದು. ಪ್ರಜಾಪ್ರಭುತ್ವದಲ್ಲಿ ಸರ್ಕಾರದ ರಚನೆಗೆ ಮಾತ್ರ ಚುನಾವಣೆ ನಡೆಯುವುದಿಲ್ಲ. ಗ್ರಾಮ ಪಂಚಾಯಿತಿಯಿಂದ ಲೋಕಸಭೆಯವರೆಗೆ ಚುನಾವಣೆಗಳು ನಡೆದು ಪ್ರಜೆಗಳು ತಾವು ಆಯ್ಕೆ ಮಾಡಿದ ಪ್ರತಿನಿಧಿಗಳನ್ನು ನಿಯಂತ್ರಿಸಲು ಚುನಾವಣೆ ಅಗತ್ಯ. ಆದ್ದರಿಂದ ಚುನಾವಣೆಗಳು ಮುಕ್ತ ಮತ್ತು ನಿರ್ಭೀತಿಯಿಂದ ನಿರ್ಮಲ ವಾತಾವರಣದಲ್ಲಿ ನಡೆಯುವುದು ಅವಶ್ಯಕ. ಆದ್ದರಿಂದ ಮತದಾರರು ಯಾವುದೇ ಆಮಿಷಗಳಿಗೆ ಒಳಗಾಗದೆ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಂಡು ಮತ ಚಲಾಯಿಸಿದಾಗ ಮಾತ್ರ ಪ್ರಜಾಪ್ರಭುತ್ವದ ಗುಣಮಟ್ಟ ವೃದ್ಧಿಸುತ್ತದೆ.

**ಕರ್ನಾಟಕದ ವಿಧಾನಸಭೆ ಚುನಾವಣೆ**

ಕರ್ನಾಟಕವೂ ಸೇರಿದಂತೆ ಭಾರತದಲ್ಲಿ ಪ್ರಥಮ ಬಾರಿಗೆ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳು ನಡೆದಿದ್ದು 1952ರಲ್ಲಿ. ಕರ್ನಾಟಕದಲ್ಲಿ 1952ರಲ್ಲಿ ವಿಧಾನಸಭೆಗೆ ಚುನಾವಣೆಗಳು ನಡೆದು 1952ರ ಜೂನ್‌ನಲ್ಲಿ ಮೊದಲ ವಿಧಾನಸಭೆ (ಅದಕ್ಕಿಂತ ಮೊದಲು ಮೈಸೂರು ಅರಸರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆ ಇತ್ತು) ಅಸ್ತಿತ್ವಕ್ಕೆ ಬಂತು. ಕರ್ನಾಟಕದ ಮೊದಲ ವಿಧಾನಸಭೆಗೆ ಚುನಾಯಿತರಾಗಿದ್ದ ಸದಸ್ಯರ ಸಂಖ್ಯೆ 99 ಮತ್ತು ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಲು ಅವಕಾಶ ಇತ್ತು. ನಂತರ 1953ರಲ್ಲಿ ಆಂಧ್ರಪ್ರದೇಶ ರಾಜ್ಯ ರಚನೆಯಾದ ಮೇಲೆ ಅಂದಿನ ಮದ್ರಾಸ್ ರಾಜ್ಯದಲ್ಲಿದ್ದ ಬಳ್ಳಾರಿ ಜಿಲ್ಲೆಯ ಕೆಲ ಭಾಗಗಳನ್ನು ಕರ್ನಾಟಕಕ್ಕೆ ಸೇರ್ಪಡೆ ಮಾಡಲಾಯಿತು. ಆಗ ವಿಧಾನಸಭೆಯ ಸದಸ್ಯರ ಸಂಖ್ಯೆಯನ್ನು 104ಕ್ಕೆ ಹೆಚ್ಚಳ ಮಾಡಲಾಯಿತು. 1956ರಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ಆಧರಿಸಿ ರಾಜ್ಯಗಳ ಪುನರ್ ರಚನೆ ಆದಾಗ ಆಗಿನ ಬಾಂಬೆ ರಾಜ್ಯದಿಂದ 4 ಜಿಲ್ಲೆಗಳು, ಹೈದ್ರಾಬಾದ್ ರಾಜ್ಯದಿಂದ 3 ಜಿಲ್ಲೆಗಳು, ಹಳೆ ಮದ್ರಾಸ್ ರಾಜ್ಯದಲ್ಲಿದ್ದ ಕೂರ್ಗ್ ಮೈಸೂರು ರಾಜ್ಯಕ್ಕೆ ಸೇರ್ಪಡೆಯಾದವು. ಆಗ ವಿದಾನಸಭೆಯ ಸದಸ್ಯರ ಸಂಖ್ಯೆಯನ್ನು 208ಕ್ಕೆ ಹೆಚ್ಚಿಸಲಾಯಿತು. ಮುಂದೆ 1967 ರಲ್ಲಿ 216ಕ್ಕೆ 1978 ರಲ್ಲಿ 224ಕ್ಕೆ ಹೆಚ್ಚಳ ಮಾಡಲಾಯಿತು. ಕ್ಷೇತ್ರಗಳ ಪುನರ್ ವಿಂಗಡನೆ ಸಂದರ್ಭದಲ್ಲಿ ಕೆಲವು ಹೊಸ ಕ್ಷೇತ್ರಗಳ ಸೇರ್ಪಡೆ ಹಳೆ ಕ್ಷೇತ್ರಗಳ ವಿಲೀನ ಆದರೂ ಸದಸ್ಯರ ಸಂಖ್ಯೆಯಲ್ಲಿ ಬದಲಾವಣೆ ಆಗಿಲ್ಲ. ಪ್ರಸ್ತುತ ಕರ್ನಾಟಕ ವಿಧಾನಸಭೆಯ ಸದಸ್ಯರ ಬಲ 224 ಇದ್ದು ಒಬ್ಬ ಆಂಗ್ಲೋ ಇಂಡಿಯನ್‌ರನ್ನು ನಾಮಕರಣ ಮಾಡಲಾಗುತ್ತದೆ.

ಕರ್ನಾಟಕ ವಿಧಾನಸಭೆ ಚುನಾವಣೆಗಳಲ್ಲಿ ಮತದಾನದ ಪ್ರಮಾಣ ಕರ್ನಾಟಕದಲ್ಲಿ 1952 ರಿಂದ 2018ರ ವರೆಗೆ 15 ವಿಧಾನಸಭಾ ಚುನಾವಣೆಗಳು ನಡೆದು 2023 ರಲ್ಲಿ ಈಗ 16ನೇ ವಿಧಾನಸಭೆ ಚುನಾವಣೆ ನಡೆಯುತ್ತಿದೆ. ಈ ಚುನಾವಣೆಗಳಲ್ಲಿ ನಡೆದಿರುವ ಮತದಾನದ ಪ್ರಮಾಣವನ್ನು ನೋಡಿದರೆ ಶೇ.71% ಕ್ಕಿಂತ ಹೆಚ್ಚು ಮತದಾನ ನಡೆದೇ ಇಲ್ಲ. ರಾಜ್ಯದಲ್ಲಿ ಮತದಾರರ ಸಂಖ್ಯೆಯೂ ಹೆಚ್ಚುತ್ತಿದೆ. ಮತದಾರರಲ್ಲಿ ಜಾಗೃತಿಯೂ ಹೆಚ್ಚುತ್ತಿದೆ. ಸ್ವೀಪ್ ಸಮಿತಿ ಮೂಲಕ ಅನೇಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಆದರೆ ಮತದಾನದ ಪ್ರಮಾಣ ಮಾತ್ರ ಕಡಿಮೆಯಾಗುತ್ತಿದೆ. ಆದ್ದರಿಂದ ಈ ಬಾರಿ ಹೆಚ್ಚು ಮತದಾನ ಆಗುವಂತೆ ಮಾಡುವ ನಿಟ್ಟಿನಲ್ಲಿ ಕೆಲವು ಮಹತ್ವದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದುವರೆಗೂ ನಡೆದಿರುವ ಚುನಾವಣೆಗಳ ಮತದಾನದ ವಿವರ ಈ ರೀತಿ ಇದೆ.

1952 ರಲ್ಲಿ ಮೈಸೂರು ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಶೇ. 69.4% ರಷ್ಟು ಮತದಾನವಾಗಿದ್ದರೆ, 1957 ರಲ್ಲಿ ಶೇ.52.6, 1962 ರಲ್ಲಿ ಶೇ.59.6%, 1967ರಲ್ಲಿ 63.7, 1972 ರಲ್ಲಿ ಶೇ.61.6, 1978 ರಲ್ಲಿ ಶೇ. 71.9%, 1983 ರಲ್ಲಿ ಶೇ. 66.8, 1985 ರಲ್ಲಿ ಶೇ. 67.3, 1989 ರಲ್ಲಿ ಶೇ. 67.6, 1994 ರಲ್ಲಿ ಶೇ. 68.5, 1999 ರಲ್ಲಿ ಶೇ.67.7, 2004 ರಲ್ಲಿ ಶೇ.65.2, 2008 ರಲ್ಲಿ ಶೇ.64.8, 2013 ರಲ್ಲಿ ಶೇ.71.8 ಮತ್ತು 2018 ರಲ್ಲಿ ಶೇ.71.91 ರಷ್ಟು ಮತದಾನವಾಗಿರುತ್ತದೆ. ಮೂರು ಜಿಲ್ಲೆಯಲ್ಲಿ ಹೆಚ್ಚು ಮತದಾನವಾಗಿತ್ತು. ಅವು ಬೆಂಗಳೂರು ಗ್ರಾಮೀಣ ಶೇ.84.03, ರಾಮನಗರ ಶೇ.84.55 ಮತ್ತು ಚಿಕ್ಕಬಳ್ಳಾಪುರ ಶೇ.84.19 ರಷ್ಟು ಮತದಾನವಾಗಿದ್ದರೆ, ಅತಿ ಕಡಿಮೆ ಮತದಾನ ಬೆಂಗಳೂರು ನಗರ ಜಿಲ್ಲೆ ಶೇ. 54.72 ರಷ್ಟಾಗಿತ್ತು. ಈ ಚುನಾವಣೆಯಲ್ಲಿ ಮತದಾರರು ಜಾಗೃತಿಯಿಂದ, ವಿವೇಚನೆಯಿಂದ ಪ್ರಜ್ಞಾವಂತಿಕೆಯಿಂದ ಮತದಾನದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು.



Downloaded From:www.kpscvaani.com




# ಓಟ್ ಫೆಸ್ಟ್ (ಮತದಾನದ ಹಬ್ಬ) ಕಾರ್ಯಕ್ರಮಕ್ಕೆ ಚಾಲನೆ

ಹೆಚ್.ವಿ.ವೀಣಾ

ಮತದಾನ ಯಶಸ್ವಿಗೊಳ್ಳಬೇಕಾದರೆ ಯುವ ಸಮೂಹವೇ ವಿಧಾನಸಭಾ ಚುನಾವಣೆಯ ರಾಯಭಾರಿಗಳಾಗಬೇಕು. ಈ ಯುವಸಮೂಹವು ತಮ್ಮ ತಮ್ಮ ನೆರೆಹೊರೆಯ ಪ್ರದೇಶದ ಜನರನ್ನು ಮತದಾನಕ್ಕೆ ಪ್ರೇರೇಪಿಸುವ ಮೂಲಕ ಈ ಬಾರಿಯ ಚುನಾವಣೆಯನ್ನು ಯಶಸ್ವಿಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ತುಷಾರ್ ಗಿರಿನಾಥ್ ಅವರು ಕರೆ ನೀಡಿದರು.

ರಾಜ್ಯ ವಿಧಾನಸಭಾ ಸಾರ್ವತ್ರಿಕ ಚುನಾವಣೆ 2023ರ ಅಂಗವಾಗಿ ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ವತಿಯಿಂದ ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನಲ್ಲಿ ಆಯೋಜಿಸಲಾಗಿದ್ದ ಓಟ್ ಫೆಸ್ಟ್ (ಮತದಾನದ ಹಬ್ಬ) ಕಾರ್ಯಕ್ರಮವನ್ನು ಅವರು ಉದ್ಘಾಟಿಸಿದರು.

> **ಜನರನ್ನು ಮತದಾನಕ್ಕೆ ಪ್ರೇರೇಪಿಸುವ ಸಲುವಾಗಿ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ವತಿಯಿಂದ ಏಪ್ರಿಲ್ 8 ರಂದು ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನಲ್ಲಿ ಓಟ್ ಫೆಸ್ಟ್‌ಗೆ ಚಾಲನೆ ನೀಡಲಾಯಿತು.**

ಮೇ 10 ರಂದು ರಾಜ್ಯದ ಜನರು ತಪ್ಪದೇ ತಮ್ಮ ಮತಗಟ್ಟೆಗೆ ಭೇಟಿ ನೀಡಿ ಮತದಾನ ಮಾಡಲೇಬೇಕೆಂದು ನಾಗರಿಕರಿಗೆ ಪ್ರೇರಣೆ ನೀಡುವ ಆಶಯದಿಂದ ಮತದಾನದ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಜನರಲ್ಲಿ ಮತದಾನದ ಬಗ್ಗೆ ಅರಿವು ಹಾಗೂ ಉತ್ಸಾಹ ಮೂಡಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಲಿದೆ.

ಈ ಚುನಾವಣೆಯಲ್ಲಿ ಮೊದಲನೇ ಬಾರಿಗೆ ಮತದಾನ ಮಾಡುವ ಯುವಕರ ಸಂಖ್ಯೆ 1 ಲಕ್ಷ ಮೀರಿರುವುದು ದಾಖಲಾರ್ಹ ಸಂಗತಿ. 18 ತುಂಬಿರುವ ಯುವಕರು ಮೊದಲನೇ ಬಾರಿಗೆ ಮತದಾನ ಮಾಡಲು ಮುಂದೆ



Downloaded From:www.kpscvaani.com

ಬರಬೇಕಿದೆ. ಮತದಾನದ ಬಗ್ಗೆ ಅರಿವು ಮೂಡಿಸಲು ಕಾಲೇಜುಗಳಲ್ಲಿ 4000 ಎಲೆಕ್ಟೋರಲ್ ಲಿಟ್ರೆಸಿ ಕ್ಲಬ್‌ಗಳನ್ನು ಪ್ರಾರಂಭಿಸಲಾಗಿದೆ. ಕಾಲೇಜುಗಳಿಂದ 18 ತುಂಬಿರುವ ಯುವಕರ ಪಟ್ಟಿಯನ್ನು ಪಡೆದು ಮತದಾನ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಡಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಹಿರಿಯ ನಾಗರಿಕರು, ಅಂಗವಿಕಲರಿಗೆ ಮತಗಟ್ಟೆಗಳಲ್ಲಿ ಮತದಾನ ಮಾಡಲು ವಿಶೇಷ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಧಾನಸಭಾ ಚುನಾವಣೆಯ ರಾಷ್ಟ್ರೀಯ ರಾಯಭಾರಿಯಾಗಿರುವ ರಾಹುಲ್ ದ್ರಾವಿಡ್ ರವರು ಮತದಾನ ಹಕ್ಕನ್ನು ಚಲಾಯಿಸುವಂತೆ ಪ್ರೋತ್ಸಾಹಿಸುತ್ತಿದ್ದಾರೆ. ಮತದಾನದ ಮೂಲಕ ಕರ್ತವ್ಯದಲ್ಲಿ ಎಲ್ಲರೂ ಭಾಗವಹಿಸಿ ಪ್ರಜಾಪ್ರಭುತ್ವದ ಹಬ್ಬವನ್ನು ಯಶಸ್ವಿಗೊಳಿಸಬೇಕೆಂದು ತುಷಾರ್ ಗಿರಿನಾಥ್ ಅವರು ತಿಳಿಸಿದರು.

ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ಪ್ರತಾಪ್ ರೆಡ್ಡಿ ಅವರು ಮಾತನಾಡಿ, ಬೆಂಗಳೂರು ಜಾಗತಿಕ ನಗರವಾಗಿದ್ದು, ಗರಿಷ್ಠ ಪ್ರಮಾಣದಲ್ಲಿ ಮತದಾನವನ್ನು ದಾಖಲಿಸುವ ಗುರಿಯನ್ನು ಸಾಧಿಸಬೇಕಿದೆ. ಬೆಂಗಳೂರು ನಗರದ ಮತದಾನ ಪ್ರಮಾಣ ಕಡಿಮೆಯಿದ್ದು, ಈ ಬಾರಿಯ ಚುನಾವಣೆಯಲ್ಲಿ ಈ ಪ್ರಮಾಣವನ್ನು ಸುಧಾರಿಸಲು ಹಾಗೂ ಯುವಸಮೂಹವನ್ನು ಮತಗಟ್ಟೆಯತ್ತ ಸೆಳೆಯಲು ಇಂದಿನ ಕಾರ್ಯಕ್ರಮ ಪೂರಕವಾಗಿದೆ ಎಂದರು. ಯುವ ಜನರು ತಮ್ಮ ಪ್ರದೇಶದ ನೆರೆಹೊರೆಯವರನ್ನೂ ಮತದಾನದ ಹಕ್ಕನ್ನು ಚಲಾಯಿಸಲು ಪ್ರೋತ್ಸಾಹಿಸಬೇಕೆಂದು ಕೋರಿದರು.




ಬೆಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾವಂತರು ಇರುವರಲ್ಲದೆ, ಐಟಿ-ಬಿಟಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಇದ್ದರೂ ಕೂಡ ಶೇಕಡವಾರು ಮತದಾನ ಮಾತ್ರ ಕಡಿಮೆ ಇರುತ್ತದೆ. ಹಾಗಾಗಿ ಬೆಂಗಳೂರು ನಗರದಲ್ಲಿ ಮತದಾನ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

–ತುಷಾರ್ ಗಿರಿನಾಥ್
ಬಿಬಿಎಂಪಿ ಮುಖ್ಯ ಆಯುಕ್ತರು
ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು





ಅಂದು ದಿನವಿಡೀ ಬೈಕ್ ರ್‍ಯಾಲಿ, ಯಕ್ಷಗಾನ, ಬೀದಿ ನಾಟಕ, ಫ್ಲಾಶ್ ಮಾಬ್ ಸೇರಿದಂತೆ ಮುಂತಾದ ವೈವಿಧ್ಯಮಯ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜನರಿಗೆ ಮತದಾನದ ಬಗ್ಗೆ ಅರಿವು ಮೂಡಿಸಲಾಯಿತು.

ರಾಜ್ಯ ವಿಧಾನಸಭಾ ಸಾರ್ವತ್ರಿಕ ಚುನಾವಣೆಯ ಮತದಾನ ಮೇ 10 ರಂದು ರಾಜ್ಯಾದ್ಯಂತ ನಡೆಯಲಿರುವುದರಿಂದ ಜನರಿಗೆ ಮತದಾನದ ಬಗ್ಗೆ ಜಾಗೃತಿ ಮೂಡಿಸಲು ಓಟ್ ಫೆಸ್ಟ್ ಕಾರ್ಯಕ್ರಮವನ್ನು


Downloaded From:www.kpscvaani.com





ಹಮ್ಮಿಕೊಳ್ಳಲಾಗಿತ್ತು. ಪ್ರಜಾಪ್ರಭುತ್ವದಲ್ಲಿ ಮತದಾನದ ಪ್ರಾಮುಖ್ಯತೆ ಹಾಗೂ ಇದರಿಂದಾಗಿ ಸಮುದಾಯದ ಮೇಲಿನ ಸಕಾರಾತ್ಮಕ ಪರಿಣಾಮಗಳ ಬಗ್ಗೆ ಕಾರ್ಯಕ್ರಮದಲ್ಲಿ ಅತಿಥಿಗಳು ಬೆಳಕು ಚೆಲ್ಲಿದರು.

ಚರ್ಚ್ ಸ್ಟ್ರೀಟ್‌ನಲ್ಲಿ ಅಂದು ನೆರೆದಿದ್ದ ಯುವಕರಲ್ಲಿ ಮತದಾನ ಬಗ್ಗೆ ಜಾಗೃತಿ , ವೋಟರ್ ಹೆಲ್ಪ್ ಲೈನ್ ಆ್ಯಪ್ ಬಗ್ಗೆ ಮಾಹಿತಿ, ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಪರಿಶೀಲಿಸಿಕೊಳ್ಳುವುದು ಸೇರಿದಂತೆ ಹಲವು ಉಪಯುಕ್ತ ಮಾಹಿತಿಗಳನ್ನು ತಿಳಿಸಿಕೊಡಲಾಯಿತು. ಮತದಾನವನ್ನು ತಪ್ಪದೇ ಕೈಗೊಳ್ಳುವಂತೆ ಮಾಡುವ ಸಲುವಾಗಿ ಮತದಾರರಿಗೆ ಮತದಾನದ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು. ಸ್ಥಳೀಯ ಜನಪ್ರಿಯ ವ್ಯಕ್ತಿಗಳು ಬೈಕ್ ರ‍್ಯಾಲಿಯನ್ನು ಮುನ್ನಡೆಸಿ ಮುಂಬರುವ ಚುನಾವಣೆ ಹಾಗೂ ಮತದಾನದ ಪ್ರಾಮುಖ್ಯತೆಯ ಮಾಹಿತಿಯನ್ನು ನೀಡಿದರು.

ಹಾಗೆಯೇ ಸ್ಥಳೀಯ ಕಲಾವಿದರು ಹಾಗೂ ರಂಗಕಲಾವಿದರಿಂದ ಬೀದಿ ನಾಟಕಗಳನ್ನು ಏರ್ಪಡಿಸಿ, ಮತದಾನ ಪ್ರಕ್ರಿಯೆಯ ಮಹತ್ವ, ಮತ ಚಲಾಯಿಸದೆ ಇದ್ದಲ್ಲಿ ಆಗಬಹುದಾದ ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಯಿತು.

ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಮತದಾನದ ಬಗ್ಗೆ ಉಪಯುಕ್ತ ಮಾಹಿತಿ ಹಾಗೂ ಜಾಗೃತಿ ಮೂಡಿಸುವ ಮೂಲಕ ಓಟ್ ಫೆಸ್ಟ್ ಕಾರ್ಯಕ್ರಮವನ್ನು ಅವಿಸ್ಮರಣೀಯಗೊಳಿಸಲಾಯಿತು. ಜನರು ಕೂಡ ದೊಡ್ಡ ಸಂಖ್ಯೆಯಲ್ಲಿ ಮುಂದೆ ಬಂದು ಮತದಾನ ಹಬ್ಬವನ್ನು ಯಶಸ್ವಿಗೊಳಿಸಿದರು.

ಈ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಟಿ.ಕೆ. ದಯಾನಂದ, ಅಪರ ಮುಖ್ಯ ಚುನಾವಣಾಧಿಕಾರಿಗಳಾದ ರಾಜೇಂದ್ರ ಚೋಳನ್, ವಿಶೇಷ ಚುನಾವಣಾಧಿಕಾರಿಗಳಾದ ಎ.ವಿ.ಸೂರ್ಯಸೇನ್, ನಗರ ಪೊಲೀಸ್ ಆಯುಕ್ತರಾದ ಪ್ರತಾಪ್ ರೆಡ್ಡಿ  ಸೇರಿದಂತೆ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಒಟ್ಟಿನಲ್ಲಿ ಈ ಬಾರಿಯ ಚುನಾವಣೆಯಲ್ಲಿ ನಗರದ ಮತದಾನದ ಪ್ರಮಾಣವನ್ನು ಸುಧಾರಿಸುವ ನಿಟ್ಟಿನಲ್ಲಿ ಯುವ ಸಮೂಹವನ್ನು ಮತಗಟ್ಟೆಯತ್ತ ಸೆಳೆಯಲು ಮುಖ್ಯ ಚುನಾವಣಾ ಕಚೇರಿಯು ವಿಭಿನ್ನವಾದ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳುತ್ತಿದೆ. ■



Downloaded From:www.kpscvaani.com



# ಚುನಾವಣೆ ನೀತಿ ಸಂಹಿತೆ

## ಪರಿಧಿ

**ಚುನಾವಣೆ ನೀತಿ ಸಂಹಿತೆ ಪರಿಧಿಯಲ್ಲಿ ಯಾರು ಹೇಗಿರಬೇಕು? ಕಾರ್ಯ ಸ್ವರೂಪವೇನು? ಇವೇ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲಲು ಏರ್ಪಡಿಸಲಾಗಿದ್ದ ಕಾರ್ಯಾಗಾರದ ಸಂಕ್ಷಿಪ್ತ ಮಾಹಿತಿ.**

ವೆಂಕಿ

ಸಾರ್ವತ್ರಿಕ ಚುನಾವಣೆ ಕರ್ನಾಟಕ ವಿಧಾನಸಭೆ–2023 ರ ಅಂಗವಾಗಿ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಏಪ್ರಿಲ್ 6 ರಂದು ಮಾಧ್ಯಮ ಪ್ರತಿನಿಧಿಗಳಿಗಾಗಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಾಗಾರವನ್ನು ಮುಖ್ಯ ಚುನಾವಣಾಧಿಕಾರಿಗಳಾದ ಮನೋಜ್ ಕುಮಾರ್ ಮೀನಾ ಅವರು ಉದ್ಘಾಟಿಸಿದರು.

ಕಾರ್ಯಾಗಾರದಲ್ಲಿ ಅಭ್ಯರ್ಥಿಗಳು, ಸಾರ್ವಜನಿಕರು, ಸರಕಾರಿ ಅಧಿಕಾರಿಗಳು, ಮುದ್ರಣ ಮತ್ತು ಟೆಲಿವಿಷನ್ ಮಾಧ್ಯಮಗಳಿಗೆ ಅನ್ವಯವಾಗುವ ನೀತಿ ಸಂಹಿತೆಯ ಕುರಿತು ಅಪರ ಮುಖ್ಯ ಚುನಾವಣಾಧಿಕಾರಿಗಳಾದ ಆರ್. ವೆಂಕಟೇಶ್ ಕುಮಾರ್ ಅವರು ಸೋಶಿಯಲ್ ಮೀಡಿಯಾ ಬಗ್ಗೆ ಮಾಧ್ಯಮ ವಿಭಾಗದ ವಿಶೇಷ ಅಧಿಕಾರಿ ಎ.ವಿ.ಸೂರ್ಯಸೇನ್ ಅವರು ಮಾಹಿತಿಯನ್ನು ಮಂಡಿಸಿದರು.

ಹಿರಿಯ ಪತ್ರಕರ್ತರಾದ ಎಸ್.ಕೆ. ಶೇಷಚಂದ್ರಿಕ ಅವರು ಚುನಾವಣಾ ವರದಿಗಾರಿಕೆ ಹೇಗೆ ಎಂಬ ವಿಷಯ ಕುರಿತು ಈ ಕಾರ್ಯಾಗಾರದಲ್ಲಿ ಆಶಯ ಭಾಷಣ ಮಾಡುವ ಮೂಲಕ ಕಿರಿಯ ಮಾಧ್ಯಮ ಪ್ರತಿನಿಧಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದರು. ಅಪರ ಮುಖ್ಯ ಚುನಾವಣಾಧಿಕಾರಿಗಳಾದ ರಾಜೇಂದ್ರ ಚೋಳನ್, ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಗಳ ವಿಶೇಷ ಆಯುಕ್ತರಾದ ಉಜ್ವಲ್ ಕುಮಾರ್ ಗೋಷ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಡಿ.ಪಿ.ಮುರಳೀಧರ್ ಅವರು ಉಪಸ್ಥಿತರಿದ್ದರು.

ಕರ್ನಾಟಕದಲ್ಲಿ ವಿಧಾನಸಭೆ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದೆ. ಇದು ಸರಕಾರಿ ಅಧಿಕಾರಿಗಳು, ಜನಪ್ರತಿನಿಧಿಗಳು, ಪ್ರಚಾರದ ವಿಧಿ ವಿಧಾನಗಳು, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ನೀತಿಗೆ ಸಂಬಂಧಿಸಿದಂತೆ ಕಠಿಣ ನಿರ್ಬಂಧ ಮತ್ತು ಕಾರ್ಯನೀತಿಯನ್ನು ಹೇಳುತ್ತದೆ. ಈ ಕುರಿತು ಎಲ್ಲರಿಗೂ ತಿಳಿವಿದ್ದರೆ ಪ್ರಜಾಪ್ರಭುತ್ವದ ನೈಜ ಆಶಯಗಳನ್ನು ಎತ್ತಿ ಹಿಡಿದಂತಾಗುತ್ತದೆ.

ಸಾಮಾನ್ಯವಾಗಿ ಚುನಾವಣೆ ನೀತಿ ಸಂಹಿತೆ ಜಾರಿಯಾದಾಗ ಮಾತ್ರ ಕೆಲವು ನಡಾವಳಿಗಳಿಗೆ 'ಲಕ್ಷ್ಮಣರೇಖೆ' ಇರುತ್ತದೆ ಎಂಬ ನಂಬಿಕೆ ಎಲ್ಲೆಡೆ ಇದೆ. ಆದರೆ ಮಾದರಿ ನೀತಿ ಸಂಹಿತೆಗೆ ಏಕೆ ಕಾಯಬೇಕು. ಇರುವ ಕಾನೂನುಗಳ



Downloaded From:www.kpscvaani.com

ಪರಿಧಿಯಲ್ಲೇ ಕ್ರಮ ಜರುಗಿಸಬಹುದು ಎಂದು ಕೇಂದ್ರ ಚುನಾವಣೆ ಆಯೋಗ ಕರ್ನಾಟಕಕ್ಕೆ ಹೇಳಿತು. ಹೀಗಾಗಿ ಇಲ್ಲಿ ನೀತಿ ಸಂಹಿತೆ ಜಾರಿಗೆ ಮುಂಚೆಯೇ ಹಲವು ಪ್ರಕರಣಗಳು ದಾಖಲಾಗಿದೆ. ಲಕ್ಷಾಂತರ ರೂ. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

ಈಗ ನೀತಿ ಸಂಹಿತೆ ಜಾರಿಯಲ್ಲಿದೆ. ಇದು ಯಾರ್‍ಯಾರಿಗೆ ಅನ್ವಯವಾಗುತ್ತದೆ ಎಂಬುದು ತಿಳಿಯೋಣ.

**ಯಾರಿಗೆ ಅನ್ವಯ?**

ಅಧಿಕಾರದಲ್ಲಿದ್ದವರು, ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು, ಸರಕಾರಿ ಅಧಿಕಾರಿಗಳು, ಸಾರ್ವಜನಿಕರಿಗೆ ನೀತಿ ಸಂಹಿತೆ ಅನ್ವಯವಾಗುತ್ತದೆ.

- ಯಾವುದೇ ಪಕ್ಷ ಅಥವಾ ಅಭ್ಯರ್ಥಿಯು ಅಸ್ತಿತ್ವದಲ್ಲಿರುವ ಭಿನ್ನಾಭಿಪ್ರಾಯಗಳನ್ನು ಉಲ್ಬಣಗೊಳಿಸಬಹುದಾದ ಅಥವಾ ಪರಸ್ಪರ ದ್ವೇಷವನ್ನು ಉಂಟುಮಾಡುವ ಅಥವಾ ವಿವಿಧ ಜಾತಿಗಳು ಮತ್ತು ಸಮುದಾಯಗಳ ನಡುವೆ, ಧಾರ್ಮಿಕ ಅಥವಾ ಭಾಷಿಕರ ನಡುವೆ ಉದ್ವಿಗ್ನತೆಯನ್ನು ಉಂಟುಮಾಡುವ ಯಾವುದೇ ಚಟುವಟಿಕೆಯಲ್ಲಿ ಸೇರಬಾರದು.
- ಖಾಸಗಿ ಜೀವನದ ಎಲ್ಲಾ ಅಂಶಗಳ ಟೀಕೆಗಳಿಂದ ದೂರವಿರಬೇಕು. ಪರಿಶೀಲಿಸದ ಆರೋಪಗಳು ಅಥವಾ ತಿರುಚುವಿಕೆಯ ಆಧಾರದ ಮೇಲೆ ಇತರ ಪಕ್ಷಗಳು ಅಥವಾ ಅವರ ಕಾರ್ಯಕರ್ತರ ಟೀಕೆಗಳನ್ನು ತಪ್ಪಿಸಬೇಕು.
- ಮತಗಳನ್ನು ಪಡೆಯಲು ಜಾತಿ ಅಥವಾ ಕೋಮು ಭಾವನೆಗಳಿಗೆ ಯಾವುದೇ ರೀತಿಯಲ್ಲಿ ಮನವಿ ಮಾಡಬಾರದು. ಮಸೀದಿಗಳು, ಚರ್ಚ್‌ಗಳು, ದೇವಾಲಯಗಳು ಅಥವಾ ಇತರ ಪೂಜಾ ಸ್ಥಳಗಳನ್ನು ಚುನಾವಣಾ ಪ್ರಚಾರಕ್ಕಾಗಿ ವೇದಿಕೆಯಾಗಿ ಬಳಸಬಾರದು.
- ಮತದಾರರಿಗೆ ಲಂಚ ನೀಡುವುದು, ಮತದಾರರಿಗೆ ಬೆದರಿಕೆ ಹಾಕುವುದು, ಮತದಾರರ ಸೋಗು ಹಾಕುವುದು, ಮತಗಟ್ಟೆಗಳ 100 ಮೀಟರ್ ವ್ಯಾಪ್ತಿಯಲ್ಲಿ ಪ್ರಚಾರ ಮಾಡುವುದು, ಈ ಅವಧಿಯಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸುವುದು ಮುಂತಾದ ಎಲ್ಲಾ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ತಪ್ಪಿಸಬೇಕು. ಇದೆಲ್ಲವೂ ಚುನಾವಣಾ ಕಾನೂನಿನಡಿಯಲ್ಲಿ ಅಪರಾಧಗಳು.
- ಯಾವುದೇ ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಯು ಯಾವುದೇ ವ್ಯಕ್ತಿಯ ಜಮೀನು, ಕಟ್ಟಡ, ಕಾಂಪೌಂಡ್ ಗೋಡೆ ಇತ್ಯಾದಿಗಳನ್ನು ಆ ವ್ಯಕ್ತಿಯ ಅನುಮತಿಯಿಲ್ಲದೆ, ಧ್ವಜ-ಕಂಬಗಳನ್ನು ಕಟ್ಟಲು, ಬ್ಯಾನರ್‌ಗಳನ್ನು ಹಾಕಲು, ನೋಟೀಸ್ ಅಂಟಿಸಲು, ಘೋಷಣೆಗಳನ್ನು ಬರೆಯಲು ಬಳಸುವಂತಿಲ್ಲ.
- ಒಂದು ಪಕ್ಷ ಪೋಸ್ಟರ್‌ಗಳನ್ನು ಇನ್ನೊಂದು ಪಕ್ಷದ ಕಾರ್ಯಕರ್ತರು ತೆಗೆಯುವಂತಿಲ್ಲ.
- ಪ್ರಚಾರದ ಸಮಯದಲ್ಲಿ ಹೊಸ ಯೋಜನೆ ಘೋಷಿಸಬಾರದು. ಭರವಸೆಗಳನ್ನು ನೀಡಬಾರದು. ಉದಾಹರಣೆಗೆ ವಿದ್ಯಾರ್ಥಿ ವೇತನ ಹೆಚ್ಚಳ ಮಾಡುತ್ತೇವೆ ಎಂದಾಗಲಿ, ಶುಲ್ಕ ಇಳಿಸುತ್ತೇವೆ ಎಂದಾಗಲಿ ಹೇಳಬಾರದು. ಹೊಸ ಹೊಸ ಕಾಮಗಾರಿಗಳ ಶಂಕುಸ್ಥಾಪನೆ ಮಾಡಬಾರದು.
- ಸರಕಾರದ ಸಾಧನೆಗಳನ್ನು ಜಾಹೀರಾತು ನೀಡಬಾರದು. ಅದಕ್ಕೆ ಸರಕಾರಿ ಹಣವನ್ನು ಬಳಸಬಾರದು. ಪಾರ್ಟಿ ಫಂಡ್ ಬಳಸಿ ಈ ಕೆಲಸ ಮಾಡಬಹುದು. ಇದು ಇಷ್ಟೇ ಖರ್ಚು ಮಾಡಬೇಕು ಎಂಬ ನಿಯಮದ ವ್ಯಾಪ್ತಿಗೆ ಒಳಪಡುತ್ತದೆ.
- ಸರಕಾರಿ ಅತಿಥಿ ಗೃಹಗಳನ್ನು ಬಳಸುವಂತಿಲ್ಲ. ಪ್ರಚಾರಕ್ಕೆ, ಸಭೆಗಳಿಗೆ ಇಲ್ಲಿ ಅವಕಾಶವಿರುವುದಿಲ್ಲ.
- ಪೊಲೀಸರು ಅಗತ್ಯ ವ್ಯವಸ್ಥೆಗಳನ್ನು ಮಾಡಲು ಸಾಧ್ಯವಾಗುವಂತೆ ಪಕ್ಷ ಅಥವಾ ಅಭ್ಯರ್ಥಿಯು ಯಾವುದೇ ಉದ್ದೇಶಿತ ಸಭೆಯ ಸ್ಥಳ ಮತ್ತು ಸಮಯವನ್ನು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ತಿಳಿಸಬೇಕು.
- ಯಾವುದೇ ಉದ್ದೇಶಿತ ಸಭೆಗೆ ಸಂಬಂಧಿಸಿದಂತೆ ಧ್ವನಿವರ್ಧಕಗಳು ಅಥವಾ ಇತರ ಯಾವುದೇ ಸೌಲಭ್ಯವನ್ನು ಬಳಸಲು ಅನುಮತಿ ಅಥವಾ ಪರವಾನಗಿಯನ್ನು ಪಡೆಯಬೇಕಾದರೆ, ಪಕ್ಷ ಅಥವಾ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮುಂಚಿತವಾಗಿ ಅರ್ಜಿ ಸಲ್ಲಿಸಬೇಕು ಮತ್ತು ಅಂತಹ ಅನುಮತಿ ಅಥವಾ ಪರವಾನಗಿಯನ್ನು ಪಡೆಯಬೇಕು.
- ಮೆರವಣಿಗೆಯನ್ನು ಆಯೋಜಿಸುವ ಪಕ್ಷ ಅಥವಾ ಅಭ್ಯರ್ಥಿಯು ಮೆರವಣಿಗೆ ಪ್ರಾರಂಭವಾಗುವ ಸಮಯ ಮತ್ತು ಸ್ಥಳ, ಅನುಸರಿಸಬೇಕಾದ ಮಾರ್ಗ ಮತ್ತು ಮೆರವಣಿಗೆ ಮುಕ್ತಾಯಗೊಳ್ಳುವ ಸಮಯ ಮತ್ತು ಸ್ಥಳವನ್ನು ಮುಂಚಿತವಾಗಿ ನಿರ್ಧರಿಸಬೇಕು.
- ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ಒಂದೇ ಮಾರ್ಗದಲ್ಲಿ ಅಥವಾ ಅದರ ಭಾಗಗಳಲ್ಲಿ ಒಂದೇ ಸಮಯದಲ್ಲಿ ಮೆರವಣಿಗೆಗಳನ್ನು ನಡೆಸಲು ಇಚ್ಛಿಸಿದರೆ, ಮೆರವಣಿಗೆಗಳು ಘರ್ಷಣೆಯಾಗದಂತೆ ನೋಡಿಕೊಳ್ಳಲು ಸ್ಥಳೀಯ ಪೊಲೀಸರ ಸಹಾಯವನ್ನು ಪಡೆಯಬೇಕು. ಈ ಉದ್ದೇಶಕ್ಕಾಗಿ ಪಕ್ಷಗಳು ಆರಂಭಿಕ ಅವಕಾಶದಲ್ಲಿ ಪೊಲೀಸರನ್ನು ಸಂಪರ್ಕಿಸಬೇಕು.

**ದೂರುಗಳಿದ್ದರೆ ಯಾರ ಮೊರೆ ಹೋಗಬೇಕು?**

ಚುನಾವಣಾ ಆಯೋಗವು ವೀಕ್ಷಕರನ್ನು ನೇಮಿಸುತ್ತಿದೆ. ಅಭ್ಯರ್ಥಿಗಳು ಅಥವಾ ಅವರ ಏಜೆಂಟರು ಚುನಾವಣಾ ನಡವಳಿಕೆಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ದೂರು ಅಥವಾ ಸಮಸ್ಯೆ ಹೊಂದಿದ್ದರೆ ಅವರು ಅದನ್ನು ವೀಕ್ಷಕರ ಗಮನಕ್ಕೆ ತರಬಹುದು.

ಕೇಂದ್ರ ಅಥವಾ ರಾಜ್ಯದಲ್ಲಿ ಅಧಿಕಾರದಲ್ಲಿರುವ ಪಕ್ಷವು ತನ್ನ ಚುನಾವಣಾ ಪ್ರಚಾರದ ಉದ್ದೇಶಗಳಿಗಾಗಿ ಮತ್ತು ನಿರ್ದಿಷ್ಟವಾಗಿ ತನ್ನ ಅಧಿಕೃತ ಸ್ಥಾನವನ್ನು ಬಳಸುವಂತಿಲ್ಲ. ಈ ಕುರಿತು ದೂರು

**ಸರಕಾರಿ ಅಧಿಕಾರಿಗಳಿಗೆ ಸಂಹಿತೆ**

- ಇವರು ಯಾವುದೇ ಪಕ್ಷದ ಚುನಾವಣೆ ಪ್ರಚಾರದಲ್ಲಿ ಪಾಲ್ಗೊಳ್ಳುವಂತಿಲ್ಲ.
- ಇಂಥ ಪಕ್ಷ ನನಗಿಷ್ಟ. ಈ ಸಿದ್ಧಾಂತ ನನಗೆ ಒಲುಮೆ ಇದೆ ಎಂದು ಹೇಳುವಂತಿಲ್ಲ
- ಸಚಿವರು, ಶಾಸಕರು ಬಂದ ಕೂಡಲೇ ಓಡೋಡಿ ಬಂದು ನಮಸ್ಕಾರಗಳನ್ನು ಹಾಕುವಂತಿಲ್ಲ.
- ದಿನವಹಿ ಕೆಲಸಗಳಲ್ಲಿ ತೊಡಗಿಕೊಳ್ಳಬೇಕು. ಕಚೇರಿ ಕೆಲಸಗಳನ್ನು ತಪ್ಪಿಸುವಂತಿಲ್ಲ. ನೆಪಗಳನ್ನು ಹೇಳುವಂತಿಲ್ಲ



Downloaded From:www.kpscvaani.com

ನೀಡಿದ್ದಲ್ಲಿ ಈ ದೂರಿಗೆ ಯಾವುದೇ ಕಾರಣಗಳನ್ನು ನೀಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಅವಶ್ಯಕ.

ಮಂತ್ರಿಗಳು ತಮ್ಮ ಅಧಿಕೃತ ಭೇಟಿಯನ್ನು ಚುನಾವಣಾ ಕಾರ್ಯನಿರ್ವಹಣೆಯೊಂದಿಗೆ ಸಂಯೋಜಿಸಬಾರದು ಮತ್ತು ಚುನಾವಣಾ ಕೆಲಸದ ಸಮಯದಲ್ಲಿ ಅಧಿಕೃತ ಯಂತ್ರಗಳು ಅಥವಾ ಸಿಬ್ಬಂದಿಯನ್ನು ಸಹ ಬಳಸಬಾರದು. ವಾಹನಗಳನ್ನು ಅನಗತ್ಯ ಓಡಾಟಕ್ಕೆ ಬಳಸಬಾರದು. ತಮ್ಮ ಮನೆಯಿಂದ ಕಚೇರಿಗೆ ಹೋಗಲಷ್ಟೇ ಬಳಸಬಹುದು.

ವಿಶ್ರಾಂತಿ ಗೃಹಗಳು, ಡಕ್ ಬಂಗಲೆಗಳು ಅಥವಾ ಇತರ ಸರ್ಕಾರಿ ವಸತಿಗಳು ಅಧಿಕಾರದಲ್ಲಿರುವ ಪಕ್ಷ ಅಥವಾ ಅದರ ಅಭ್ಯರ್ಥಿಗಳಿಂದ ಏಕಸ್ವಾಮ್ಯವನ್ನು ಹೊಂದಿರುವುದಿಲ್ಲ ಮತ್ತು ಅಂತಹ ವಸತಿಗಳನ್ನು ಇತರ ಪಕ್ಷಗಳು ಮತ್ತು ಅಭ್ಯರ್ಥಿಗಳು ನ್ಯಾಯಯುತ ರೀತಿಯಲ್ಲಿ ಬಳಸಲು ಅನುಮತಿಸಬೇಕು ಆದರೆ ಯಾವುದೇ ಪಕ್ಷ ಅಥವಾ ಅಭ್ಯರ್ಥಿಯನ್ನು ಬಳಸಲು ಅಥವಾ ಅನುಮತಿಸಲಾಗುವುದಿಲ್ಲ. ಚುನಾವಣಾ ಪ್ರಚಾರದ ಉದ್ದೇಶಗಳಿಗಾಗಿ ಪ್ರಚಾರ ಕಚೇರಿಯಾಗಿ ಅಥವಾ ಯಾವುದೇ ಸಾರ್ವಜನಿಕ ಸಭೆಯನ್ನು ನಡೆಸಲು ಬಳಸುವಂತಿಲ್ಲ.

ಪತ್ರಿಕೆಗಳು ಮತ್ತು ಇತರ ಮಾಧ್ಯಮಗಳಲ್ಲಿ ಸಾರ್ವಜನಿಕ ಬೊಕ್ಕಸದ ವೆಚ್ಚದಲ್ಲಿ ಜಾಹೀರಾತುಗಳನ್ನು ನೀಡುವುದು ಮತ್ತು ಅಧಿಕಾರದಲ್ಲಿರುವ ಪಕ್ಷದ ಭವಿಷ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ರಾಜಕೀಯ ಸುದ್ದಿ ಮತ್ತು ಸಾಧನೆಗಳ ಬಗ್ಗೆ ಪ್ರಚಾರಕ್ಕಾಗಿ ಚುನಾವಣಾ ಅವಧಿಯಲ್ಲಿ ಅಧಿಕೃತ ಸಮೂಹ ಮಾಧ್ಯಮಗಳ ದುರುಪಯೋಗ ಮಾಡುವ ಹಾಗಿಲ್ಲ.

ಆಯೋಗವು ಚುನಾವಣೆಗಳನ್ನು ಘೋಷಿಸಿದ ಸಮಯದಿಂದ ಮಂತ್ರಿಗಳು ಮತ್ತು ಇತರ ಅಧಿಕಾರಿಗಳು ವಿವೇಚನಾ ನಿಧಿಯಿಂದ ಅನುದಾನ/ಪಾವತಿಗಳನ್ನು ಮಂಜೂರು ಮಾಡಬಾರದು ಮತ್ತು ಆಯೋಗವು ಚುನಾವಣೆಗಳನ್ನು ಘೋಷಿಸಿದ ಸಮಯದಿಂದ ಮಂತ್ರಿಗಳು ಮತ್ತು ಇತರ ಅಧಿಕಾರಿಗಳು ವಿವೇಚನಾ ನಿಧಿಯಿಂದ ಅನುದಾನ/ಪಾವತಿಗಳನ್ನು ಮಂಜೂರು ಮಾಡಬಾರದು. ಆದರೆ



ನೈಸರ್ಗಿಕ ಪ್ರಕೋಪಗಳಾದಾಗ ಕೆಲವೊಂದು ವಿನಾಯತಿಗಳಿರುತ್ತದೆ.

ಸಾಮಾನ್ಯವಾಗಿ ರಾಜಕೀಯ ಪಕ್ಷಗಳು ಚುನಾವಣಾ ದಿನಾಂಕ ಘೋಷಣೆಯ ಮೊದಲು ತಮ್ಮ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡುತ್ತವೆ ಎಂಬ ಅಂಶವನ್ನು ನಾವು ನೆನಪಿಸಿಕೊಳ್ಳುತ್ತೇವೆ. ಆ ಸನ್ನಿವೇಶದಲ್ಲಿ, ಕಟ್ಟುನಿಟ್ಟಾಗಿ ಹೇಳುವುದಾದರೆ, ದಿನಾಂಕದ ಘೋಷಣೆಯ ಮೊದಲು ಮಾಡಿದ ಯಾವುದೇ ಕಾರ್ಯವನ್ನು ನಿಯಂತ್ರಿಸುವ ಅಧಿಕಾರ ಚುನಾವಣಾ ಆಯೋಗಕ್ಕೆ ಇರುವುದಿಲ್ಲ. ಅದೇನೇ ಇದ್ದರೂ, ಚುನಾವಣಾ ಪ್ರಣಾಳಿಕೆಯ ಉದ್ದೇಶವು ಚುನಾವಣಾ ಪ್ರಕ್ರಿಯೆಯೊಂದಿಗೆ ನೇರವಾಗಿ ಸಂಬಂಧಿಸಿರುವುದರಿಂದ ಈ ವಿಷಯದಲ್ಲಿ ವಿನಾಯಿತಿಯನ್ನು ನೀಡಬಹುದು.

ಬಹು-ಹಂತದ ಚುನಾವಣೆಗಳ ಸಂದರ್ಭದಲ್ಲಿ, ಆ ಚುನಾವಣೆಗಳ ಎಲ್ಲಾ ಹಂತಗಳ ಪ್ರಜಾಪ್ರತಿನಿಧಿ ಕಾಯ್ದೆ, 1951 ರ ಸೆಕ್ಷನ್ 126 ರ ಅಡಿಯಲ್ಲಿ ಸೂಚಿಸಲಾದ ನಿಷೇಧಿತ ಅವಧಿಗಳಲ್ಲಿ ಪ್ರಣಾಳಿಕೆಯನ್ನು ಬಿಡುಗಡೆ ಮಾಡಬಾರದು.

**ಮಾಧ್ಯಮಗಳಿಗೂ ಇದೆ ಸಂಹಿತೆ**

ಚುನಾವಣೆ ಸಂದರ್ಭದಲ್ಲಿ ಸಾರ್ವಜನಿಕರಿಗೆ, ಪಕ್ಷದ ಅಭ್ಯರ್ಥಿಗಳಿಗೆ ಜಾರಿಯಾಗುವ ನೀತಿ ಸಂಹಿತೆ ಮಾಧ್ಯಮಗಳಿಗೂ ಅನ್ವಯಗೊಳ್ಳುತ್ತದೆ. ಪತ್ರಿಕೆ, ಚಾನಲ್, ರೇಡಿಯೊ ಸೇರಿದಂತೆ ಮಾಧ್ಯಮಗಳು ಪ್ರಕಟಿಸುವ, ಪ್ರಚುರಪಡಿಸುವ ವರದಿಗಳ ಮೇಲೆ ಎಂಸಿಎಂಸಿ ಸಮಿತಿ ತೀವ್ರ ನಿಗಾ ವಹಿಸುತ್ತದೆ. ನಿಯಮ ಉಲ್ಲಂಘಿಸಿದಲ್ಲಿ ಕಾನೂನು ಕ್ರಮ ಕೈಗೊಳ್ಳುತ್ತದೆ.

ಪೇಡ್ ನ್ಯೂಸ್ ಪರಿಶೀಲನೆ, ಜಾಹೀರಾತು ಅನುಮೋದನೆ ನೀಡಲು ದೇಶ, ರಾಜ್ಯ, ಜಿಲ್ಲಾ ಮಟ್ಟದಲ್ಲಿ ಮಾಧ್ಯಮ ಪ್ರಮಾಣೀಕರಣ ಮತ್ತು ಕಣ್ಗಾವಲು ಸಮಿತಿಗಳನ್ನು ರಚಿಸಲಾಗಿದೆ. ಈ ನಿಯಮ 2010 ರಲ್ಲಿಯೇ ಜಾರಿಗೊಳಿಸಲಾಗಿದೆ.

ಯಾವುದೇ ನೋಂದಾಯಿತ ರಾಜಕೀಯ ಪಕ್ಷ, ಚುನಾವಣೆಯಲ್ಲಿ ಸ್ಪರ್ಧಿಸುವ ಯಾವುದೇ ಅಭ್ಯರ್ಥಿ ಅಥವಾ ಸಂಸ್ಥೆ, ಸಂಘಟನೆಗಳು ಜಾಹೀರಾತುಗಳನ್ನು ಮುದ್ರಣ, ವಿದ್ಯುನ್ಮಾನ ಮಾಧ್ಯಮ, ಕೇಬಲ್ ಜಾಲಗಳು ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಸಾರ ಮಾಡುವ ಮೊದಲು ಸಮಿತಿಯಿಂದ ರಾಜಕೀಯ ಜಾಹೀರಾತುಗಳ ಪ್ರಸಾರಕ್ಕೆ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ. ಯಾವುದೇ ಪಕ್ಷ ಅಥವಾ ಅಭ್ಯರ್ಥಿ ಪ್ರಚಾರಕ್ಕಾಗಿ ಬಳಸುವ ಕರಪತ್ರ, ಸಾಮಗ್ರಿಗಳಿಗೆ ಪರವಾನಿಗೆ ಪಡೆದು ಅವುಗಳ ಮೇಲೆ ಮುದ್ರಕರ ಮತ್ತು ಪ್ರಕಾಶಕರ ವಿವರ ಮತ್ತು ಪ್ರತಿಗಳ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯವಾಗಿದೆ. ಇಲ್ಲದಿದ್ದಲ್ಲಿ ಪ್ರಜಾಪ್ರಾತಿನಿಧ್ಯ ಕಾಯ್ದೆ 1951ರ ಸೆಕ್ಷನ್ 127ರಡಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

ಯಾವುದೇ ಮಾಧ್ಯಮದಲ್ಲಿ ಪ್ರಸಾರವಾಗುವ ಜಾಹೀರಾತುಗಳಿಗೆ ಅನುಮೋದನೆ ಪಡೆಯಲಾಗಿದೆಯೇ ಎಂಬುದನ್ನು ಸಮಿತಿ ಪರಿಶೀಲಿಸಲಿದೆ. ಅಭ್ಯರ್ಥಿಯ ಒಪ್ಪಿಗೆಯಿಂದ ನೀಡಲಾಗಿರುವ ಜಾಹೀರಾತುಗಳ ವೆಚ್ಚವನ್ನು ಅಭ್ಯರ್ಥಿ ವೆಚ್ಚಕ್ಕೆ ಸೇರಿಸಲಾಗುತ್ತದೆ. ಅಭ್ಯರ್ಥಿ ಒಪ್ಪಿಗೆ ಇಲ್ಲದಿದ್ದಲ್ಲಿ ಜಾಹೀರಾತು ನೀಡಿದವರ ವಿರುದ್ಧ ಕ್ರಮ ಜರುಗಿಸಲಾಗುತ್ತದೆ.

ನ್ಯೂಸ್ ಚಾನಲ್‌ಗಳು ತಮಗೆ ಬೇಕಾದವರನ್ನು ಮಾತ್ರವೇ ಪ್ರತಿ ಬಾರಿಯು ಸಂದರ್ಶನ ಮಾಡುವಂತಿಲ್ಲ. ಆಯಾ ಜಿಲ್ಲೆಯಲ್ಲಿ ಎಷ್ಟು ಅಭ್ಯರ್ಥಿಗಳಿರುತ್ತಾರೋ ಅವರೆಲ್ಲರಿಗೂ ಸಮಾನ ಅವಕಾಶ ಕಲ್ಪಿಸಬೇಕು. ಒಬ್ಬನೇ ಅಭ್ಯರ್ಥಿಗೆ ಅವಕಾಶ ಕಲ್ಪಿಸಿದರೆ ಅದು ಪಾವತಿ ಸುದ್ದಿ ಎನಿಸಿಕೊಳ್ಳುತ್ತದೆ. ಇಂಥ ಸನ್ನಿವೇಶದಲ್ಲಿ ಅಭ್ಯರ್ಥಿಗೂ ನೋಟಿಸ್ ನೀಡಲಾಗುತ್ತದೆ. ಅವರು 24 ಗಂಟೆಯೊಳಗೆ ಉತ್ತರ ನೀಡಬೇಕಾಗುತ್ತದೆ.


Downloaded From:www.kpscvaani.com






# ಮತದಾನ ಜಾಗೃತಿಗಾಗಿ ವಿಶೇಷ ಸಾಂಪ್ರದಾಯಿಕ ನಡಿಗೆ

**ಗದಗ ಜಿಲ್ಲಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖಾ ನೌಕರರು ಮತದಾನದ ಜಾಗೃತಿಗಾಗಿ ಸಾಂಪ್ರದಾಯಿಕ ಉಡುಗೆಯೆನ್ನು ತೊಟ್ಟು ನಡಿಗೆ ಕಾರ್ಯಕ್ರಮವನ್ನು ನಡೆಸಿದರು.**

ವಸಂತ್ ಮಡಲೂರ್

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ನೌಕರರು ಮತದಾರರ ಜಾಗೃತಿಗಾಗಿ ದೇಶದ ವಿವಿಧ ರಾಜ್ಯಗಳ ವಿಶೇಷ ಸಾಂಪ್ರದಾಯಿಕ ಉಡುಗೆಯಲ್ಲಿ ಬೃಹತ್ ಜಾಥಾ ಕಾರ್ಯಕ್ರಮವನ್ನು ಏಪ್ರಿಲ್ 16 ರಂದು ಆಯೋಜಿಸಿದ್ದರು. ಇದರ ಉದ್ದೇಶ ಇಷ್ಟೇ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರೇ ಪ್ರಭುಗಳು. ಮೇ 10 ರಂದು ಜರುಗುವ ಮತದಾನದಂದು ತಪ್ಪದೇ ಎಲ್ಲ ಅರ್ಹ ಮತದಾರರು ಮತ ಚಲಾಯಿಸಬೇಕು ಎನ್ನುವ ಕಾರಣಕ್ಕಾಗಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಸುಶೀಲಾ ಬಿ ಅವರು ಅಭಿಪ್ರಾಯಪಟ್ಟರು.

ರವಿವಾರದಂದು ನಗರದ ಕಳಸಾಪುರ ರಸ್ತೆಯಲ್ಲಿರುವ ಒಳಾಂಗಣ ಕ್ರೀಡಾಂಗಣದಿಂದ ಬೃಹತ್ ಜಾಥಾವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ನೌಕರರಿಂದ ಹಮ್ಮಿಕೊಳ್ಳಲಾಗಿತ್ತು. ಮತದಾರರಿಗೆ ಜಾಗೃತಿ ಮೂಡಿಸುವ ಈ ಜಾಥಾ ಕಾರ್ಯಕ್ರಮಕ್ಕೆ ಮೈ ಭಾರತ್ ಹೂ ಗೀತೆಯೊಂದಿಗೆ ಆರಂಭವಾದ ಸಾಂಪ್ರದಾಯಿಕ ನಡಿಗೆಯು ನಗರದ ಬಸವೇಶ್ವರ ಶಾಲೆ, ಮುಳಗುಂದ ನಾಕಾ, ಕೋರ್ಟ್ ಸರ್ಕಲ್ ಮೂಲಕ ಸಂಚರಿಸಿ, ಬೃಹತ್ ಸಾಂಪ್ರದಾಯಿಕ ನಡಿಗೆ ಜಾಥಾವು ಜಿಲ್ಲಾಡಳಿತ ಭವನಕ್ಕೆ ಬಂದು ತಲುಪಿತು.

ನಂತರ ಮಾತನಾಡಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಡಾ.ಸುಶೀಲಾ ಬಿ ಅವರು ಮೇ 10



Downloaded From:www.kpscvaani.com

ರಂದು ರಾಜ್ಯ ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ಮತದಾನ ಜರುಗಲಿದೆ. ಅಂದು ಬೆಳಿಗ್ಗೆ 7 ರಿಂದ ಸಂಜೆ 6 ರವರೆಗೆ ಮತದಾನ ನಡೆಯಲಿದ್ದು ಅರ್ಹ ಮತದಾರರೆಲ್ಲರೂ ಕಡ್ಡಾಯವಾಗಿ ತಮ್ಮ ಮತಗಟ್ಟೆಗೆ ತೆರಳಿ ಮತ ಹಾಕಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕು ಎಂದು ಕರೆ ನೀಡಿದರು.

ಕಳೆದ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಒಟ್ಟಾರೆ ಶೇ. 74.81 ರಷ್ಟು ಮತದಾನವಾದರೆ, ರಾಜ್ಯದಲ್ಲಿ ಶೇ 72 ರಷ್ಟು ಮತದಾನವಾಗಿದೆ. ಈ ಬಾರಿ ಶೇ 100 ರಷ್ಟು ಮತದಾನವಾಗುವಂತೆ ಮತದಾರರನ್ನು ಜಾಗೃತಿಗೊಳಿಸಲು ಸ್ವೀಪ್ ಸಮಿತಿಯಿಂದ ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಜಾಗೃತಿ ಮೂಡಿಸಲಾಗುತ್ತಿದೆ. ರಾಜ್ಯ ಹಾಗೂ ಜಿಲ್ಲೆಯ ಶೇಕಡಾವಾರು ಮತದಾನವಾಗಿರುವ ಪ್ರಮಾಣಕ್ಕಿಂತ ಕಡಿಮೆ ಮತದಾನವಾಗಿರುವ ಜಿಲ್ಲೆಯ ಒಟ್ಟು 257 ಮತಗಟ್ಟೆಗಳನ್ನು ಗುರುತಿಸಿ ವಿಶೇಷ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಮತಗಟ್ಟೆಗಳಲ್ಲಿ ಜಾಗೃತಿ ಜಾಥಾ, ಬೀದಿ ನಾಟಕ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ಹೊಂದಿರುವ ರಾಷ್ಟ್ರ ಭಾರತ. ಇಲ್ಲಿ ಪ್ರಜೆಗಳೇ ಪ್ರಭುಗಳು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನದ ಪಾತ್ರ ಪ್ರಮುಖವಾಗಿದ್ದು ತಪ್ಪದೇ ಮತ ಚಲಾಯಿಸಬೇಕು. ದೇಶದ ನಾನಾ ರಾಜ್ಯ ಹಾಗೂ ಪ್ರದೇಶ ಒಳಗೊಂಡಿರುವ ವಿವಿಧತೆಯಲ್ಲಿ ಏಕತೆ ಸಾರುವ ರಾಷ್ಟ್ರ ಭಾರತ. ವಿವಿಧ ರಾಜ್ಯಗಳಲ್ಲಿ ಅದರದ್ದೇ ಆದ ಸಾಂಪ್ರದಾಯಿಕ ಉಡುಗೆ, ಶೈಲಿ ಹೊಂದಿರುವ ಬೃಹತ್ ದೇಶ ಭಾರತ. ಇಂತಹ ಬೃಹತ್ ದೇಶದಲ್ಲಿ ಪ್ರತಿಯೊಬ್ಬರಿಗೂ ಮತದಾನದ ಹಕ್ಕನ್ನು ಕಲ್ಪಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯ ಭಾಗವಾಗಿ ತಮ್ಮ ಹಕ್ಕನ್ನು ಚಲಾಯಿಸಲು ಅವಕಾಶ ನೀಡಲಾಗಿದೆ. ಈ ಅವಕಾಶವನ್ನು ಪ್ರಜೆಗಳು ಅರ್ಹರಿಗೆ ಮತಚಲಾಯಿಸುವ ಮೂಲಕ ಸುಭದ್ರ ಸರ್ಕಾರ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.



ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ನಾರಾಯಣಿ ಮಾತನಾಡಿ ಜಿಲ್ಲಾ, ತಾಲೂಕು, ಗ್ರಾಮ ಮಟ್ಟದಲ್ಲಿ ಸ್ವೀಪ್ ಸಮಿತಿ ವತಿಯಿಂದ ಕಳೆದ 2–3 ತಿಂಗಳಿಂದ ನಿರಂತರವಾಗಿ ಮತದಾರರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮತದಾನ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಗೊಳಿಸಿ ಮತದಾನ ನಮ್ಮ ಹಕ್ಕು ಅದನ್ನು ತಪ್ಪದೇ ಚಲಾಯಿಸೋಣ. ಮತದಾನ ದಿನವನ್ನು ಅತ್ಯಂತ ಸಂಭ್ರಮ, ಸಡಗರದ ಹಬ್ಬದಂತೆ ಆಚರಿಸೋಣ ಎಂದರು.

ಹಾತಲಗೇರಿ ಗ್ರಾಮ ಪಂಚಾಯತ್ ವಾಟರ್‌ಮನ್ ಸತ್ಯಪ್ಪ ಬಿದರಣ್ಣನವರು ರಾವಣ ವೇಷದಲ್ಲಿ ಕಂಡು ಗಮನ ಸೆಳೆದರು. ನಾನು ಲಂಕಾಧಿಪತಿ ರಾವಣ, ನಾನು ಕಡ್ಡಾಯವಾಗಿ ಮತದಾನ ಮಾಡುವೆ. ನೀವು ಮತದಾನ ಮಾಡಿ ಎಂಬ ಘೋಷ ವಾಕ್ಯವನ್ನು ಅಂಟಿಸಿಕೊಂಡು ನೆರೆದಿದ್ದ ಸಾರ್ವಜನಿಕರನ್ನು ಆಕರ್ಷಿಸಿತು. ಹೊಳೆ ಮಣ್ಣೂರ ದುರ್ಗಾ ದೇವಿ ಕಲಾ ತಂಡದಿಂದ ಡೊಳ್ಳು ಕುಣಿತ, ಎನ್.ಸಿ.ಸಿ. 38 ಕರ್ನಾಟಕ ಬಟಾಲಿಯನ್, ಜಿ.ಪಂ, ತಾ.ಪಂ, ಹಾಗೂ ಗ್ರಾ.ಪಂ. ನೌಕರರು ಪಥ ಸಂಚಲನದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಬಸವರಾಜ ಅಡವಿಮಠ, ಮುಖ್ಯ ಯೋಜನಾಧಿಕಾರಿ ವಾಗೀಶ, ಮುಖ್ಯ ಲೆಕ್ಕಾಧಿಕಾರಿ ಜೆ.ಸಿ. ಪ್ರಶಾಂತ, ಶಿರಹಟ್ಟಿ ಚುನಾವಣಾಧಿಕಾರಿ ಕಿಶನ್ ಕಲಾಲ, ಲೀಡ್ ಬ್ಯಾಂಕ್ ಮ್ಯಾನೇಜರ್ ಜಬ್ಬಾರ್, ಕ್ರೀಡಾಧಿಕಾರಿ ವಿಠಲ ಜಾಬಗೌಡ್ರ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಸಿಬ್ಬಂದಿಗಳು ಹಾಜರಿದ್ದರು. ■






Downloaded From:www.kpscvaani.com



# ಎಲೆಕ್ಥಾನ್ 2023

## ಯುವಜನರಿಂದ ಪರಿಹಾರ ಐಡಿಯಾಗಳ ಹ್ಯಾಕಥಾನ್

**ಚುನಾವಣೆಯ ಭವಿಷ್ಯದ ಸವಾಲುಗಳಿಗೆ ಯುವ ಜನರಿಂದಲೇ ಪರಿಹಾರ ಐಡಿಯಾಗಳನ್ನು ಕಂಡುಕೊಳ್ಳಲು ಮುಖ್ಯ ಚುನಾವಣಾ ಕಚೇರಿವತಿಯಿಂದ ವಿಭಿನ್ನ ಎಲೆಕ್ಥಾನ್ ಆಯೋಜನೆ.**

ಜಡಿಯಪ್ಪ ಗೆದ್ಲಗಟ್ಟಿ

ಪ್ರಜಾಪ್ರಭುತ್ವದ ಮೂಲಕ ಸರ್ಕಾರವನ್ನು ಚುನಾಯಿಸುವುದೇ ಮತದಾನದ ಶಕ್ತಿ. ಮತದಾರರು ಪ್ರಜಾಪ್ರಭುತ್ವದ ನಿಜವಾದ ಪ್ರಭುಗಳಾಗಿದ್ದು, ಮತದಾರರಲ್ಲಿ ಮತದಾನದ ಪ್ರಜ್ಞೆ ಮತ್ತು ಅದರ ಶಕ್ತಿಯನ್ನು ಬಳಸಿಕೊಳ್ಳುವ ಕುರಿತು ಅರಿವು ಮೂಡಿಸುವುದು ಭಾರತ ಚುನಾವಣಾ ಆಯೋಗದ ಮೂಲ ಕರ್ತವ್ಯವಾಗಿದೆ.

ಪ್ರಜಾಪ್ರಭುತ್ವವಿರುವ ವಿಶ್ವದ ಅತಿದೊಡ್ಡ ರಾಷ್ಟ್ರ ಭಾರತದಲ್ಲಿ ಪ್ರಜಾಪ್ರಭುತ್ವದ ಮತದಾನದ ಭವಿಷ್ಯವನ್ನು ಭದ್ರಪಡಿಸುವ ದೃಷ್ಟಿಯಿಂದ ಬದಲಾದ ಜಗತ್ತಿನ ಸವಾಲುಗಳಿಗನುಗುಣವಾಗಿ ನೂತನ ಸಾಮಾಜಿಕ ಮತ್ತು ತಂತ್ರಜ್ಞಾನದ ಅವಿಷ್ಕಾರಗಳನ್ನು ಆಶ್ರಯಿಸಲಾಗುತ್ತಿದೆ. ಚುನಾವಣಾ ಪ್ರಕ್ರಿಯೆಗಳ ನಿರ್ಣಾಯಕ ಸವಾಲುಗಳನ್ನು ಪರಿಹರಿಸುವ ಹೊಸ ಐಡಿಯಾಗಳನ್ನು ದೇಶದಾದ್ಯಂತ ಯುವಜನರಿಂದ ಸಂಗ್ರಹಿಸಲು ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಕರ್ನಾಟಕ ಮತ್ತು ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಇಂಟರ್ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಇನ್ಫರ್ಮೇಷನ್ ಟೆಕ್ನಾಲಜಿಯ (ಐಐಐಟಿ) ಸಹಯೋಗದಲ್ಲಿ ಎಲೆಕ್ಥಾನ್ 2023 ಅನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರಸ್ತುತ ಸಾರ್ವತ್ರಿಕ ಚುನಾವಣೆ ಕರ್ನಾಟಕ ವಿಧಾನಸಭೆ –2023 ಘೋಷಣೆಯಾಗಿದ್ದು, ರಾಜ್ಯದಲ್ಲಿ ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದ್ದು, ಮೇ 10 ರಂದು ಮತದಾನ ಮತ್ತು ಮೇ 13 ರಂದು ಮತ ಎಣಿಕೆಯನ್ನು ಘೋಷಿಸಲಾಗಿದೆ. ಈ ಹಿನ್ನಲೆಯಲ್ಲಿ ಹೊಸ ಮತದಾರರ ನೋಂದಣಿ, ಮತದಾನದಲ್ಲಿ ನಗರವಾಸಿಗಳು ಹಾಗೂ ಯುವ ಮತದಾರರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದೂ ಸೇರಿದಂತೆ ಚುನಾವಣಾ ಪ್ರಕ್ರಿಯೆಯಲ್ಲಿನ ಕ್ಲಿಷ್ಟಕರ ಸವಾಲುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ಭಾರತ ಚುನಾವಣಾ ಆಯೋಗ ಎಲೆಕ್ಥಾನ್ 2023 ಅನ್ನು ಆಯೋಜಿಸಿತು. ಕಾರ್ಯಕ್ರಮವನ್ನು ಮಾರ್ಚ್ 10 ರಂದು ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರು ಚಾಲನೆ ನೀಡಿದರು.

ಈ ಅಭಿಯಾನದಲ್ಲಿ ಪಾಲ್ಗೊಂಡ



Downloaded From:www.kpscvaani.com

ತಂಡಗಳು ವಿಚಾರಗಳ ವಿನಿಮಯ ಮಾಡಿಕೊಳ್ಳಲು ಮತ್ತು ದೇಶದ ಚುನಾವಣಾ ಪ್ರಕ್ರಿಯೆಯನ್ನು ಉನ್ನತೀಕರಿಸುವ ಉದ್ದೇಶವನ್ನು ಹೊಂದಲಾಗಿತ್ತು. ತಂತ್ರಜ್ಞಾನ ಮತ್ತು ಯುವಕರ ಕೌಶಲ್ಯಗಳನ್ನು ಬಳಸಿಕೊಂಡು ಸವಾಲುಗಳಿಗೆ ಹೊಸ ಮತ್ತು ಸೃಜನಶೀಲ ಪರಿಹಾರಗಳನ್ನು ಬಳಸಿಕೊಂಡು ಅಭಿವೃದ್ಧಿಯನ್ನು ಉತ್ತೇಜಿಸುವ ಗುರಿಯನ್ನು ಕಾರ್ಯಕ್ರಮವು ಹೊಂದಿತ್ತು.

ಎಲೆಕ್ಥಾನ್ 2023, ಹ್ಯಾಕಥಾನ್ ಕಾರ್ಯಕ್ರಮ ಎರಡು ಹಂತಗಳಲ್ಲಿ ಆಯೋಜಿಸಿದ್ದು, ಮಾರ್ಚ್ 10 ರಂದು ಪ್ರಾರಂಭಿಸಲಾಯಿತು. 21 ದಿನಗಳ ಮೊದಲ ಹಂತದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸುವವರ ಆನ್‌ಲೈನ್ ನೋಂದಣಿ ಹಾಗೂ ಐಡಿಯಾಗಳನ್ನು ಲಿಖಿತ ಪ್ರಸ್ತಾವನೆ, ವಿಡಿಯೋ ಅಥವಾ ಇನ್ನಾವುದೇ ಫಾರ್ಮೆಟ್‌ಗಳಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಹ್ಯಾಕಥಾನ್‌ನ ಮಾರ್ಗದರ್ಶಕರೊಂದಿಗೆ ತಂಡಗಳ ಪರಿಚಯಾತ್ಮಕ ಆನ್‌ಲೈನ್ ಅಪ್ಲಿಕೇಶನ್ ಅನ್ನು ಮಾರ್ಚ್ 16 ರಂದು ಹಾಗೂ ಮಾರ್ಗದರ್ಶಕರೊಂದಿಗೆ ಎಎಂಎ ಸೆಷನ್ ಅನ್ನು ಮಾರ್ಚ್ 18 ರಂದು ಆಯೋಜಿಸಲಾಯಿತು.

ಹ್ಯಾಕಥಾನ್‌ನಲ್ಲಿ ಭಾಗವಹಿಸಲು ತಂಡಗಳ ನೋಂದಣಿ ಹಾಗೂ ಐಡಿಯಾಗಳ ಸಲ್ಲಿಕೆಗೆ ಮಾರ್ಚ್ 31 ರಂದು ಕಡೆಯ ದಿನವೆಂದು ನಿಗದಿಪಡಿಸಲಾಗಿತ್ತು. ಏಪ್ರಿಲ್ 2 ರಂದು ಐಡಿಯಾಗಳನ್ನು ಸಲ್ಲಿಸಿದ್ದ ತಂಡಗಳ ಕಿರುಪಟ್ಟಿಯನ್ನು ಸಿದ್ಧಪಡಿಸಲಾಯಿತು. ಎರಡನೇ ಹಂತದ ಕಾರ್ಯಕ್ರಮದ ಭಾಗವಾಗಿ ತಂಡಗಳು ಸಲ್ಲಿಸುವ ಐಡಿಯಾಗಳ ಅಭಿವೃದ್ಧಿ ಹಾಗೂ ಮಾರ್ಗದಶಕರೊಂದಿಗಿನ ಚರ್ಚೆಯನ್ನು ಏಪ್ರಿಲ್ 3 ರಂದು ನಿಗದಿಪಡಿಸಲಾಗಿತ್ತು. ಇದಾದ ನಂತರ, ಬೆಂಗಳೂರಿನಲ್ಲಿ ಏಪ್ರಿಲ್ 15 ರಂದು ಬೆಳಿಗ್ಗೆ 9 ಗಂಟೆಗೆ 30 ಗಂಟೆಗಳ ಆಫ್‌ಲೈನ್ ಹ್ಯಾಕಥಾನ್ ಅನ್ನು ರಾಜ್ಯ ಚುನಾವಣಾಧಿಕಾರಿಗಳು ಉದ್ಘಾಟಿಸಿದರು. ಏಪ್ರಿಲ್ 16 ರಂದು ಸಂಜೆ 4 ಗಂಟೆಗೆ ಹ್ಯಾಕಥಾನ್‌ನ ವಿಜೇತರನ್ನು ಘೋಷಿಸಲಾಯಿತು.

ತಂತ್ರಜ್ಞಾನ ಮತ್ತು ಯುವ ಜನರ ಸೃಜನಶೀಲ ಕೌಶಲ್ಯವನ್ನು ಬಳಸಿಕೊಂಡು ದೇಶದ ಚುನಾವಣಾ ಪ್ರಕ್ರಿಯೆಯನ್ನು ಉನ್ನತೀಕರಿಸುವ ಉದ್ದೇಶದಿಂದ ಈ ಕೆಳಕಂಡ ಮೂರು ಸವಾಲುಗಳನ್ನು ಹ್ಯಾಕಥಾನ್ ತಂಡಗಳಿಗೆ ನೀಡಲಾಗಿತ್ತು.

ಹ್ಯಾಕಥಾನ್ ಕಾರ್ಯಕ್ರಮದಲ್ಲಿ ಒಂದನೇ ಸವಲಾಗಿ "ನಿರ್ದಿಷ್ಟವಾಗಿ ಮತದಾರರ ಪಟ್ಟಿಯಲ್ಲಿ ಹೊಸ ಮತದಾರರ ನೋಂದಣಿ" ಯನ್ನು ನೀಡಲಾಗಿತ್ತು. ದೇಶದಲ್ಲಿ 18 ತುಂಬಿದ ಯುವ ಮತದಾರರ ಮತದಾನಪಟ್ಟಿಯಲ್ಲಿ ನೋಂದಣಿ ಮಾಡುವ ಪ್ರಕ್ರಿಯೆಯನ್ನು ಚುರುಕುಗೊಳಿಸುವ ಹಾಗೂ ಮತದಾರರ ಪಟ್ಟಿಯನ್ನು ಸರಳೀಕೃತಗೊಳಿಸುವ ಬಗ್ಗೆ ಸಲಹೆ ಹಾಗೂ ರೂಪುರೇಷೆಗಳನ್ನು ನೀಡುವುದಾಗಿತ್ತು.

ಎರಡನೇ ಸವಾಲಾಗಿ "ಚುನಾವಣೆಯಲ್ಲಿ ನಗರ ಮತ್ತು ಯುವ ಮತದಾರರ ಭಾಗವಹಿಸುವಿಕೆ" ಎಂದು ನೀಡಲಾಗಿತ್ತು. ಮತದಾನ ಪ್ರಜಾಪ್ರಭುತ್ವದ ಹಬ್ಬವಾಗಿದ್ದು, ನಗರ ಹಾಗೂ ಯುವ ಮತದಾರರನ್ನು ವಿವಿಧ ಮಾರ್ಗಗಳ ಮೂಲಕ ಮತದಾನದತ್ತ ಸೆಳೆಯಲು ಯೋಜನೆ ರೂಪಿಸುವುದು.

## ಮತದಾರರು ಪ್ರಜಾಪ್ರಭುತ್ವದ ನಿಜವಾದ ಪ್ರಭುಗಳು

ಜನತೆಯಲ್ಲಿ ರಾಜಕೀಯ ಅರಿವಿನಿಂದ ಸರ್ಕಾರವನ್ನು ಬದಲಾಯಿಸಬಹುದಾಗಿದೆ. ಪ್ರಜಾಪ್ರಭುತ್ವದ ಮೂಲಕ ಸರ್ಕಾರವನ್ನು ಚುನಾಯಿಸುವುದೇ ಮತದಾನದ ಶಕ್ತಿಯಾಗಿದೆ. ಮತದಾರರು ಪ್ರಜಾಪ್ರಭುತ್ವದ ನಿಜವಾದ ಪ್ರಭುಗಳು. ಮತದಾರರಲ್ಲಿ ಮತದಾನದ ಪ್ರಜ್ಞೆ ಮತ್ತು ಅದರ ಶಕ್ತಿಯನ್ನು ಬಳಸಿಕೊಳ್ಳುವ ಕುರಿತು ಅರಿವು ಮೂಡಿಸುವ ಕೆಲಸವನ್ನು ಚುನಾವಣಾ ಆಯೋಗವು ಮಾಡುತ್ತಿದೆ.

**ಮನೋಜ್ ಕುಮಾರ್ ಮೀನಾ,**
ಕರ್ನಾಟಕ ಮುಖ್ಯ ಚುನಾವಣಾಧಿಕಾರಿ

ಮೂರನೇ ಸವಾಲಾಗಿ,"ಮತದಾನದ ದಿನದಂದು ಮತಗಟ್ಟೆಗಳಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸುವುದು"ಎಂಬ ಬಗ್ಗೆ ಪರಿಹಾರಗಳನ್ನು ಸೂಚಿಸುವುದು. ಮತದಾನದ ಹಕ್ಕಿನ ಬಗ್ಗೆ ಅರಿವಿದ್ದರೂ, ಮತದಾರರು ಅದನ್ನು ಚಲಾಯಿಸದಿರುವುದು ಸಮಸ್ಯೆಯಾಗಿದೆ. ಚುನಾವಣಾ ಗೀತೆಗಳು, ಜಿಂಗಲ್ಸ್‌ಗಳ ಮೂಲಕ ಮತದಾನದ ದಿನದಂದು ಮತದಾರರನ್ನು ಮತಗಟ್ಟೆಯತ್ತ ಸೆಳೆಯುವ ಪರಿಹಾರ ಮಾರ್ಗವನ್ನು ಕಂಡುಹಿಡಿಯುವುದು.

ಮೇಲೆ ತಿಳಿಸಿದ ಮೂರು ಸವಾಲುಗಳಿಗೆ ಅತ್ಯುತ್ತಮ ಪರಿಹಾರ ನೀಡಿದ ತಂಡಗಳಿಗೆ ಪ್ರಥಮ ಬಹುಮಾನವಾಗಿ ಮೂರು ತಂಡಗಳಿಗೆ ತಲಾ ರೂ. 1 ಲಕ್ಷ, ದ್ವಿತೀಯ ಬಹುಮಾನವಾಗಿ ಮೂರು ತಂಡಗಳಿಗೆ ತಲಾ 50 ಸಾವಿರ ಹಾಗೂ ವಿಶೇಷ ಬಹುಮಾನವಾಗಿ 50 ಸಾವಿರ ರೂ.ಗಳನ್ನು ನೀಡುವುದಾಗಿ ಪ್ರಕಟಿಸಲಾಗಿತ್ತು.

ಭಾರತ ಚುನಾವಣಾ ಆಯೋಗ ಹಾಗೂ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಮತ್ತು ಅಂತಾರಾಷ್ಟ್ರೀಯ ಮಾಹಿತಿ





Downloaded From:www.kpscvaani.com



ತಂತ್ರಜ್ಞಾನ ಸಂಸ್ಥೆ ವತಿಯಿಂದ ಹಮ್ಮಿಕೊಳ್ಳಲಾದ ಸತತ 30 ಗಂಟೆಗಳ ಈ ಹ್ಯಾಕಥಾನ್ ಅಭಿಯಾನವು ಏಪ್ರಿಲ್ 15 ರಂದು ಬೆಳಗ್ಗೆ 9 ಗಂಟೆಗೆ ಪ್ರಾರಂಭವಾಗಿ ಏಪ್ರಿಲ್ 16 ರಂದು ಸಂಜೆ 4 ಗಂಟೆಗೆ ಮುಕ್ತಾಯ ಗೊಳಿಸಲಾಯಿತು. ಈ ಅಭಿಯಾನದಲ್ಲಿ 2,936 ತಂಡಗಳು ಮತ್ತು 4,399 ಜನತೆ ಭಾಗಿಯಾಗಿದ್ದು, ಒಟ್ಟು 493 ಆಲೋಚನೆಗಳು ಸಲ್ಲಿಕೆಯಾಗಿದ್ದವು. ಇವುಗಳನ್ನು ಹಲವು ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಿ, ಬಲಿಷ್ಠ 40 ತಂಡಗಳನ್ನು ಎಲೆಕ್ಥಾನ್ 2023 ರ ಸ್ಪರ್ಧೆಗೆ ಆಯ್ಕೆ ಮಾಡಲಾಯಿತು.

ಆಯ್ಕೆಯಾದ 40 ತಂಡಗಳು ಸಲಹೆಗಳನ್ನು ಪರಿಶೀಲಿಸಿ, ನಂತರ ಆಯ್ದ 12 ತಂಡಗಳ ಐಡಿಯಾಗಳನ್ನು ಪ್ರಸ್ತುತ ಪಡಿಸಲು ಅವಕಾಶ ಕಲ್ಪಿಸಲಾಯಿತು. ಹ್ಯಾಕಥಾನ್‌ನಲ್ಲಿ ಸಲ್ಲಿಕೆಯಾದ ಸಲಹೆಗಳ ಪ್ರಸ್ತುತತೆ, ಕಲ್ಪನೆ, ಪರಿಣಾಮ, ತಾಂತ್ರಿಕ ಯೋಗ್ಯತೆ, ಕಾರ್ಯಸಾಧ್ಯತೆ, ಸ್ವಂತಿಕೆ ಮತ್ತು ವಿಶಿಷ್ಟತೆ ಸೇರಿದಂತೆ ವಿವಿಧ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನಗೊಳಿಸಿ, ಸೃಜನಶೀಲ ಹಾಗೂ ರಚನಾತ್ಮಕ ಸಲಹೆಗಳನ್ನು ಆಯ್ಕೆ ಮಾಡಿ ಪ್ರಶಸ್ತಿ ವಿಜೇತರನ್ನು ಘೋಷಿಸಲಾಯಿತು.

ಎಲೆಕ್ಥಾನ್ 2023 ರ ಕಾರ್ಯಕ್ರಮದಲ್ಲಿ ಉಜ್ವಲ್ ಘೋಷ್, (ಐಎಎಸ್) ಪಿ. ರಾಜೇಂದ್ರ ಚೋಳನ್, (ಐಎಎಸ್) ಮತ್ತು ಸೂರ್ಯ ಸೇನ್, (ಐಎಫ್‌ಎಸ್), ನವರತನ ಕಠಾರಿಯಾ ಅವರ ಮಾರ್ಗದರ್ಶನದಲ್ಲಿ ಯುವ ತಂಡಗಳಿಗೆ ಚುನಾವಣೆ ಕುರಿತು ತರಬೇತಿ ನೀಡಲಾಯಿತು.

ಹ್ಯಾಕಥಾನ್ ತೀರ್ಪುಗಾರ ಸದಸ್ಯರಾದ ವಿ. ಪೊನ್ನುರಾಜ್ (ಐಎಎಸ್) ಸರ್ಕಾರದ ಕಾರ್ಯದರ್ಶಿಗಳು ಡಿಪಿಎಆರ್ (ಇ-ಆಡಳಿತ), ಪ್ರೊ. ದೇಬಬ್ರತ ದಾಸ್ ನಿರ್ದೇಶಕರು, ಐಐಐಟಿ ಬೆಂಗಳೂರು ಮತ್ತು ಭಾರದ್ವಾಜ್ ಅಮೃತೂರ್, ಐಐಎಸ್ಸಿ ಬೆಂಗಳೂರು ಇವರು ತೀರ್ಪುಗಾರರಾಗಿದ್ದರು.

ಎಲೆಕ್ಥಾನ್ ಕಾರ್ಯಕ್ರಮಕ್ಕೆ ಎಲ್ಲ ರೀತಿಯ ಸಹಕಾರ ನೀಡಿದ ಇಂಟರ್ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಇನ್ಫರ್ಮೇಷನ್ ಟೆಕ್ನಾಲಜಿಯ (ಐಐಐಟಿ) ಆಡಳಿತ ವರ್ಗವನ್ನು ಅಭಿನಂದಿಸಲಾಯಿತು. ಕಡಿಮೆ ಅವಧಿಯಲ್ಲಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದ ಹ್ಯಾಕ್ 2 ಸ್ಕಿಲ್ ತಂಡವನ್ನೂ ಈ ಸಂದರ್ಭದಲ್ಲಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪ್ರತಿಭಾವಂತ ಯುವಸ್ಪರ್ಧಿಗಳ ಪರಿಹಾರಗಳು ಅತ್ಯುತ್ತಮವಾಗಿದ್ದು, ಭಾರತದ ಮತದಾನ ಪ್ರಕ್ರಿಯೆಯಲ್ಲಿ ಸುಧಾರಣೆ ಮತ್ತು ಕ್ರಾಂತಿಯನ್ನು ತರಬಹುದಾಗಿದೆ. ತಂತ್ರಜ್ಞಾನದ ಶಕ್ತಿ ಹಾಗೂ ಸಹಕಾರದ ಪ್ರಯತ್ನದಿಂದ ದೇಶದ ಅಭಿವೃದ್ಧಿಗಾಗಿ ಅರ್ಥಪೂರ್ಣ ಬದಲಾವಣೆಯನ್ನು ತರಬಹುದು ಎಂಬುದಕ್ಕೆ 'ಎಲೆಕ್ಥಾನ್ 2023' ಸ್ಪಷ್ಟ ಉದಾಹರಣೆಯಾಯಿತು.

'ಎಲೆಕ್ಥಾನ್ 2023' ರಲ್ಲಿ ಭಾಗಿಯಾಗಿರುವ ತಂಡಗಳು ಹಾಗೂ ವ್ಯಕ್ತಿಗಳ ಸಮರ್ಪಣೆ, ಬದ್ಧತೆ ಹಾಗೂ ಉತ್ಸಾಹದಿಂದ ಕಾರ್ಯಕ್ರಮ ಯಶಸ್ವಿಯಾಗಿದೆ. ದರ್ಭಂಗಾ, ನವದೆಹಲಿ, ನೊಯಿಡಾ, ಧಾರವಾಡ, ಭಿಲಾಯಿ, ಪಾಟ್ನ, ಇಂದೋರ್ ಸೇರಿದಂತೆ ಭಾರತದ ಮೂಲೆಮೂಲೆಗಳಿಂದ ಆಗಮಿಸಿದ ಯುವಕರ ತಂಡಗಳು ಹಾಗೂ ವ್ಯಕ್ತಿಗಳ ಅಪ್ರತಿಮ ಬುದ್ಧಿಶಕ್ತಿ, ಸೃಜನಶೀಲತೆ ಹಾಗೂ ತಂಡಸ್ಫೂರ್ತಿಗೆ ಕಾರ್ಯಕ್ರಮ ಸಾಕ್ಷಿಯಾಯಿತು.

ಇಂಟರ್ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಇನ್ಫರ್ಮೇಷನ್ ಟೆಕ್ನಾಲಜಿಯ (ಐಐಐಟಿ) ಹಾಗೂ ಹ್ಯಾಕ್ 2 ಸ್ಕಿಲ್ ತಂಡದ ಸಹಕಾರದೊಂದಿಗೆ ಎಲೆಕ್ಥಾನ್ ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು. ■

**ಸವಾಲು ವಿಜೇತ ತಂಡಗಳು**

ಸವಾಲು ಒಂದರ ಯುವ ಮತದಾರರ ನೋಂದಣಿ ವಿಭಾಗದಲ್ಲಿ ಬೆಂಗಳೂರಿನ ಫ್ಯೂಚರ್ ಫೋರ್ಸ್ ತಂಡವು ಒಂದು ಲಕ್ಷ ನಗದು ಬಹುಮಾನವನ್ನು, ಸವಾಲು ಎರಡರ ನಗರ ಮತ್ತು ಯುವ ಮತದಾರರ ಮತದಾನದ ಕಡೆ ಸೆಳೆಯುವಿಕೆ ವಿಭಾಗದಲ್ಲಿ ಚನ್ನೈನ ವಸೂಲಿ ತಂಡದವರು ಒಂದು ಲಕ್ಷ, ಕೊಯಂಬತ್ತೂರಿನ ಹ್ಯಾಕ್ ಓವರ್ ಫ್ಲೋ ಐವತ್ತು ಸಾವಿರ, ನಾಸಿಕ್‌ನ ಬ್ರೈನ್ ವೋಲ್ಟ್ಸ್ ಐವತ್ತು ಸಾವಿರ, ಬೆಂಗಳೂರಿನ ನೂಬ್ ಸ್ಮಾಷರ್ಸ್ ಇಪ್ಪತ್ತೈದು ಸಾವಿರ ಹಾಗೂ ಸವಾಲು ಮೂರರ ಮತದಾನದ ಪ್ರಮಾಣ ಹೆಚ್ಚಿಸುವಿಕೆಗೆ ಕ್ರಮ ವಿಭಾಗದಲ್ಲಿ ಚನ್ನೈನ ಟೆಕ್ ಮಿಲೆನಿಯಲ್ಸ್ ತಂಡ ಒಂದು ಲಕ್ಷ, ಪುಣೆಯ ವಿ ಹೈ ಟಿ ತಂಡ ಐವತ್ತು ಸಾವಿರ ಹಾಗೂ ಬೆಂಗಳೂರಿನ ದಿ ಸೆಫಾಲಜಿಸ್ಟ್ ಇಪ್ಪತ್ತೈದು ಸಾವಿರ ನಗದು ಬಹುಮಾನವನ್ನು ಪಡೆದುಕೊಂಡರು.



Downloaded From:www.kpscvaani.com





# ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಚುನಾವಣಾ ಪೂರ್ವಸಿದ್ಧತಾ ಪರಿಶೀಲನೆ

**ಉಪ ಮುಖ್ಯ ಚುನಾವಣಾ ಆಯುಕ್ತರು ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ ಬಿರುಸಿನ ಸಂಚಾರ ನಡೆಸಿ ಚುನಾವಣಾ ಪೂರ್ವಸಿದ್ಧತೆಗಳ ಪರಿಶೀಲನೆ ಚೆಕ್ ಪೋಸ್ಟ್ ಮತ್ತು ಮತಗಟ್ಟೆಗಳಿಗೆ ದಿಢೀರ್ ಭೇಟಿ ನೀಡಿದರು.**

ಎಂ. ಜುಂಜಣ್ಣ

**ಸಾ**ರ್ವತ್ರಿಕ ವಿಧಾನಸಭಾ ಚುನಾವಣೆಯ ದಿನಾಂಕ ಘೋಷಣೆಯಾದ ಹಿನ್ನೆಲೆಯಲ್ಲಿ ಇದೇ ಏಪ್ರಿಲ್ 12 ರಂದು ಭಾರತ ಚುನಾವಣಾ ಆಯೋಗದ ಉಪ ಮುಖ್ಯ ಚುನಾವಣಾ ಆಯುಕ್ತರಾದ ಅಜಯ್ ಭಾಡೂ ಮತ್ತು ರಾಜ್ಯ ಅಪರ ಮುಖ್ಯ ಚುನಾವಣಾಧಿಕಾರಿಗಳಾದ ರಾಜೇಂದ್ರ ಚೋಳನ್ ಅವರು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಿರುಸಿನ ಸಂಚಾರ ಮಾಡಿ ಚುನಾವಣೆ ಕಾರ್ಯಗಳ ಮಾಹಿತಿ ಪಡೆದರು.

ಚುನಾವಣಾ ನಿಮಿತ್ತ ತೆರೆದಿರುವ ಚೆಕ್ ಪೋಸ್ಟ್ ಗಳು ಮತ್ತು ವಿವಿಧ ಮತಗಟ್ಟೆಗಳಿಗೆ ಆಯುಕ್ತರು ದಿಢೀರ್ ಭೇಟಿ ನೀಡಿ ಸ್ಥಳೀಯ ಅಧಿಕಾರಿಗಳು ಮತ್ತು ಸಿಬ್ಬಂದಿಯಿಂದ ಅಗತ್ಯ ಮಾಹಿತಿಯನ್ನು ಪಡೆದು ಅವರ ಕಾರ್ಯ ವೈಖರಿಯನ್ನು ಪರಿಶೀಲಿಸಿದರು.

ವಿಧಾನಸಭಾ ಚುನಾವಣಾ ನೀತಿ ಸಂಹಿತೆಯು ಜಾರಿಯಾಗುವ ಮುನ್ನವೆ ಚುನಾವಣಾ ಆಯೋಗವು ಚುನಾವಣಾ ಪ್ರಕ್ರಿಯೆಗಳನ್ನು ಆರಂಭಿಸಿ ಪೂರ್ವ ತಯಾರಿಗಳನ್ನು ಮಾಡಿಕೊಳ್ಳಲು ಜಿಲ್ಲಾಡಳಿತಗಳಿಗೆ ಸೂಚನೆಗಳನ್ನು ನೀಡಿತ್ತು. ಮುಖ್ಯವಾಗಿ ಮತಗಟ್ಟೆಗಳಲ್ಲಿ ಇರಲೇಬೇಕಾದ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಪೂರೈಕೆ, ರ್‍ಯಾಂಪ್ ವ್ಯವಸ್ಥೆ, ಕಟ್ಟಡದ ಬಳಕೆಯ ಸುಸ್ಥಿತಿ, ಅಂತರ್ಜಾಲ ವ್ಯವಸ್ಥೆ ಸೇರಿದಂತೆ ಇನ್ನಿತರ ಸೌಕರ್ಯಗಳನ್ನು ಪರಿಶೀಲಿಸಿ, ಸಿದ್ಧಪಡಿಸಿಟ್ಟುಕೊಳ್ಳಲು ನಿರ್ದೇಶನ ನೀಡಿತ್ತು.

ಆ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಯಾವ ರೀತಿ ಚುನಾವಣೆ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲು ಹಾಗೂ ಇಲ್ಲಿ ಚುನಾವಣಾ ಕಾರ್ಯಕ್ಕೆ ನಿಯೋಜನೆಯಾಗಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ಯಾವ ರೀತಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂಬುದನ್ನು ಅವರು ಖುದ್ದು ಪರಿಶೀಲಿಸಿದರು.

ಮೊದಲಿಗೆ ರಾಷ್ಟ್ರೀಯ ಹೆದ್ದಾರಿ 44 ರ ಚದಲಪುರ ಬಳಿ ನಿರ್ಮಿಸಿರುವ ಚೆಕ್ ಪೋಸ್ಟ್‌ಗೆ ಭೇಟಿ ನೀಡಿದ ಉಪ ಚುನಾವಣಾ ಆಯುಕ್ತರು ವಾಹನ ತಪಾಸಣೆಯ ಕಾರ್ಯ ವಿಧಾನವನ್ನು ಪರಿಶೀಲಿಸಿದರು. ನಂತರ ನಂದಿ ಕ್ರಾಸ್ ಬಳಿ ನಿರ್ಮಿಸಿರುವ ಚೆಕ್ ಪೋಸ್ಟ್‌ನಲ್ಲಿ ತಪಾಸಣೆಯ ಕಡತಗಳನ್ನು ಪರಿಶೀಲಿಸಿದರು. ಆ ನಂತರ ನೇರವಾಗಿ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಸುಲ್ತಾನ್ ಪೇಟೆಯ ಸರ್ಕಾರಿ ಶಾಲೆಯಲ್ಲಿ ತೆರೆದಿರುವ ಮತಗಟ್ಟೆ 239 ರಲ್ಲಿನ ಮೂಲಭೂತ ಸೌಕರ್ಯಗಳನ್ನು ಪರಿವೀಕ್ಷಿಸಿ ಖಾತರಿ ಪಡಿಸಿಕೊಂಡರು.

ಮತಗಟ್ಟೆ ಭೇಟಿ ನಂತರ ನಂದಿಯಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲಾ



Downloaded From:www.kpscvaani.com



ಸ್ವೀಪ್ ಸಮಿತಿಯಿಂದ ಆಯೋಜಿಸಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ಥಳೀಯರಲ್ಲಿ ಮತದಾನದ ಮಹತ್ವದ ಬಗ್ಗೆ ತಿಳಿಸಿಕೊಟ್ಟರು. ಜೊತೆಗೆ ಮತದಾನದ ಪ್ರತಿಜ್ಞಾ ವಿಧಿಯನ್ನು ಸ್ವತಃ ಆಯುಕ್ತರು ಸ್ವಿಕರಿಸಿದರು. ಆ ನಂತರ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಂದಿ ಮಾದರಿ ಸರ್ಕಾರಿ ಶಾಲೆಯಲ್ಲಿ ತೆರೆದಿರುವ ಮತಗಟ್ಟೆ 236 ರ ಕಟ್ಟಡವನ್ನು ಪರಿಶೀಲಿಸಿದರು. ಮತಗಟ್ಟೆಗಳಿಗೆ ಭೇಟಿ ನೀಡಿದ ವೇಳೆ ಆಯುಕ್ತರು ಅಲ್ಲಿನ ಮತಗಳ ವಿವರ, ಹಿಂದಿನ ಮತದಾನದ ವಿವರವನ್ನು ಕಲೆಹಾಕಿದರು. ನಂತರ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಕಚೇರಿಗೆ ಭೇಟಿ ನೀಡಿ ಪ್ರಸ್ತುತ ನಡೆಯುತ್ತಿರುವ ಚುನಾವಣಾ ಪ್ರಕ್ರಿಯೆಗಳು ಮತ್ತು ಕೈಗೊಂಡಿರುವ ಚುನಾವಣಾ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಿ ಅಗತ್ಯ ಮಾಹಿತಿಯನ್ನು ಕಲೆಹಾಕಿದರು. ಈ ವೇಳೆ ಕೆಲವು ಸಲಹೆ ಸೂಚನೆಗಳನ್ನು ನೀಡಿದರು.

ಕೊನೆಯದಾಗಿ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಗಳ ಕಚೇರಿಗೆ, ಚೆಕ್ ಪೋಸ್ಟ್ ಗಳಿಗೆ, ಮತಗಟ್ಟೆಗಳಿಗೆ ಭೇಟಿ ನೀಡಿ ಸ್ಥಳೀಯ ಅಧಿಕಾರಿಗಳಿಂದ ಮಾಹಿತಿ ಪಡೆದು ಚುನಾವಣಾ ಸೌಕರ್ಯಗಳ ಬಗ್ಗೆ ಖಾತ್ರಿ ಪಡಿಸಿಕೊಂಡರು ಹಾಗೂ ಶಿಡ್ಲಘಟ್ಟ ತಾಲೂಕಿನ ಬೆಳ್ಳೂಟ್ಟಿ ಗ್ರಾಮದಲ್ಲಿ ಮತದಾನ ಜಾಗೃತಿಯ ಸ್ವೀಪ್ ಚಟುವಟಿಕೆ ಕೈಗೊಂಡು ಬೆಂಗಳೂರಿಗೆ ಹಿಂತಿರುಗಿದರು. ಬೇಸಿಗೆಯ ಬಿರು ಬಿಸಿಲಿನಲ್ಲಿ ಜಿಲ್ಲೆಯಾದ್ಯಂತ ಬಿರುಸಿನ ಸಂಚಾರ ನಡೆಸಿ ಚುನಾವಣಾ ಕಾರ್ಯಗಳನ್ನು ಮತ್ತಷ್ಟು ಚುರುಕು ಮುಟ್ಟಿಸಿದರು. ಜಿಲ್ಲೆಯಲ್ಲಿ ಕೈಗೊಂಡಿರುವ ಕಾರ್ಯಗಳನ್ನು ಸಮಚಿತ್ತದಿಂದ ಪರಿಶೀಲಿಸಿ ಸವಿಸ್ತಾರವಾಗಿ ಮಾಹಿತಿ ಕಲೆಯಾಕುವಲ್ಲಿ ಉಪ ಮುಖ್ಯ ಚುನಾವಣಾ ಆಯುಕ್ತರು ಸಫಲರಾದರು.



ಈ ಸಂದರ್ಭದಲ್ಲಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಪ್ರಕಾಶ್ ಜಿ.ಟಿ.ನಿಟ್ಟಾಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಎಲ್.ನಾಗೇಶ್, ಉಪವಿಭಾಗಾಧಿಕಾರಿ ಡಾ|| ಜಿ.ಸಂತೋಷ್ ಕುಮಾರ್, ತಹಸೀಲ್ದಾರ್ ಗಣಪತಿಶಾಸ್ತ್ರಿ, ತಾಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ಮಂಜುನಾಥ್, ಶಿಡ್ಲಘಟ್ಟ ವಿಧಾನಸಭಾ ಚುನಾವಣಾಧಿಕಾರಿ ಜಾವಿದ್ ನಾಸಿಮಾ ಖಾನಮ್, ಸೇರಿದಂತೆ ಸ್ಥಳೀಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಜರಿದ್ದರು.


Downloaded From:www.kpscvaani.com







# ಸಂಚಾರಿ ಅಣಕು ಮತಗಟ್ಟೆ

**ಬಾಗಲಕೋಟೆ ಜಿಲ್ಲಾಡಳಿತವು ಸ್ವೀಪ್ ಎಕ್ಸ್‌ಪ್ರೆಸ್ ವಾಹನದಲ್ಲಿ ಸಂಚಾರಿ ಅಣಕು ಮತಗಟ್ಟೆಯನ್ನು ತಯಾರು ಮಾಡಿ ಮತದಾನದ ಜಾಗೃತಿ ಮೂಡಿಸುತ್ತಿದೆ.**

ಮುತ್ತು ಹಳ್ಳದ

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನ್ನು ಬಳಸಿಕೊಂಡು ಅದರಲ್ಲಿ ಅಣಕು ಮತಗಟ್ಟೆ ಸೃಷ್ಟಿಸುವ ಮೂಲಕ ಯುವ ಮತದಾರರು ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡಲು ಬಾಗಲಕೋಟೆ ಜಿಲ್ಲಾಡಳಿತ ವಿನೂತನ ಪ್ರಯೋಗಕ್ಕೆ ಮುಂದಾಗಿದೆ.

ಜಿಲ್ಲಾ ಹಾಗೂ ರಾಜ್ಯ ಸ್ವೀಪ್ ರಾಯಭಾರಿಗಳನ್ನೊಳಗೊಂಡ ಭಾವಚಿತ್ರ, ಮತದಾನ ಜಾಗೃತಿಯ ಘೋಷಣಾ ವ್ಯಾಕ್ಯ, ಮತದಾನಕ್ಕೆ ಬೇಕಾದ ಗುರುತಿನ ಚೀಟಿ ಮಾಹಿತಿ, ಮತಗಟ್ಟೆ ಅಧಿಕಾರಿಗಳ ಮಾಹಿತಿಗಳೊಂದಿಗೆ ಸ್ವೀಪ್ ಎಕ್ಸ್‌ಪ್ರೆಸ್ ವಾಹನವನ್ನು ಶೃಂಗರಿಸಲಾಗಿದೆ. ಬಸ್ ಒಳಗೆ ಪ್ರವೇಶಿಸಿದಂತೆ ಮತದಾನ ಕೇಂದ್ರಕ್ಕೆ ಪ್ರವೇಶಿಸಿದಂತಾಗುತ್ತಿದ್ದು, ಮತಗಟ್ಟೆ ಅಧಿಕಾರಿ–1, ಮತಗಟ್ಟೆ ಅಧಿಕಾರಿ–2, ಮತಗಟ್ಟೆ ಅಧಿಕಾರಿ–3 ಹಾಗೂ ಪ್ರಿಸೈಡಿಂಗ್ ಅಧಿಕಾರಿಗಳ ಟೇಬಲ್ ಅನ್ನು ಕಾಣಬಹುದಾಗಿದೆ. ಮೊದಲ ಬಾರಿಗೆ ಯುವ ಮತದಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಂಚಾರಿ ಅಣಕು ಮತಗಟ್ಟೆ ಸೃಷ್ಟಿಸಲಾಗಿದೆ ಎಂದು ಬಾಗಲಕೋಟೆ ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ಹೇಳುತ್ತಾರೆ.

ಈ ಸ್ವೀಪ್ ಎಕ್ಸ್‌ಪ್ರೆಸ್ ವಾಹನದ ಮೂಲಕ ಜಿಲ್ಲೆಯಾದ್ಯಂತ ಸಂಚರಿಸಿ ಮತದಾನ ಜಾಗೃತಿ ಮೂಡಿಸುವಲ್ಲಿ ಮುಂದಾಗಿದೆ. ಸ್ವೀಪ್ ಎಕ್ಸ್‌ಪ್ರೆಸ್ ವಾಹನಕ್ಕೆ ಚಾಲನೆ ನೀಡುವ ಮೂಲಕ ಸಂಚಾರಿ ಅಣಕು ಮತಗಟ್ಟೆ ಬಸ್‌ನಲ್ಲಿ ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ಪ್ರಿಸೈಡಿಂಗ್ ಅಧಿಕಾರಿಯಾಗಿ, ಜಿ.ಪಂ ಸಿಇಓ ಟಿ.ಭೂಬಾಲನ್ ಮತಗಟ್ಟೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುವ ಮೂಲಕ ಬಸ್‌ನಲ್ಲಿಯೇ ನಗರದ ನಾನಾ ಕಡೆಗಳಲ್ಲಿ ಸಂಚರಿಸುವ ಮೂಲಕ ಮತದಾರರ ಗಮನ ಸೆಳೆಯುವಂತೆ ಮಾಡಲಾಗುತ್ತಿದೆ.



Downloaded From:www.kpscvaani.com




ನವನಗರದ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಆಗಮಿಸಿದ ಸ್ವೀಪ್ ಎಕ್ಸ್‌ಪ್ರೆಸ್ ಬಸ್ ಪ್ರಥಮ ಬಾರಿಗೆ ಮತ ಚಲಾಯಿಸುವ ವಿದ್ಯಾರ್ಥಿಗಳಿಗೆ ಮತ ಹಾಕುವುದನ್ನು ತಿಳಿಸಿಕೊಡಲಾಯಿತು. ಇದರಿಂದ ಪುಳಕಿತಗೊಂಡ ವಿದ್ಯಾರ್ಥಿಗಳು ತಮ್ಮ ಹೊಸ ಅನುಭವವನ್ನು ಹೇಳಿದರು.

ಅಭಿಪ್ರಾಯ ವ್ಯಕ್ತಪಡಿಸಿದ ವಿದ್ಯಾರ್ಥಿಗಳು ಪ್ರಥಮ ಬಾರಿಗೆ ನಾವು ಮತಗಟ್ಟೆಗೆ ಹೋಗಿ ಮತ ಚಲಾಯಿಸುವದರ ಬಗ್ಗೆ ಭಯ ಮತ್ತು ತಳಮಳವಿತ್ತು. ಆದರೆ ಸ್ವೀಪ್ ಎಕ್ಸ್‌ಪ್ರೆಸ್ ಮೂಲಕ ಮತದಾನ ಹೇಗೆ ಮಾಡಬೇಕೆಂಬ ಸಮಗ್ರ ಮಾಹಿತಿ ಪಡೆಯಲಾಯಿತು. ಈ ಪ್ರಜಾಪ್ರಭುತ್ವದ ಹಬ್ಬದಲ್ಲಿ ಪ್ರಥಮ ಬಾರಿಗೆ ನಮ್ಮ ಹಕ್ಕನ್ನು ಚಲಾಯಿಸುತ್ತಿರುವುದು ಸಂತಸ ಉಂಟು ಮಾಡಿದೆ ಎಂದು ಹೇಳುತ್ತಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳು ಅಣಕು ಮತದಾನ ಮಾಡುವ ಮೂಲಕ ಜಾಗೃತರಾಗುತ್ತಿದ್ದಾರೆ.

ಪ್ರತಿ ಬಾರಿ ನಗರ ಪ್ರದೇಶಗಳಲ್ಲಿ ಕಡಿಮೆ ಮತದಾನವಾಗುತ್ತಿದ್ದು, ಈ ಬಾರಿ ಶೇ.80ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಮತದಾನವಾಗುವ ಗುರಿ ಹೊಂದಲಾಗಿದೆ. ಸ್ವೀಪ್ ಎಕ್ಸಪ್ರೆಸ್ ವಾಹನ ಜಿಲ್ಲೆಯಾದ್ಯಂತ ಸಂಚರಿಸಿ ಮತದಾನದ ಮಹತ್ವವನ್ನು ಸಾರುವುದರ ಜೊತೆಗೆ ಮೊದಲ ಬಾರಿಗೆ ಮತದಾನ ಮಾಡುವ ಯುವಕರಿಗೆ ಮತಗಟ್ಟೆಯ ಅನುಭವವನ್ನು ಉಣಬಡಿಸಲು ಬಸ್‌ನಲ್ಲೇ ಅಣಕು ಪ್ರಾತ್ಯಕ್ಷಿಕೆ ನಡೆಸಲಾಗುತ್ತದೆ. ಅಲ್ಲದೇ ಕಡಿಮೆ ಮತದಾನವಾಗುವ ಪ್ರದೇಶಗಳಿಗೆ ಸಂಚರಿಸಿ ಮತದಾನದ ಜಾಗೃತಿ ಮೂಡಿಸಲಾಗುತ್ತಿದೆ. ಅಂತಾರಾಷ್ಟ್ರೀಯ ವಿಶೇಷ ಚೇತನ ಕ್ರೀಡಾಪಟು ಸಿದ್ದರೂಢ ಕೊಪ್ಪದ ಮತ್ತು ಜಾನಪದ ವಿದ್ವಾಂಸ ಡಾ.ಶಂಬು ಬಳೆಗಾರ ಅವರನ್ನು ಜಿಲ್ಲೆಯ ಸ್ವೀಪ್ ರಾಯಭಾರಿಯನ್ನಾಗಿ ಮಾಡಲಾಗಿದೆ.

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿಗಳು ಒಂದು ವಾರದಲ್ಲಿ ಈ ಸ್ವೀಪ್ ಎಕ್ಸ್‌ಪ್ರೆಸ್ ವಾಹನವನ್ನು ಸಜ್ಜುಗೊಳಿಸಲು ಶ್ರಮಿಸಿದ್ದಾರೆ. ಅದ್ಭುತವಾಗಿ ಸಂಚಾರಿ ಅಣಕು ಮತಗಟ್ಟೆ ವಾಹನ ತಯಾರು ಮಾಡಲಾಗಿದೆ. ಜಿಲ್ಲೆಯ ಏಳು ಮತಕ್ಷೇತ್ರ ವ್ಯಾಪ್ತಿಯಲ್ಲಿ ಸಂಚರಿಸುತ್ತಿದ್ದು, ಮತದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯ ನಡೆದಿದೆ.

### ಲಗ್ನ ಪತ್ರಿಕೆ ರೂಪದಲ್ಲಿ ಮತದಾನ ಆಮಂತ್ರಣ

ಸಾಮಾನ್ಯವಾಗಿ ಮನೆಗಳಲ್ಲಿ ಮದುವೆಗಳಾಗುತ್ತಿದ್ದರೆ ಮದುವೆ ಆಮಂತ್ರ ಪತ್ರಿಕೆ ತಯಾರಿಸಿ ಸಂಬಂಧಿಕರ, ಪರಿಚಯಸ್ಥರ ಮನೆ ಮನೆಗೆ ಹೋಗಿ ಆಮಂತ್ರಣ ಪತ್ರಿಕೆ ನೀಡಿ ಮದುವೆಗೆ ಆಹ್ವಾನಿಸುವುದು ವಾಡಿಕೆ. ಆದ್ರೆ ಚುನಾವಣೆ ಮತ್ತು ಮತದಾರ ಬಂಧುಗಳ ಸಮಾರಂಭ ಎಂಬ ಶೀರ್ಷಿಕೆಯಡಿ ಗಂಡು ಹೆಣ್ಣಿನ ಭಾವಚಿತ್ರ ಬಿಡಿಸಿ, ವಿಳಾಸ ಸ್ಥಳದಲ್ಲಿ ನಿಮ್ಮ ಹೆಸರು ನಮ್ಮ ಮತದಾರ ಪಟ್ಟಿಯಲ್ಲಿದೆ. ನಿಮಗೂ ನಿಮ್ಮ ಕುಟುಂಬಕ್ಕೂ ಮತದಾನ ಕೇಂದ್ರಕ್ಕೆ ಆದರದ ಸ್ವಾಗತ, ತಮ್ಮ ಆಗಮನಾಭಿಲಾಷಿಗಳಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ತಾಲೂಕಾ ಮಟ್ಟದ ಸಕಲ ಅಧಿಕಾರಿ ವರ್ಗ ಅಂತ ಬರೆದು ಕೊನೆಯಲ್ಲಿ ಬನ್ನಿ ಮತದಾನ ಮಾಡಿ ಅಂತ ಆಹ್ವಾನಿಸಿರುವ ರೀತಿ ಎಲ್ಲರ ಗಮನ ಸೆಳೆಯುತ್ತಿದೆ.

ಬಾಗಲಕೋಟೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ನಂದಾ ಹನಮರಟ್ಟಿ ಅವರು ತಮ್ಮ ವಿಶೇಷ ವ್ಯಂಗ್ಯ ಕಲಾಕೃತಿಗಳ ಮೂಲಕ ಮತದಾನ ಜಾಗೃತಿಗೆ ವಿನೂತನ ಶೈಲಿಯ ಕಾರ್ಯಕ್ಕೆ ಮುಂದಾಗಿದ್ದಾರೆ. ಒತ್ತಡದ ಇಲಾಖೆಯ ಅಧಿಕಾರಿಯಾಗಿರುವ ಅವರು ಕೆಲಸದ ಒತ್ತಡದ ಮಧ್ಯದಲಿದ್ದರೂ ಕೂಡಾ ಮತದಾನ ಜಾಗೃತಿಗೆ ಕೈ ಗೂಡಿಸಿ ಅಳಿಲ ಸೇವೆ ಮಳಲ ಭಕ್ತಿ ಎಂಬಂತೆ ತಮಗೆ ಒಲಿದು ಬಂದ ಕಲೆಯನ್ನು ಮತದಾನ ಜಾಗೃತಿಯಲ್ಲಿ ಅನಾವರಣಗೊಳಿಸಿದ್ದಾರೆ.

ಮತದಾನದ ಪಾಠ ಎಂಬ ಶೀರ್ಷಿಕೆಯಡಿ ಒಂದು ಎರಡು ಬೂತ್‌ಗೆ ಹೊರಡು, ಮೂರು ನಾಲ್ಕು ನಿನ್ನದೇ ಹಕ್ಕು, ಐದು ಆರು ಜಾಣ್ಮೆಯ ತೋರು, ಏಳು ಎಂಟು ಅವಕಾಶ ಉಂಟು, ಒಂಭತ್ತು ಹತ್ತು ಯೋಗ್ಯರಿಗೆ ಬಟನ್ ಒತ್ತು ಎಂಬ ಮಗ್ಗಿ ಸಾಲುಗಳ ಈ ಚಿಕ್ಕ ಚಿಕ್ಕ ಸಾಲುಗಳ ಅಂತ್ಯ ಪ್ರಾಸಬದ್ಧ ಪದ್ಯ ಇದೀಗ ಮತದಾನದ ಅರಿವು ಮೂಡಿಸುತ್ತಿದೆ. ಮತ ಚಲಾವಣೆಗೂ ಮುನ್ನ ಗಂಡ ಹೆಂಡತಿ ಭಾವಚಿತ್ರ ಬಿಡಿಸಿ ಮತಗಟ್ಟೆ ಕೇಂದ್ರ ಈ ಕಡೆ ಅಯ್ಯೋ ...! ಈ ಕಡೆ ಎಂಬ ಬರಹವುಳ್ಳ ಚಿತ್ರ ಮತದಾನ ದಿನಕ್ಕೂ ಮುನ್ನವೇ ನಮ್ಮ ಮತದಾನ ಕೇಂದ್ರ ಗುರುತಿಸಿ, ಮತದಾರರ ಪಟ್ಟಿಯಲ್ಲಿ ಹೆಸರು ಇರುವಿಕೆ ಖಚಿತಪಡಿಸಿ, ನಮ್ಮ ಮತಗಟ್ಟೆ ಎಲ್ಲಿದೆ ಎಂಬುದರ ಬಗ್ಗೆ ಮೊದಲೇ ತಿಳಿಯುವ ಮಾದರಿಯಲ್ಲಿ ಚಿತ್ರ ಬಿಡಿಸಿದ್ದಾರೆ.

ಸಾಂದರ್ಭಿಕ ರೀತಿಯಲ್ಲಿ ಕಲಾ ಚಿತ್ರ ಬಿಡಿಸುವುದು ನನಗೆ ಮೊದಲಿನಿಂದಲೂ ಹವ್ಯಾಸ. ಆದರೆ ಜನರಿಗೆ ವಿಶೇಷ ಚಿತ್ರ ಬಿಡಿಸುವ ಮೂಲಕ ಕುತೂಹಲ ಮೂಡಿಸಿ ಮತದಾನದ ಮಹತ್ವ ಜಾಗೃತಿ ಮೂಡಿಸುವ ಹಂಬಲವಿತ್ತು. ಇದಕ್ಕೆ ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ಸೇರಿದಂತೆ ಹಿರಿಯ ಅಧಿಕಾರಿಗಳು ನೀಡಿದ ಪ್ರೋತ್ಸಾಹವು ಮತ್ತಷ್ಟು ಖುಷಿ ಕೊಟ್ಟು ಆಸಕ್ತಿ ಹೆಚ್ಚಿಸಿತು. ಅವರ ಬೆಂಬಲ ಪ್ರೋತ್ಸಾಹದಿಂದ ಹೆಚ್ಚೆಚ್ಚು ಚಿತ್ರ ಬಿಡಿಸಿ ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವ ಮೂಲಕ ಜನರ ಅಂಗೈಗೆ ತಲುಪಿದ ಹೆಮ್ಮೆ ನನಗಿದೆ. ಇಂದಿನ ಚುನಾವಣೆ ಕಾಲಘಟ್ಟದಲ್ಲಿ ಬಿಡಿಸಿದ ಚಿತ್ರಕಲೆ ಕಲಾಕೃತಿಗಳ ಮೂಲಕ ಮತದಾನ ಜಾಗೃತಿ ಮೂಡಿಸಿದ ತೃಪ್ತಿ ಇದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ನಂದ ಹನಮರಟ್ಟಿ ಅವರು ಅಭಿಪ್ರಾಯಪಡುತ್ತಾರೆ.


Downloaded From:www.kpscvaani.com




# ಶಾಂತಿಯುತ ಚುನಾವಣೆಗೆ ಪೊಲೀಸರ ಸಹಕಾರ ಅತ್ಯವಶ್ಯಕ

ಪಿ. ಕೌಸಲ್ಯ

**ಮುಂ**ಬರುವ ಚುನಾವಾಣೆಯಲ್ಲಿ ನಿಷ್ಪಕ್ಷ ಹಾಗೂ ಶಾಂತಿಯುತ ಚುನಾವಣೆ ನಡೆಸಲು ಪೊಲೀಸರ ಸಹಕಾರ ಅತ್ಯಂತ ಅವಶ್ಯಕವಾಗಿರುತ್ತದೆ ಎಂಬುದು ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ಅಭಿಪ್ರಾಯವಾಗಿದೆ.

ಏಪ್ರಿಲ್ 2 ರಂದು ಪೊಲೀಸ್ ಧ್ವಜಾ ದಿನಾಚರಣೆ ಅಂಗವಾಗಿ ಕೋರಮಂಗಲದ ಕೆ.ಎಸ್.ಆರ್.ಪಿ ಫರೇಡ್ ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಕವಾಯತ್‌ನಲ್ಲಿ ವಂದನೆ ಸ್ವೀಕರಿಸಿ ಮಾತನಾಡಿದ ಮುಖ್ಯ ಕಾರ್ಯದರ್ಶಿ ಅವರು, ಮುಂಬರುವ ಚುನಾವಣೆಯನ್ನು ಯಾವುದೇ ಕಳಂಕ ಬಾರದ ರೀತಿಯಲ್ಲಿ ನಿಷ್ಪಕ್ಷ ಮತ್ತು ಶಾಂತಿಯುತವಾಗಿ ನಡೆಸಲು ಸಾರ್ವಜನಿಕರೊಂದಿಗೆ ಸಂಯಮದೊಂದಿಗೆ ವರ್ತಿಸುವ ಮೂಲಕ ತಮ್ಮ ಕರ್ತವ್ಯವನ್ನು ನಿರ್ವಹಿಸುವ ಜೊತೆಗೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡುವಂತೆ ನೋಡಿಕೊಳ್ಳಬೇಕೆಂದು ಪೊಲೀಸರಿಗೆ ಕರೆ ನೀಡಿದರು.

ಕಾನೂನು ಸುವ್ಯವಸ್ಥೆ ಹಾಗೂ ದಕ್ಷ ಆಡಳಿತದಲ್ಲಿ ಕರ್ನಾಟಕವು ದೇಶದಲ್ಲಿ ಮೊದಲ ಸ್ಥಾನದಲ್ಲಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ಬಾರಿ ಉತ್ತಮ ಸೇವೆ ಸಲ್ಲಿಸಿದ 137 ಪೊಲೀಸ್ ಸಿಬ್ಬಂದಿಗೆ ಮುಖ್ಯಮಂತ್ರಿ ಸೇವಾ ಪದಕ ದೊರೆತಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದು ಮುಖ್ಯ ಕಾರ್ಯದರ್ಶಿಗಳಾದ ವಂದಿತಾ ಶರ್ಮಾ ಅವರು ಹೆಮ್ಮೆ ವ್ಯಕ್ತಪಡಿಸಿದರು.

ನಮ್ಮ ರಾಜ್ಯವು ಉತ್ತಮ ಹಾಗೂ ಕಟ್ಟುನಿಟ್ಟಿನ ಕಾನೂನು ಸುವ್ಯವಸ್ಥೆಯನ್ನು ಹೊಂದಿರುವ ಕಾರಣದಿಂದ ರಾಜಧಾನಿ ಬೆಂಗಳೂರು ಸಿಲಿಕಾನ್ ಸಿಟಿಗೆ ದೇಶ-ವಿದೇಶಗಳಿಂದ ಬಂಡವಾಳ ಹೂಡಿಕೆದಾರರು ಆಗಮಿಸುತ್ತಿದ್ದಾರೆ. ಗೃಹ ಇಲಾಖೆಯು ಆಧುನಿಕ ತಂತ್ರಜ್ಞಾನ ವಿಧಾನವನ್ನು ಅಳವಡಿಸಿಕೊಂಡು, ವೃತ್ತಿಪರ ಕುಶಲತೆ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ನೇರ, ಸರಳ ಮತ್ತು ಜನಸ್ನೇಹಿಯಾಗಿ ಕರ್ತವ್ಯ ನಿರ್ವಹಿಸುತ್ತಿದೆ. ಹಾಗಾಗಿ ಸೈಬರ್ ಅಪರಾಧಗಳನ್ನು ಕಡಿಮೆ ಅವಧಿಯಲ್ಲಿ ಬಗೆಹರಿಸಿ, ದೂರುದಾರರಿಗೆ ನ್ಯಾಯ ದೊರಕಿಸಲಾಗುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಏಪ್ರಿಲ್ 02ರಂದು ಪೊಲೀಸ್ ಧ್ವಜಾ ದಿನಾಚರಣೆಯನ್ನಾಗಿ ಆಚರಿಸಿ ಪೊಲೀಸ್ ಸೇವೆಯಲ್ಲಿ ಇರುವವರೆಲ್ಲರೂ ತಮ್ಮನ್ನು ಸೇವೆಗೆ ಪುನರ್ ಸಮರ್ಪಿಸಿಕೊಳ್ಳುವುದಲ್ಲದೆ ಈ ದಿನವನ್ನು ಪೊಲೀಸ್ ಕಲ್ಯಾಣ


Downloaded From:www.kpscvaani.com



ದಿನವನ್ನಾಗಿ ಕೂಡ ಆಚರಿಸಲಾಗುತ್ತಿದೆ. ಈ ವಿಶೇಷ ದಿನದಂದು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರನ್ನು ಹಾಗೂ ಅವರ ಕುಟುಂಬದವರನ್ನು ನೆನಪಿಸಿಕೊಳ್ಳಲಾಗುತ್ತದೆ. ಹಾಗೆಯೇ ಕೋವಿಡ್ ಸಂದರ್ಭದಲ್ಲಿ ಹಗಲು-ರಾತ್ರಿ ಶ್ರಮವಹಿಸಿ ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಪ್ರಾಮಾಣಿಕ ಸೇವೆ ಗೈದಿರುವ ಪೊಲೀಸರನ್ನು ನಾವೆಲ್ಲರೂ ಸ್ಮರಿಸಲೇಬೇಕು ಎಂದರು.

ಈ ಪೊಲೀಸ್ ಧ್ವಜಾ ದಿನಾಚರಣೆಯನ್ನು ನೈತಿಕವಾಗಿ ಬೆಂಬಲಿಸಿ ಪೊಲೀಸ್ ಧ್ವಜವನ್ನು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಸಿ ಅವರ ಪ್ರಾಮಾಣಿಕ ಸೇವೆಗೆ ಬೆಂಬಲ ನೀಡುವಂತೆ ಕೂಡ ತಿಳಿಸಿದರು.

ಡಿಜಿ & ಐಜಿಪಿಯಾದ ಪ್ರವೀಣ ಮಸೂದ್ ಅವರು ಸ್ವಾಗತಿಸಿ ಮಾತನಾಡುತ್ತಾ, 1965ರಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆ ಜಾರಿಯಾಯಿತು. ಈ ನೆನಪಿಗಾಗಿ ಪೊಲೀಸ್ ಧ್ವಜಾ ಹಾಗೂ ಕಲ್ಯಾಣ ದಿನವನ್ನಾಗಿ ಆಚರಿಸಲಾಗುತ್ತಿದೆ. ಸೇವಾ ನಿರತ ಹಾಗೂ ನಿವೃತ್ತ ಸಿಬ್ಬಂದಿಗಳ ಸೇವಾಸ್ಮರಣೆಗಾಗಿ ಹಣ ನಿಧಿ ಸಂಗ್ರಹವನ್ನು ಮಾಡಲಾಗುತ್ತದೆ. ಈ ಬಾರಿ 137 ಪೊಲೀಸ್ ಸಿಬ್ಬಂದಿಗೆ ಮುಖ್ಯಮಂತ್ರಿ ಸೇವಾ ಪದಕ ದೊರೆತಿದ್ದು, ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಪದಕಗಳನ್ನು ವಿತರಿಸಲಾಗಿಲ್ಲ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯೆಲ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು. ಕೆ.ಎಸ್.ಆರ್.ಪಿ, ಸಿಎಆರ್, ಕೆಎಸ್‌ಐಎಸ್‌ಎಫ್, ರೈಲ್ವೆ, ಟ್ರಾಫಿಕ್ ಹಾಗೂ ಬಿಸಿಪಿ ಮಹಿಳಾ ತುಕಡಿ ಸೇರಿದಂತೆ ಶ್ವಾನದಳ ಮತ್ತು ಅಶ್ವದಳಗಳು ಪಥಸಂಚಲದಲ್ಲಿ ಭಾಗವಹಿಸಿದ್ದವು.

ನಾವೆಲ್ಲರೂ ಹಬ್ಬಗಳಲ್ಲಿ ಹೊಸ ಬಟ್ಟೆ ಧರಿಸಿ ಸಡಗರ ಸಂಭ್ರಮದಿಂದ ಕುಟುಂಬದವರೊಡಗೂಡಿ ಆಚರಿಸುತ್ತೇವೆ. ಅಪ್ಪ-ಅಮ್ಮ ಅಜ್ಜ-ಅಜ್ಜಿ, ಚಿಕ್ಕಮ್ಮ-ಚಿಕ್ಕಪ್ಪ, ಅತ್ತೆ-ಮಾವ, ಅಕ್ಕ-ಅಣ್ಣ, ತಮ್ಮ-ತಂಗಿ ಹೀಗೆ ಎಲ್ಲಾ ಸಂಬಂಧಗಳು ಅಂದು ಜೊತೆಗಿರುತ್ತಾರೆ. ಆದರೆ ಅಲ್ಲಿ ಒಬ್ಬರು ಮಾತ್ರ ಯಾವ ಹಬ್ಬ ಹರಿದಿನದಂದು ಮಿಸ್ಸಿಂಗ್ ಆಗಿರುತ್ತಾರೆ. ಅವರೇ ಪೊಲೀಸ್.

ಜಾತ್ರೆ, ಹಬ್ಬ-ಹರಿದಿನಗಳಲ್ಲಿ, ರಾತ್ರಿ-ಹಗಲು, ಬಿಸಲು-ಮಳೆ ಲೆಕ್ಕಿಸದೇ ನಮ್ಮೆಲ್ಲರ ರಕ್ಷಣೆಗಾಗಿ ಸಮಾಜದ ಸುಭದ್ರತೆಗಾಗಿ ಜೊತೆಗಿರುವ ಜೀವ ಅಂದರೆ ಅದು ನಮ್ಮ ಆರಕ್ಷಕರು ಎಂದರೆ ತಪ್ಪಾಗಲಾರದು. ಇತ್ತೀಚೆಗೆ ಇಡೀ ದೇಶವನ್ನೇ ಕಾಡಿದ ಕೋವಿಡ್ ಸಂದರ್ಭದಲ್ಲಿ ಪೊಲೀಸರ ಕಾರ್ಯ ನಿಜಕ್ಕೂ ಶ್ಲಾಘನೀಯ. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಹಗಲಿರುಳೆನ್ನದೆ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಜನರ ಸುರಕ್ಷತೆಗಾಗಿ ತಮ್ಮನ್ನು ಅರ್ಪಿಸಿಕೊಳ್ಳುತ್ತಾರೆ.

ಪೊಲೀಸ್ ಧ್ವಜ ದಿನಾಚರಣೆ ಹಿನ್ನಲೆ: 1965ರಲ್ಲಿ ಏಪ್ರಿಲ್ 2ರಂದು ಕರ್ನಾಟಕ ರಾಜ್ಯ ಪೊಲೀಸ್ ಕಾಯ್ದೆ ಜಾರಿಯಾಗಿದ್ದು, ಈ ದಿನವನ್ನು "ಪೊಲೀಸ್ ಧ್ವಜ" ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಪೊಲೀಸ್ ಸೇವೆಯಲ್ಲಿರುವವರೆಲ್ಲರೂ ತಮ್ಮನ್ನು ತಾವು ಸೇವೆಗೆ ಪುನರ್ ಸಮರ್ಪಿಸಿಕೊಳ್ಳುವುದಲ್ಲದೇ ಈ ದಿನವನ್ನು ಪೊಲೀಸ್ ಕಲ್ಯಾಣ ದಿನವನ್ನಾಗಿಯೂ ಕೂಡ ಆಚರಿಸಲಾಗುತ್ತದೆ. ಈ ವಿಶೇಷ ದಿನದಂದು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರನ್ನು ನೆನಸಿ ಅವರ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಚಿಂತಿಸಲಾಗುತ್ತದೆ. ಪೊಲೀಸರ ಕಾರ್ಯ ಕ್ಷಮತೆ ಹಾಗೂ ಇಲಾಖೆಯ ಸಾಧನೆ. ಘನತೆ, ಕಾಯಕನಿಷ್ಠೆಯನ್ನು ಸ್ಮರಿಸುವಂತದ್ದಾಗಿದೆ.

ನಿತ್ಯ ಜೀವನದಲ್ಲಿ ಶಾಂತಿ ಸೌಹಾರ್ದತೆಯನ್ನು ನಿರಂತರವಾಗಿ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ತೋರಿದ ಶೌರ್ಯ, ಸಾಹಸ ಹಾಗೂ ನಿಸ್ವಾರ್ಥ ಸೇವೆಯನ್ನು ನೆನಪಿಸುವಂತಹ ದಿನವಿದು. ಪೊಲೀಸ್ ಧ್ವಜಗಳನ್ನು ಮಾರಾಟ ಮಾಡಿ ಸಂಗ್ರಹವಾದ ಹಣದಲ್ಲಿ ಅರ್ಧದಷ್ಟು ಪೊಲೀಸ್ ಕಲ್ಯಾಣ ನಿಧಿಗೆ ಹಾಗೂ ಉಳಿದ ಅರ್ಧ ಹಣವನ್ನು ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮ ನಿಧಿಗೆ ಉಪಯೋಗಿಸಲಾಗುತ್ತದೆ. ಕಲ್ಯಾಣ ನಿಧಿಯ ಮೊತ್ತದಿಂದ ಸಿಬ್ಬಂದಿ ಮಕ್ಕಳ ವಿದ್ಯಾಭ್ಯಾಸ, ವೈದ್ಯಕೀಯ ವೆಚ್ಚ ಹಾಗೂ ಸಿಬ್ಬಂದಿ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಲಾಗುತ್ತದೆ.

ಕರ್ನಾಟಕ ರಾಜ್ಯವು ಅಪರಾಧ ಪ್ರಕರಣಗಳನ್ನು ಭೇದಿಸುವಲ್ಲಿ ದೇಶಕ್ಕೆ ಮೊದಲ ಸ್ಥಾನದಲ್ಲಿದೆಯಲ್ಲದೆ ಇತರೆ ರಾಜ್ಯಗಳಿಗೆ ಮಾದರಿಯಾಗಿದೆ. ರಾಜ್ಯದಲ್ಲಿ ನಾಗರಿಕ ಪೊಲೀಸ್, ಕರ್ನಾಟಕ ರಾಜ್ಯ ಸಶಸ್ತ್ರ ಪೊಲೀಸ್ , ನಗರ ಮತ್ತು ಜಿಲ್ಲಾ ಸಶಸ್ತ್ರ ಪಡೆ, ರಾಜ್ಯ ಕೈಗಾರಿಕಾ ಭದ್ರತಾ ಪಡೆ, ರೈಲ್ವೆ ಪೊಲೀಸ್ ಒಳಗೊಂಡು ಹಲವು ವಿಭಾಗಗಳಲ್ಲಿ ರಾಜ್ಯ ಪೊಲೀಸ್ ಇಲಾಖೆ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸುತ್ತಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಕೇಂದ್ರ ಅಪರಾಧ ವಿಭಾಗ, ಅಪರಾಧ ತನಿಖಾ ಇಲಾಖೆ, ಪೊಲೀಸ್ ತನಿಖಾ ಇಲಾಖೆ, ಪೊಲೀಸ್ ಶ್ವಾನದಳ, ಲೋಕಾಯುಕ್ತ, ಸುಧಾರಿತ ಸ್ಫೋಟಕ ಪತ್ತೆ ವಿಭಾಗಗಳಲ್ಲಿ ವಿಶೇಷ ತಂಡಗಳನ್ನು ರಚಿಸಿಕೊಂಡು ಸಮಾಜದಲ್ಲಿ ನಡೆಯುವ ವಿಧ್ವಂಸಕ ಕೃತ್ಯ ಮತ್ತು ಸಮಾಜ ಘಾತುಕ ಶಕ್ತಿಗಳ ಅಟ್ಟಹಾಸವನ್ನು ಮಟ್ಟಹಾಕುತ್ತಿದೆ. ಪುರುಷರಷ್ಟೇ ಅಲ್ಲದೆ ಪೊಲೀಸ್ ಇಲಾಖೆಯಲ್ಲಿ ಮಹಿಳೆಯರೂ ಸಹ ತಮ್ಮನ್ನು ತಾವು ತೊಟ್ಟಿಲನ್ನು ತೂಗುವ ಕೈ ದೇಶವನ್ನು ರಕ್ಷಿಸಬಲ್ಲದು ಎಂಬುದನ್ನು ತೋರಿಸುತ್ತಿದ್ದಾರೆ. ಕೆಲವು ಮಂದಿ ಪೊಲೀಸರು ತಮ್ಮ ನಿತ್ಯ ಕಾಯಕದ ಜೊತೆಗೆ ನೊಂದ ಜನರ ಕಷ್ಟಗಳಿಗೆ ನೆರವಾಗುವ ಮೂಲಕ ಸಮಾಜ ಸೇವೆಯಲ್ಲೂ ನಿರತರಾಗಿದ್ದಾರೆ.

ಪೊಲೀಸ್ ಬ್ಯಾಂಡ್‌ನ ಸುಶ್ರಾವ್ಯ ಸಂಗೀತದ ಜೊತೆಗೆ ಪೊಲೀಸ್ ಅಧಿಕಾರಿಗಳು ಧ್ವಜ ಹಿಡಿದು ಹೆಜ್ಜೆ ಹಾಕುತ್ತಿರುವುದನ್ನು ನೋಡಿದರೆ ರೋಮಾಂಚನವಾಗುತ್ತದೆ. ರಾಜ್ಯ ಪೊಲೀಸ್ ಇಲಾಖೆ ಇನ್ನಷ್ಟು ಗಮನಾರ್ಹ ಸೇವೆ ಸಲ್ಲಿಸಿ ದೇಶಕ್ಕೆ ಮತ್ತಷ್ಟು ಮಾದರಿಯಾಗಲಿ. ■



Downloaded From:www.kpscvaani.com




## ಚುನಾವಣಾ ಅಕ್ರಮ ತಡೆಯಲು ಬಳಸಿರಿ

# 'ಸಿ-ವಿಜಿಲ್' ಆ್ಯಪ್


**ಸಾರ್ವಜನಿಕರು 'ಸಿ-ವಿಜಿಲ್' ಆ್ಯಪ್ ಅನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಚುನಾವಣೆ ಸಂದರ್ಭದಲ್ಲಿ ನಡೆಯುವ ಅಕ್ರಮಗಳನ್ನು ತಡೆಯುವಂತೆ ಯಾದಗಿರಿ ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.**

ಸುಲೈಮಾನ್.ದ. ನದಾಫ್

ಚುನಾವಣಾ ಅಕ್ರಮಗಳನ್ನು ತಡೆದು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯನ್ನು ನಡೆಸುವ ಉದ್ದೇಶದಿಂದ ಚುನಾವಣಾ ಆಯೋಗವು ಸಿ-ವಿಜಿಲ್ (cVIGIL) ಆ್ಯಪ್ ಬಿಡುಗಡೆ ಮಾಡಿದ್ದು ಸಾರ್ವಜನಿಕರು ಇದನ್ನು ಸದ್ಬಳಕೆ ಮಾಡಿಕೊಂಡು ಪಾರದರ್ಶಕ ಚುನಾವಣೆ ನಡೆಸುವಲ್ಲಿ ಸಹಕರಿಸುವಂತೆ ಯಾದಗಿರಿ ಜಿಲ್ಲಾಧಿಕಾರಿಗಳಾದ ಸ್ನೇಹಲ್. ಆರ್ ಅವರು ತಿಳಿಸಿದ್ದಾರೆ.

ಚುನಾವಣಾ ಸಂದರ್ಭದಲ್ಲಿ ವಿವಿಧ ಪಕ್ಷಗಳು ಮತಗಳನ್ನು ಸೆಳೆಯಲು ಮತದಾರರಿಗೆ ಹಣ, ಹೆಂಡ ಹಾಗೂ ಇತರೆ ಆಸೆ, ಆಮಿಷ ಒಡ್ಡುತ್ತಾರೆ. ಇಂತಹ ಚುನಾವಣಾ ಅಕ್ರಮಗಳನ್ನು ತಡೆಯಬೇಕಾದರೆ ಸಾರ್ವಜನಿಕರು ತಮ್ಮ ಕಣ್ಣಮುಂದೆ ನಡೆಯುವ ಅಕ್ರಮಗಳನ್ನು ಬಲಿಗೆ ಎಳೆಯಬೇಕು. ಚುನಾವಣಾ ಆಯೋಗವು ಸಾರ್ವಜನಿಕರು ದೂರು ಸಲ್ಲಿಸಲು ಅನುಕೂಲ ಆಗುವಂತಹ ಸಿ-ವಿಜಿಲ್ ಆ್ಯಪ್ ಬಿಡುಗಡೆಗೊಳಿಸಿದೆ. ಸಿವಿಜಿಲ್ ಮೊಬೈಲ್ ಅಪ್ಲಿಕೇಷನ್ ಮೂಲಕ ಸಾರ್ವಜನಿಕರು ರೆಡ್ ಹ್ಯಾಂಡ್ ಆಗಿ ಅಕ್ರಮವನ್ನು ತಮ್ಮ ಮೊಬೈಲ್‌ಗಳ ಮೂಲಕ ನೇರವಾಗಿ ಆಯೋಗಕ್ಕೆ ಮಾಹಿತಿ ನೀಡಬಹುದು. ದೂರುದಾರರ ಹೆಸರು, ವಿಳಾಸವನ್ನು ಆಯೋಗವು ಗೌಪ್ಯವಾಗಿ ಇಡುವ ಭರವಸೆಯನ್ನು ಕೂಡ ನೀಡಿದೆ.


Downloaded From:www.kpscvaani.com




ಚುನಾವಣಾ ಸಮಯದಲ್ಲಿ ಮತದಾರರು ನಿರ್ದಿಷ್ಟ ವ್ಯಕ್ತಿ ಅಥವಾ ಪಕ್ಷಕ್ಕೆ ಮತ ಹಾಕುವಂತೆ ವಿವಿಧ ರೀತಿಯಲ್ಲಿ ಆಮಿಷ ನೀಡಬಹುದಾದ ಹಣ ವಿತರಣೆ, ಉಡುಗೊರೆಗಳು, ಕೂಪನ್ ವಿತರಣೆ, ಮದ್ಯ ವಿತರಣೆ, ಅನುಮತಿ ಇಲ್ಲದ ಪೋಸ್ಟರ್ ಮತ್ತು ಬ್ಯಾನರ್‌ಗಳು, ಬಂದೂಕುಗಳ ಪ್ರದರ್ಶನ ಹಾಗೂ ಬೆದರಿಕೆ, ಆಸ್ತಿ ವಿರೂಪ, ಧಾರ್ಮಿಕ ಅಥವಾ ಕೋಮು ಭಾಷಣಗಳು/ಸಂದೇಶಗಳು, ಮತಗಟ್ಟೆಯ 200 ಮೀಟರ್ ಪ್ರದೇಶದಲ್ಲಿ ಪ್ರಚಾರ, ನಿಷೇಧದ ಅವಧಿಯಲ್ಲಿ ಪ್ರಚಾರ, ಮತದಾನದ ದಿನದಂದು ವಾಹನಗಳಲ್ಲಿ ಮತದಾರರ ಸಾಗಣೆ ಮುಂತಾದ ಯಾವುದೇ ರೀತಿಯ ಪ್ರಲೋಭನೆ, ಬೆದರಿಕೆ ಹಾಗೂ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು ಕಂಡು ಬಂದಲ್ಲಿ ಸಾರ್ವಜನಿಕರೇ ನೇರವಾಗಿ ಸಿವಿಜಿಲ್ ಆ್ಯಪ್ ಮೂಲಕ ದೂರು ದಾಖಲಿಸಬಹುದು.

ಸ್ಮಾರ್ಟ್ ಫೋನ್‌ನ ಗೂಗಲ್ ಪ್ಲೇ ನಲ್ಲಿ ಸಿ-ವಿಜಿಲ್ ಆ್ಯಪ್ ಡೌನ್ ಲೋಡ್ ಮಾಡ್ಕೊಂಡು ಅತ್ಯಂತ ಸುಲಭವಾಗಿ ಇದನ್ನು ಬಳಸಬಹುದಾಗಿದೆ. ಅಕ್ರಮದ ಕುರಿತಾದ ಫೋಟೋ ಅಥವಾ ವಿಡಿಯೋ ಗಳನ್ನು ಅಪ್‌ಲೋಡ್ ಮಾಡಿ ದೂರು ನೀಡಬಹುದು. ಆ್ಯಪ್ ತಮ್ಮ ಸ್ವವಿವರ ನೀಡಿಯಾದರೂ, ಅಥವಾ ನೀಡದೆಯೂ ದೂರು ನೀಡಬಹುದು. ಆ್ಯಪ್‌ನಲ್ಲಿ ತಿಳಿಸಿದ 16 ರೀತಿಯ ದೂರುಗಳ ಪೈಕಿ ಒಂದನ್ನು ಸೆಲೆಕ್ಟ್ ಮಾಡಿ ಸೆಂಡ್ ಮಾಡಬಹುದು. ದೂರು ನೀಡುವ ಸಾರ್ವಜನಿಕರ ಹೆಸರನ್ನು ಗೌಪ್ಯವಾಗಿಡಲಾಗುವುದು.

ಈ ಆ್ಯಪ್ ಮೂಲಕ ದಾಖಲಾಗುವ ದೂರುಗಳನ್ನು ನಿರ್ವಹಿಸಲು ಜಿಲ್ಲಾಧಿಕಾರಿ ಕಚೇರಿ ಸೇರಿದಂತೆ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

**ಚುನಾವಣಾ ಅಕ್ರಮಗಳಿಗೆ ಕಡಿವಾಣ ಹಾಕಲು ಮತ್ತು ನೀತಿಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ದೂರು ಸ್ವೀಕರಿಸಲು ಚುನಾವಣಾ ಆಯೋಗವು ಸಿ-ವಿಜಿಲ್ ಆ್ಯಪ್ ಅನ್ನು ಸಿದ್ಧಪಡಿಸಿದೆ. ಹಾಗೆಯೇ ದಿನದ ಇಪ್ಪತ್ನಾಲ್ಕು ಗಂಟೆಗಳ ಕಾಲ ದೂರು ಸ್ವೀಕರಿಸಲು ಮೂರು ಪಾಳಿಯಲ್ಲಿ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಒಟ್ಟಿನಲ್ಲಿ ಚುನಾವಣಾ ಅಕ್ರಮಗಳನ್ನು ತಡೆಯುವಲ್ಲಿ ಸಾರ್ವಜನಿಕರನ್ನು ಸಹಭಾಗಿಗಳಾಗಿಸಿಕೊಂಡು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸಲು ಈ ಆ್ಯಪ್ ಸಹಕಾರಿಯಾಗಿದೆ.**



ಇವರು ಮತದಾನ ಮುಕ್ತಾಯವಾಗುವವರೆಗೂ 3 ಪಾಳಿಯಲ್ಲಿ ದಿನದ 24 ಗಂಟೆ ಕಾರ್ಯ ನಿರ್ವಹಿಸುವರು. ದೂರು ಬಂದ ಕೂಡಲೇ ಅವುಗಳನ್ನು ಪರಿಶೀಲಿಸಿ, ಸದರಿ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಾಪ್ತಿಯ ಫ್ಲೈಯಿಂಗ್ ಸ್ಕ್ವಾಡ್ ತಂಡಕ್ಕೆ ಪ್ರಕರಣದ ಸಂಪೂರ್ಣ ವಿವರ ಹಾಗೂ ಮಾಹಿತಿಯನ್ನು ರವಾನಿಸಲಾಗುತ್ತದೆ. ಈ ಮಾಹಿತಿ ಆಧಾರದಲ್ಲಿ ತಕ್ಷಣ ಸ್ಥಳಕ್ಕೆ ಭೇಟಿ ನೀಡುವ ಫ್ಲೈಯಿಂಗ್ ಸ್ಕ್ವಾಡ್ ಸಿಬ್ಬಂದಿ ದೂರು ಕುರಿತಂತೆ ಅಗತ್ಯ ಕ್ರಮ ಕೈಗೊಂಡು ಗರಿಷ್ಠ 100 ನಿಮಿಷದ ಒಳಗೆ ದೂರನ್ನು ಇತ್ಯರ್ಥ ಪಡಿಸುವರು.

ಸಾರ್ವಜನಿಕರು ಸಿ-ವಿಜಿಲ್ ಮಾತ್ರವಲ್ಲದೇ ಉಚಿತ ಸಹಾಯವಾಣಿ 1950 ಕ್ಕೆ ಕರೆ ಮಾಡಿ ಕೂಡ ಚುನಾವಣಾ ಅಕ್ರಮಗಳ ಕುರಿತು ದೂರು ನೀಡಬಹುದು ಹಾಗೂ ಯಾದಗಿರಿ ಕಂಟ್ರೋಲ್ ರೂಂ ನಂಬರ್ 08473253950 ಸಂಖ್ಯೆಗೆ ಕರೆ ಮಾಡಬಹುದು ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದ್ದಾರೆ.



Downloaded From:www.kpscvaani.com




# ಚುನಾವಣಾ ಪ್ರಚಾರದ ಅನುಮತಿಗಾಗಿ ಸು-ವಿಧಾ ತಂತ್ರಾಂಶ

ಸುರೇಶ್ ಹಿರೇಮಠ್

**ಪ್ರಚಾರದ ಅನುಮತಿಗಾಗಿ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಸು-ವಿಧಾ ತಂತ್ರಾಂಶವನ್ನು ಬಳಸುವ ಮೂಲಕ ಕಾರ್ಯ ಒತ್ತಡವನ್ನು ತಪ್ಪಿಸಬಹುದು.**

ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ–23 ರ ಹಿನ್ನೆಲೆಯಲ್ಲಿ ನಿಗಧಿತ ಅವಧಿಯೊಳಗೆ ಚುನಾವಣಾ ಸಂಬಂಧಿತ ಕಾರ್ಯ ಚಟುವಟಿಕೆಗಳನ್ನು ಮುಗಿಸುವ ಕಾರ್ಯ ಒತ್ತಡ ಚುನಾವಣಾ ಸಿಬ್ಬಂದಿ ಮತ್ತು ರಾಜಕೀಯ ಪಕ್ಷಗಳಿಗೆ ಇರುವುದು ಸಾಮಾನ್ಯ.

ಚುನಾವಣಾ ಪ್ರಚಾರ ಕಾರ್ಯಕ್ಕೆ ಅಗತ್ಯವಿರುವ ಅನುಮತಿಗಳನ್ನು ಸರಳವಾಗಿ ನೀಡಲು ಭಾರತ ಚುನಾವಣಾ ಆಯೋಗವು ಸು-ವಿಧಾ ತಂತ್ರಾಂಶದ ಆನ್ ಲೈನ್ ಅಪ್ಲಿಕೇಶನ್ ಅನ್ನು ನೀಡಿದೆ. ಇದನ್ನು ಬಳಸಿಕೊಳ್ಳುವ ಮೂಲಕ ಚುನಾವಣಾ ಪ್ರಚಾರಕ್ಕೆ ಅಗತ್ಯವಿರುವ ಅನುಮತಿಗಳನ್ನು ಪಡೆದುಕೊಳ್ಳಬೇಕೆಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಗುರುದತ್ತ ಹೆಗಡೆ ಅವರು ತಿಳಿಸಿದ್ದಾರೆ.

ಚುನಾವಣಾ ಸಿಬ್ಬಂದಿ ಮತ್ತು ಚುನಾವಣಾ ಅಭ್ಯರ್ಥಿಗಳ ಕಾರ್ಯ ಒತ್ತಡವನ್ನು ಸು–ವಿಧಾ ತಂತ್ರಾಂಶವು ಕಡಿಮೆ ಮಾಡಲಿದೆ. ಹಾಗಾಗಿ ಚುನಾವಣಾ ಪ್ರಚಾರದ ಅನುಮತಿಗಾಗಿ ಸು–ವಿಧಾ ತಂತ್ರಾಂಶ ಆನ್‌ಲೈನ್ ಬಳಸುವ ಮೂಲಕ ಅನಗತ್ಯ ಅಲೆದಾಟ ಮತ್ತು ಒತ್ತಡದಿಂದ ತಪ್ಪಸಿಕೊಳ್ಳುವಂತೆ ಜಿಲ್ಲಾ ಚುನಾವಣಾಧಿಕಾರಿ ಗುರುದತ್ತ ಹೆಗಡೆ ಅವರು ಅಭ್ಯರ್ಥಿಗಳಲ್ಲಿ ಮನವಿ ಮಾಡಿದ್ದಾರೆ.

ಸುವಿಧಾ ತಂತ್ರಾಂಶದಲ್ಲಿ ರಾಜಕೀಯ ಪಕ್ಷ, ಪಕ್ಷದ ಅಭ್ಯರ್ಥಿ, ಏಜಂಟ್, ಕಾರ್ಯಕರ್ತ ಅಥವಾ ಇತರು ತಮಗೆ ಬೇಕಿರುವ ಚುನಾವಣಾ ಪ್ರಚಾರ ಕಾರ್ಯಗಳಿಗೆ ಅನುಮತಿ ಪಡೆಯಲು ಆನ್ ಲೈನ್ ಮೂಲಕ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.

ಆದರೆ ಆನ್ ಲೈನ್ ಅರ್ಜಿಯನ್ನು 48 ಗಂಟೆ ಮೊದಲು ಸಲ್ಲಿಸಬೇಕು. ಸಲ್ಲಿಕೆಯಾದ ಅರ್ಜಿಯನ್ನು ಸಂಬಂಧಿಸಿದ ಇಲಾಖೆಗಳು ಪರಿಶೀಲಿಸಿ, ಒಪ್ಪಿಗೆ ನೀಡಿದ ನಂತರ ಆಯಾ ಚುನಾವಣಾಧಿಕಾರಿಗಳು ಅನುಮತಿ ಪತ್ರ ನೀಡುತ್ತಾರೆ.

ಚುನಾವಣಾ ಸಭೆ, ರ್‍ಯಾಲಿ, ಜಾಥಾ, ಪ್ರಚಾರ ಸಾಮಗ್ರಿ ಅಳವಡಿಕೆ, ವೇದಿಕೆ, ಮೈಕ್, ವಾಹನ, ಸಮಾರಂಭ ಮುಂತಾದ ರೀತಿಯ ಕಾರ್ಯಗಳಿಗೆ ( ಗೂಗಲ್ ಪ್ಲೇಸ್ಟೋರ್ ಇಸಿಐದಿಂದ SUVIDHA online Application) ಸು–ವಿಧಾದಲ್ಲಿ ಆನ್ ಲೈನ್ ಮುಖಾಂತರ ಅರ್ಜಿ ಸಲ್ಲಿಸಿ ಅನುಮತಿ ಪತ್ರ ಪಡೆಯಬಹುದು.

ವಿವಿಧ ರೀತಿಯ ಚುನಾವಣಾ ಪ್ರಚಾರ ಕಾರ್ಯ ಮತ್ತು ಅವುಗಳಿಗೆ ಸಂಬಂಧಿಸಿದಂತೆ ಮತಕ್ಷೇತ್ರ ವ್ಯಾಪ್ತಿಗೆ ಆಯಾ ಚುನಾವಣಾ ಅಧಿಕಾರಿಗಳು, ಜಿಲ್ಲಾ ವ್ಯಾಪ್ತಿಗೆ ಜಿಲ್ಲಾ ಚುನಾವಣಾ ಅಧಿಕಾರಿಗಳು ಮತ್ತು ರಾಜ್ಯಮಟ್ಟಕ್ಕೆ ರಾಜ್ಯ ಚುನಾವಣಾ ಆಯೋಗ ಅನುಮತಿ ಪತ್ರ ನೀಡುತ್ತದೆ.

ಕಡಿಮೆ ಅವಧಿಯಲ್ಲಿ ಅರ್ಜಿ ಸಲ್ಲಿಸಿ, ಅವಸರ, ಒತ್ತಡ ಮಾಡುವ ಬದಲು ಸು–ವಿಧಾ ಬಳಸಿ ಆನ್ ಲೈನ್ ಮೂಲಕ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ, ನಿಯಮಾನುಸಾರ ಅನುಮತಿ ಪಡೆದುಕೊಳ್ಳಬೇಕು ಮತ್ತು ಅನುಮತಿ ಪತ್ರದ ಅನುಗುಣವಾಗಿ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಜಿಲ್ಲಾ ಚುನಾವಣಾ ಅಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಗುರುದತ್ತ ಹೆಗಡೆ ರಾಜಕೀಯ ಪಕ್ಷ ಮತ್ತು ಅಭ್ಯರ್ಥಿಗಳಿಗೆ ಮನವಿ ಮಾಡಿದ್ದಾರೆ.



Downloaded From:www.kpscvaani.com



ಭಾರತದ ಪ್ರಪ್ರಥಮ ಮತ್ತು ಏಕೈಕ

# ಮ್ಯೂಸಿಕ್ ಮ್ಯೂಸಿಯಂ ಬೆಂಗಳೂರಿನಲ್ಲಿ !

ಡಿ.ಪಿ.ಮುರಳೀಧರ್

ಇದು ಭಾರತದ ಪ್ರಪ್ರಥಮ ಮತ್ತು ಏಕೈಕ ಮ್ಯೂಸಿಕ್ ಮ್ಯೂಸಿಯಂ ! ಹೌದು ! ಈ ಮ್ಯೂಸಿಯಂ ಇರುವುದು ನಮ್ಮ ಕರ್ನಾಟಕದ ರಾಜಧಾನಿ ಉದ್ಯಾನ ನಗರಿಯಲ್ಲಿ ! ಬೆಂಗಳೂರಿನ ಜಯಪ್ರಕಾಶ ನಾರಾಯಣ ನಗರದ ಏಳನೇ ಹಂತದ ಬ್ರಿಗೇಡ್ ಮಿಲೇನಿಯಂ ಕಟ್ಟಡದಲ್ಲಿ.

ಈ ಜಗತ್ತಿನಲ್ಲಿ ಮನುಕುಲದ ಜೊತೆ ಜೊತೆಗೆ ಸಂಗೀತವೂ ಹುಟ್ಟಿ ಬೆಳೆದಿದೆ. ಪ್ರಕೃತಿಯ ಸಿರಿ ಸೊಬಗಿನೊಂದಿಗೆ ಪ್ರಾಣಿಗಳ  ಘರ್ಜನೆ ಮತ್ತು ಚೀರಾಟ ಹಾಗೂ ಪಕ್ಷಿಗಳ ಚಿಲಿಪಿಲಿ ಕೂಡಾ ಒಂದು ರೀತಿಯ ಸಂಗೀತವೇ. ನಿಸರ್ಗದ ನಡುವೆ ಮರ ಗಿಡಗಳು ಮಾಡುವ ಸದ್ದೂ ಕೂಡಾ ಒಂದು ತರಹದ ಸಂಗೀತವೇ. ಕಡಲ ತೀರದಲ್ಲಿ ಹಾಗೂ ನದಿಯ ದಂಡೆಯಲ್ಲಿ ತಣ್ಣನೆ ಗಾಳಿ ಬೀಸುವಾಗ ಹೊರ ಹೊಮ್ಮುವ ದನಿಯೂ ಒಂದು ಶೈಲಿಯ ಸಂಗೀತವೇ.



Downloaded From:www.kpscvaani.com




ಹಿಂದೂ ಪುರಾಣಗಳ ಪ್ರಕಾರ ಸಂಗೀತದ ಉಗಮಕ್ಕೆ ಓಂಕಾರವೂ ಕಾರಣ. ಸಾಮ ವೇದದ ಮಂತ್ರೋಚ್ಛಾರಣೆ ಕೂಡಾ ಸಂಗೀತದ ಮೂಲಾಧಾರವಾಗಿದೆ. ಸ ರಿ ಗ ಮ ಪ ದ ನಿ ಎಂಬ ಏಳು ಸ್ವರಗಳು ಜನ್ಮ ತಾಳಿದ್ದು ಹೇಗೆ ? ಎಂಬ ಕಥನದ ಚಿತ್ರಣ ಈ ವಸ್ತು ಸಂಗ್ರಹಾಲಯದಲ್ಲಿದೆ.

ಸಂಗೀತವೇ ಹಾಗೇ ! ಮನಸ್ಸಿಗೆ ಮುದ ನೀಡುತ್ತದೆ, ಮೈ ನವಿರೇಳಿಸುತ್ತದೆ. ಭಾರತೀಯ ಸಂಗೀತ ಅನುಭವದ ಸಂವಾದಾತ್ಮಕ ಈ ವಸ್ತು ಸಂಗ್ರಹಾಲಯ ಕುರಿತು ವರ್ಣಿಸಲು ಅಸಾಧ್ಯ. ಒಮ್ಮೆ ಈ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿ ಅನುಭವ ಪಡೆಯುವುದೇ ಲೇಸು.

ಕರ್ನಾಟಕ ಶಾಸ್ತ್ರೀಯ, ಹಿಂದುಸ್ತಾನಿ ಶಾಸ್ತ್ರೀಯ, ಜಾನಪದ, ಚಿತ್ರ ಸಂಗೀತ ಹಾಗೂ ಪಾಶ್ಚಿಮಾತ್ಯ ಸಂಗೀತ ಹೀಗೆ ಸಂಗೀತದ ಎಲ್ಲಾ ಮಜಲುಗಳನ್ನೂ ಒಂದೇ ಸೂರಿನಡಿ ಕೇಳಿ ಅನುಭವಿಸಲು ಅವಕಾಶ ಕಲ್ಪಿಸುವ ಈ ಸಂಗೀತ ಸಂವಾದಾತ್ಮಕ ವಸ್ತು ಸಂಗ್ರಹಾಲಯ (ಮ್ಯೂಸಿಕ್ ಇಂಟರಾಕ್ಟೀವ್ ಮ್ಯೂಸಿಯಂ) ಕ್ಕೆ ಸರಿ ಸಮನಾದ ಮತ್ತೊಂದು ವಸ್ತು ಸಂಗ್ರಹಾಲಯ ಇಡೀ ದೇಶದಲ್ಲೇ ಬೇರೆಡೆ ಎಲ್ಲೂ ಇಲ್ಲ.

**ನಾದೋದ್ಯಾನ !**

ಈ ವಸ್ತು ಸಂಗ್ರಹಾಲಯದ ಪ್ರವೇಶ ದ್ವಾರದಲ್ಲಿ ನಾದೋದ್ಯಾನವಿದೆ. ಸಂಗೀತ ಹುಟ್ಟಿದ್ದು ಶಿಲೆಗಳಲ್ಲಿ ಹಾಗೂ ಮರಗಳಲ್ಲಿ ಎಂಬ ನಾದ ವಿಜ್ಞಾನವನ್ನು ಈ ನಾದೋದ್ಯಾನ ಪ್ರತಿಪಾದಿಸುತ್ತದೆ. ನೈಸರ್ಗಿಕ ಸಾಮಾಗ್ರಿಗಳಿಂದ ತಯಾರಿಸಿದ ಕೊಳವೆಯಾಕಾರದ ಗಂಟೆಗಳು ಹಾಗೂ ಹೂವಿನ ಪಂಜರಗಳಲ್ಲಿ ಹೊರಹೊಮ್ಮುವ ಕಂಪನಗಳು ಶಿಲೆಗಳು ಸಂಗೀತವನ್ನು ಹಾಡುತ್ತವೆ ಎಂಬ ಅನುಭವವನ್ನು ನೀಡುತ್ತವೆ.

**ಒಂಭತ್ತು ಛನ್ನಪಥಗಳು !**

ಮೂರು ಅಂತಸ್ತಿನ ಈ ವಸ್ತು ಸಂಗ್ರಹಾಲಯದಲ್ಲಿ ಒಟ್ಟು ಒಂಭತ್ತು ಛನ್ನಪಥ (ಗ್ಯಾಲರಿ) ಗಳಿವೆ. ನೋಡುಗರ ಮೊದಲ ಪ್ರವೇಶ ವಸ್ತು ಸಂಗ್ರಹಾಲಯದ ಮೂರನೇ ಮಹಡಿಗೆ. ಸಮಕಾಲೀನ ಅಭಿವ್ಯಕ್ತಿ, ದೇಶೀ ಸಂಪ್ರದಾಯ, ಜನರ ಹಾಡುಗಳು (ಜಾನಪದ ಗೀತೆಗಳು), ಕರಗುವ ಮಡಿಕೆ (ಮೆಲ್ಟಿಂಗ್ ಪಾಟ್) ಗ್ಯಾಲರಿಗಳು ಪ್ರೇಕ್ಷಕರನ್ನು ಆಕರ್ಷಿಸುತ್ತವೆ. ಅಷ್ಟೇ ಅಲ್ಲ ! ಪ್ರೇಕ್ಷಕರ ಮನ ತಣಿಸುತ್ತವೆ.

ಕರ್ನಾಟಕ ಶಾಸ್ತ್ರೀಯ ಹಾಗೂ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ರಾಗ ಮತ್ತು ಆಲಾಪನೆಗೆ ಆದ್ಯತೆ ದೊರೆಯುತ್ತಿತ್ತು. ಆದರೆ, ಸಮಕಾಲೀನ ಅಭಿವ್ಯಕ್ತಿಯಲ್ಲಿ ರಾಗದ ಜೊತೆಗೆ ವೇಗಕ್ಕೂ ಆದ್ಯತೆ. ದೇಶೀ ಸಂಸ್ಕೃತಿಯೊಳಗೆ ಪಾಶ್ಚಿಮಾತ್ಯದ ರಾಕ್ ಮ್ಯೂಸಿಕ್ ಎಂಬ ವಿದೇಶಿ ಸಂಸ್ಕೃತಿಯ ಮಿಳಿತ ಇದಾಗಿದೆ. ಇಂದಿನ ಯುವ ಪೀಳಿಗೆಗೆ ಇದು ಅಚ್ಚು ಮೆಚ್ಚು.

ಕರ್ನಾಟಕ ಶಾಸ್ತ್ರೀಯ ಹಾಗೂ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಶೃತಿ, ರಾಗ, ತಾಳ, ಘರಾನಾ, ದ್ರುಪದ್, ಖಯಾಲ್, ಕಛೇರಿ ಇವೆಲ್ಲದರ ಎಳೆತ ಮತ್ತು ಸೆಳೆತವೇ ದೇಶೀ ಸಂಪ್ರದಾಯ.

ಮಗು ಹುಟ್ಟಿದಾಗ ಹಾಡುವ ಹಾಡುಗಳು, ಮಗುವನ್ನು ಸುಧಾರಿಸಲು ಹಾಡುವ ಲಾಲಿ ಹಾಡುಗಳು, ರೈತರು ಗದ್ದೆಯಲ್ಲಿ ಭತ್ತ ನಾಟಿ ಮಾಡುವಾಗ, ಮಹಿಳೆಯರು ಮನೆಯಲ್ಲಿ ಭತ್ತ ಕುಟ್ಟುವಾಗ, ರಾಗಿ ಬೀಸುವಾಗ ಹಾಡುವ ಹಾಡುಗಳೇ ಜನರ ಹಾಡುಗಳು (ಜಾನಪದ ಗೀತೆಗಳು).

ಸಂಗೀತ ವಾದ್ಯಗಳ ಇತಿಹಾಸವನ್ನು ಬಣ್ಣಿಸುವ ಮೆಲ್ಟಿಂಗ್ ಪಾಟ್‌ನಲ್ಲಿ ಹಾರ್ಮೋನಿಯಂ, ವೈಯೋಲಿನ್ ನ ವೈಶಿಷ್ಟ್ಯತೆಗಳನ್ನು ಬಣ್ಣಿಸಲಾಗಿದೆ.

ನಂತರ, ಎರಡನೇ ಮಹಡಿಗೆ ಇಳಿದಾಗ ವಾದ್ಯಗಳ ಗ್ಯಾಲರಿ, ಸಂಗ್ರಾಮದ ಗೀತೆಗಳು, ಚಿತ್ರ ಸಂಗೀತ (ಹಾಡುಗಳ ಮೂಲಕ ಕಥೆಗಳ ತಿಳಿಸುವ ಗ್ಯಾಲರಿ), ನೂರಾರು ರೇಡಿಯೋ ಮತ್ತು ಟೆಲಿವಿಷನ್ ಮಾದರಿಗಳನ್ನು ರೀಚಿಂಗ್ ಔಟ್ ಗ್ಯಾಲರಿಯಲ್ಲಿ ಕಾಣಬಹುದು.

ಒಂದು ನೂರಕ್ಕೂ ಹೆಚ್ಚು ವಾದ್ಯಗಳ ಪ್ರದರ್ಶನ ವಾದ್ಯಗಳ ಗ್ಯಾಲರಿಯ ವಿಶೇಷ. ಮಯೂರ ವೀಣಾ, ನಾಗ ಫಣಿ ಗಮನಾರ್ಹ ವಾದ್ಯಗಳು ಇಲ್ಲಿನ ಆಕರ್ಷಣೆ. ಭಾರತದ ರಾಷ್ಟ್ರೀಯ ಚಳುವಳಿ ಮತ್ತು ರಾಷ್ಟ್ರಪ್ರೇಮ ಸಾರುವ ಗೀತೆಗಳು




Downloaded From:www.kpscvaani.com





ಸಂಗ್ರಾಮ ಗೀತೆಗಳ ಗ್ಯಾಲರಿಯಲ್ಲಿವೆ. ಹಿಂದಿ ಚಲನಚಿತ್ರ ಗೀತೆಗಳು ಹಾಗೂ ಕನ್ನಡ ಚಲನಚಿತ್ರ ಗೀತೆಗಳು ಚಲನಚಿತ್ರ ಸಂಗೀತದ ಗ್ಯಾಲರಿಯಲ್ಲಿದೆ.

ಚಿತ್ರ ಸಂಗೀತವನ್ನು ರದ್ದು ಮಾಡಿದ ಆಕಾಶವಾಣಿ (ಆಲ್ ಇಂಡಿಯಾ ರೇಡಿಯೋದಲ್ಲಿ) ಯ ತಪ್ಪು ನಿರ್ಧಾರ ರೇಡಿಯೋ ಸಿಲೋನ್ (ಶ್ರೀಲಂಕಾ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್) ನ ಜನಪ್ರಿಯತೆ ವೃದ್ಧಿಸಲು ಹೇಗೆ ಕಾರಣವಾಯಿತು ?

ರೇಡಿಯೋಗೆ ಪರವಾನಗಿ (ಲೈಸೆನ್ಸ್) ಪಡೆಯಬೇಕಾಗಿದ್ದ ಅಂದಿನ ಕಾಲದಲ್ಲಿ ರೇಡಿಯೋಗಳನ್ನು ಹೊಂದಿದ್ದ ಪ್ರತಿ ಹತ್ತು ಮಂದಿಯಲ್ಲಿ ಒಂಭತ್ತು ಮಂದಿ ರೇಡಿಯೋ ಸಿಲೋನ್ ಬಿತ್ತರಿಸುತ್ತಿದ್ದ ಹಿಂದಿ ಚಲನಚಿತ್ರ ಗೀತೆಗಳ ಕಾರ್ಯಕ್ರಮವನ್ನು ಕೇಳುತ್ತಿದ್ದರು ಎಂಬುದನ್ನು ಅರಿತ ಆಕಾಶವಾಣಿಯು ಚಿತ್ರ ಸಂಗೀತಕ್ಕಾಗಿಯೇ ವಿವಿಧ ಭಾರತಿ ಎಂಬ ಪ್ರತ್ಯೇಕ ಬಾನುಲಿ ವಾಹಿನಿಯನ್ನು ಪ್ರಾರಂಭಿಸಿ ತನ್ನ ಜನಪ್ರಿಯತೆಯನ್ನು ಮರಳಿ ಪಡೆದಿದ್ದು ಹೇಗೆ ? ರೇಡಿಯೋ ಸಿಲೋನ್‌ನಲ್ಲಿ ದಶಕಗಳ ಕಾಲ ಅಮೀನ್ ಸಯಾನಿ ಅವರು ನಡೆಸಿಕೊಡುತ್ತಿದ್ದ ಬಿನಾಕಾ ಗೀತ್ ಮಾಲಾ ಆಕಾಶವಾಣಿಯ ವಿವಿಧ ಭಾರತಿಯನ್ನು ಪ್ರವೇಶಿಸಿದ್ದು ಹೇಗೆ ? ಎಂಬ ಸ್ವಾರಸ್ಯ ಸಂಗತಿಗಳು ಇಲ್ಲಿ ಅನಾವರಣಗೊಳ್ಳುತ್ತವೆ.

ದೂರದರ್ಶನದ ಆರಂಭಿಕ ದಿನಗಳಲ್ಲಿ ಪ್ರಸಾರವಾಗುತ್ತಿದ್ದ ಚಿತ್ರಹಾರ್ ಇವೆಲ್ಲವನ್ನೂ ರೀಚಿಂಗ್ ಔಟ್ ಗ್ಯಾಲರಿಯಲ್ಲಿ ಕೇಳಿ ಆನಂದಿಸಬಹುದು. ಅಲ್ಲದೆ, ತಾರಾ ( ಸ್ಟಾರ್ ) ಗ್ಯಾಲರಿಯಲ್ಲಿ ಸಂಗೀತ ಲೋಕದ ದಿಗ್ಗಜರ ಧ್ವನಿಯಲ್ಲಿ ಮೊಳಗಿದ ಹಾಡುಗಳನ್ನು ಆಲಿಸಬಹುದು.

ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಮಹತ್ತರ ಕೊಡುಗೆ ನೀಡಿದ ತ್ರಿ-ಮೂರ್ತಿಗಳು ಎಂದೇ ಖ್ಯಾತರಾದ ಮುತ್ತುಸ್ವಾಮಿ ದೀಕ್ಷಿತರ್, ತ್ಯಾಗರಾಜರು ಹಾಗೂ ಶಾಮಶಾಸ್ತ್ರಿ, ಮಹಾನ್ ಗಾಯಕರಾದ ಡಾ ಮಂಗಳಂ ಪಲ್ಲಿ ಬಾಲ ಮುರಳಿ ಕೃಷ್ಣ, ಕೆ ಜೆ ಯೇಸುದಾಸ್, ಡಾ ಎಂ ಎಲ್ ವಸಂತ ಕುಮಾರಿ, ಡಿ ಕೆ ಪಟ್ಟಂಮ್ಮಾಳ್, ವೀಣಾ ವಾದಕರಾದ ಡಾ ಎಂ ವಿ. ದೊರೆಸ್ವಾಮಿ ಅಯ್ಯಂಗಾರ್, ಡಾ ಚಿಟ್ಟಿ ಬಾಬು, ಡಾ ಯಮನಿ ಶಂಕರ ಶಾಸ್ತ್ರಿ, ವೇಣು ವಾದಕರಾದ ಡಾ ಟಿ ಆರ್ ಮಹಾಲಿಂಗಂ, ಡಾ ಎನ್ ರಮಣಿ,



Downloaded From:www.kpscvaani.com

ಸ್ಯಾಕ್ಸೋಫೋನ್ ವಾದನದ ಮೇರು ಸಾಧಕ ಕದ್ರಿ ಗೋಪಾಲನಾಥ್, ಮ್ಯಾಂಡೋಲಿನ್ ಮ್ಯಾಸ್ಟ್ರೋಯು ಶ್ರೀನಿವಾಸ್ ಹೀಗೆ ಸಂಗೀತ ಲೋಕದ ದಿಗ್ಗಜರ ಯಶೋಗಾಥೆಗಳು ಇಲ್ಲಿವೆ.



ಸಂಗೀತ ಸಂರಕ್ಷಣೆ ಮೊದಲು ಹೇಗಿತ್ತು ? ಈಗ ಹೇಗಾಗಿದೆ ? ಎಂಬುದನ್ನೂ ಇಲ್ಲಿ ಸಚಿತ್ರವಾಗಿ ಕಾಣಬಹುದು. ಸ್ಪೂಲ್‌ನಲ್ಲಿ ಧ್ವನಿ ಮುದ್ರಿಸಿ ಸಂರಕ್ಷಿಸಲಾಗುತ್ತಿದ್ದ ಹಾಡುಗಳು, ನಂತರ ಗ್ರಾಮೋಪೋನ್ ಪ್ಲೇಟ್‌ಗಳಲ್ಲಿ, ತದ ನಂತರ, ಕ್ಯಾಸೆಟ್‌ಗಳಲ್ಲಿ, ನಂತರ ಕಾಂಪಾಕ್ಟ್ ಡಿಸ್ಕ್ (ಸಿ ಡಿ ) ಗಳಲ್ಲಿ, ಡಿಜಿಟಲ್ ವರ್ಸಟೈಲ್ ಡಿಸ್ಕ್ ( ಡಿವಿಡಿ ) ಗಳಲ್ಲಿ, ಮಿಂಖಣಜ ( ಪೆನ್ ಡ್ರೈವ್ ) ಗಳಲ್ಲಿ, ಮೈಕ್ರೋ ನ್ಯಾನೋ ಚಿಪ್‌ಗಳಲ್ಲಿ , ಮೆಮೊರಿ ಕಾರ್ಡ್‌ಗಳಲ್ಲಿ ಇದೀಗ ತಂತ್ರಜ್ಞಾನ ಮುಂದುವರೆದು ಮೊಬೈಲ್ ಉಪಕರಣಗಳಲ್ಲಿಯೇ, ವಿವಿಧ ಆ್ಯಪ್‌ಗಳು, ಐ–ಪ್ಯಾಡ್, ಐ–ಪಾಡ್‌ಗಳಲ್ಲಿ, ಅಂತರ್ಜಾಲ ತಾಣಗಳಲ್ಲಿ ಸಾವಿರಾರು ಹಾಡುಗಳನ್ನು ಸಂಗ್ರಹಿಸಿಡಬಹುದಾಗಿದೆ ಎಂಬ ಪ್ರಾತ್ಯಕ್ಷಿಕೆಯನ್ನು ಇಲ್ಲಿ ಕಾಣಬಹುದು.

**ಮ್ಯೂಸಿಯಂನಲ್ಲಿನ ವಿಶೇಷತೆಗಳು !**

ಕರ್ನಾಟಕ ಶಾಸ್ತ್ರೀಯ ಸಂಗೀತದ ಮೇರು ಗಾಯಕಿ ಹಾಗೂ ಮಹತ್ಸಾಧಕಿ ಭಾರತ ರತ್ನ ಎಂ ಎಸ್ ಸುಬ್ಬುಲಕ್ಷ್ಮಿ ಅವರು ಧರಿಸುತ್ತಿದ್ದ ಸಾಂಪ್ರದಾಯಿಕ ಸೀರೆ ಮತ್ತು ಬಳಸುತ್ತಿದ್ದ ತಂಬುರಾ, ಉತ್ಕೃಷ್ಠ ಸಿತಾರ್ ವಾದಕ ಭಾರತ ರತ್ನ ಪಂಡಿತ್ ರವಿ ಶಂಕರ್ ನುಡಿಸುತ್ತಿದ್ದ ಸಿತಾರ್, ಶಹನಾಯ್ ಮಾಂತ್ರಿಕ ಭಾರತ ರತ್ನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರೊಂದಿಗೆ ದಶಕಗಳ ಕಾಲ ಜೊತೆಗಿದ್ದ ಶಹನಾಯ್, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಶ್ರೇಷ್ಠ ಗಾಯಕ ಭಾರತ ರತ್ನ ಪಂಡಿತ್ ಭೀಮ್‌ಸೇನ್ ಜೋಶಿ ಅವರು ಉಪಯೋಗಿಸುತ್ತಿದ್ದ ಬೆಳ್ಳಿಯ ವೀಳ್ಯದೆಲೆ ಪೆಟ್ಟಿಗೆ (ಪಾನ್ ಬಾಕ್ಸ್), ಪಂಡಿತ್ ಜಸ್‌ರಾಜ್ ಅವರ ಸ್ವರ್ ಮಂಡಲ್ ಹಾಗೂ ಸುಪ್ರಸಿದ್ಧ ತಬಲಾ ವಾದಕ ಜಾಕೀರ್ ಹುಸೇನ್ ಅವರ ತಬಲಾ ಇವೆಲ್ಲವೂ ಈ ಮ್ಯೂಸಿಯಂನಲ್ಲಿ ನೋಡಲು ಕಾಣಸಿಗುವ ವಿಶೇಷತೆಗಳು.

ಇದೇ ಅಂತಸ್ತಿನಲ್ಲಿ ಒಂದು ರೆಕಾರ್ಡಿಂಗ್ ಸ್ಟೂಡಿಯೋ ಕೂಡಾ ಇದೆ. ಈ ಸ್ಟೂಡಿಯೋದಲ್ಲಿ ಹಿನ್ನೆಲೆ ಸಂಗೀತಕ್ಕೆ ಬೇಕಾದ ವಾದ್ಯಗಳನ್ನು ಆಯ್ಕೆ ಮಾಡಿ, ನಾವೇ ಹಾಡಿ, ಧ್ವನಿ ಮುದ್ರಿಸಿಕೊಂಡು ನಮ್ಮ ಮಿಂಚಂಚೆಗೆ ಇ–ಮೇಲ್ ಕಳುಹಿಸಿಕೊಳ್ಳಬಹುದಾಗಿದೆ. ಅಂತೆಯೇ, ಈ ವಸ್ತು ಸಂಗ್ರಹಾಲಯದ ಹಲವೆಡೆ ಅಳವಡಿಸಿರುವ ಹೆಡ್ ಫೋನ್‌ಗಳನ್ನು ಕಿವಿಗೆ ಹಾಕಿಕೊಂಡು ಇಷ್ಟವಾದ ವಾದ್ಯ, ಬೇಕಾದ ಹಾಡು ಅಥವಾ ಸಂಗೀತವನ್ನು ಕೇಳಬಹುದು.



**ಮ್ಯೂಸಿಯಂನಲ್ಲಿನ ವೈಶಿಷ್ಟ್ಯತೆಗಳು !**

ಮ್ಯೂಸಿಕ್ ಮ್ಯೂಸಿಯಂನ ಮೊದಲ ಮಹಡಿಯಲ್ಲಿ ಸಂಗೀತ ತರಗತಿಗಳಿವೆ. ಕರ್ನಾಟಕ ಶಾಸ್ತ್ರೀಯ, ಹಿಂದುಸ್ತಾನಿ ಶಾಸ್ತ್ರೀಯ, ಜಾನಪದ, ಚಿತ್ರ ಸಂಗೀತ ಹಾಗೂ ಪಾಶ್ಚಿಮಾತ್ಯ ಸಂಗೀತದ ಗಾಯನ ಅಥವಾ ವಾದನ ಎರಡನ್ನೂ ಕಲಿಯಲು ಅವಕಾಶ ಇಲ್ಲಿದೆ. ಕೋವಿಡ್–19 ರ ಉಪಟಳದ ನಂತರ, ಆಫ್ ಲೈನ್ ತರಗತಿಗಳು ಮಾತ್ರವಲ್ಲ, ಆನ್‌ಲೈನ್ ತರಗತಿಗಳೂ ಪ್ರಾರಂಭವಾಗಿವೆ. ತಾಳವಾದ್ಯಗಳೂ ಒಳಗೊಂಡಂತೆ ಇಪ್ಪತ್ತಕ್ಕೂ ಹೆಚ್ಚು ಸಂಗೀತ ಪರಿಕರಗಳ ಕಲಿಕೆಗೆ ಇಲ್ಲಿ ಬೋಧಕರು ಲಭ್ಯವಿದ್ದಾರೆ.





Downloaded From:www.kpscvaani.com




ಮ್ಯೂಸಿಕ್ ಮ್ಯೂಸಿಯಂನ ಭೇಟಿಯ ನಂತರ, ಕೆಳ ಅಂತಸ್ತಿನಲ್ಲಿರುವ ಗಿಫ್ಟ್ ಶಾಪ್ ಸಂಗೀತದ ಅಂಗಡಿಯಲ್ಲಿ ಇಷ್ಟವಾದ ಧ್ವನಿ ಸುರುಳಿ ಅಥವಾ ಚಿತ್ರ ಸುರುಳಿಯನ್ನೂ ಖರೀದಿಸಲು ಸಂದರ್ಶಕರಿಗೆ ಅವಕಾಶವಿದೆ. ಇದರ ಸಮೀಪದಲ್ಲಿಯೇ ಇಂಪಾದ ಸಂಗೀತದೊಂದಿಗೆ ಇಷ್ಟವಾದ ತಿನಿಸುಗಳನ್ನು ಸೇವಿಸಲು ತಿನಿಸುಧಾಮವೂ ಇದೆ.

ಬ್ರಿಗೇಡ್ ಗ್ರೂಪ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಂ ಆರ್ ಜೈ ಶಂಕರ್ ಅವರ ದೂರದೃಷ್ಟಿಯಲ್ಲಿ, ಹೆಸರಾಂತ ವೀಣಾ ವಾದಕಿ ಸುಮಾ ಸುಧೀಂದ್ರ ಮತ್ತು ವಸ್ತು ಸಂಗ್ರಹಾಲಯದ ನಿರ್ದೇಶಕಿ ಮಾನಸಿ ಪ್ರಸಾದ್ ಅವರ ಪರಿಕಲ್ಪನೆಯೊಂದಿಗೆ ಐದು ವರ್ಷಗಳ ಹಿಂದೆ ಅಂದರೆ 2019 ರಲ್ಲಿ ಪ್ರಾರಂಭವಾದ ಈ ಮ್ಯೂಸಿಕ್ ಮ್ಯೂಸಿಯಂ ಪ್ರತಿದಿನವೂ ನೂರಾರು ಹಾಗೂ ವಾರಾಂತ್ಯಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸಂದರ್ಶಕರನ್ನು ಸೆಳೆಯುತ್ತಿದೆ. ಸಂಗೀತ ರಸಿಕರಿಗೆ ರಸದೌತಣ ಉಣ ಬಡಿಸುವ ಈ ವಸ್ತು ಸಂಗ್ರಹಾಲಯವು ಸಂಗೀತ ಶಿಕ್ಷಣಕ್ಕೆ ಉತ್ತೇಜನ, ಸಂಗೀತ ಸಂರಕ್ಷಣೆಗೆ ಪ್ರೋತ್ಸಾಹ, ಸಂಗೀತ ಉಡುಗೊರೆಗೆ ಪ್ರೇರಣೆ ಹಾಗೂ ಸ್ಫೂರ್ತಿ ನೀಡುತ್ತಿದೆ.



**ಪ್ರವೇಶ ಶುಲ್ಕ ಮತ್ತು ಸಮಯ !**

ವಾರದ ದಿನಗಳಲ್ಲಿ ಮಂಗಳವಾರದಿಂದ ಭಾನುವಾರದವರೆಗೆ ಪ್ರತಿದಿನ ಬೆಳಿಗ್ಗೆ 10–00 ಗಂಟೆಯಿಂದ ಸಂಜೆ 6–00 ಗಂಟೆಯವರೆಗೆ ತೆರೆದಿರುವ ಈ ವಸ್ತು ಸಂಗ್ರಹಾಲಯಕ್ಕೆ ಸೋಮವಾರ ರಜಾ ದಿನ. ಆದರೆ, ಈ ವಸ್ತು ಸಂಗ್ರಹಾಲಯವು ಎಲ್ಲಾ ಸಾರ್ವಜನಿಕ ರಜಾ ದಿನಗಳಲ್ಲೂ ತೆರೆದಿರುತ್ತದೆ. ಎಲ್ಲಾ ಕಾರ್ಯ ದಿನಗಳಲ್ಲೂ ಸಂಜೆ 5–00 ಗಂಟೆಯ ನಂತರ ಪ್ರವೇಶಕ್ಕೆ ಅವಕಾಶವಿರುವುದಿಲ್ಲ.


ವಾರದ ದಿನಗಳಲ್ಲಿ ವಯಸ್ಕರು ಮತ್ತು 12 ವರ್ಷ ವಯೋಮಾನ ಮೇಲ್ಪಟ್ಟ ಮಕ್ಕಳಿಗೆ ಪ್ರವೇಶ ಶುಲ್ಕ 150 ರೂ. ಹತ್ತು ಮತ್ತು ಅದಕ್ಕಿಂತಲೂ ಹೆಚ್ಚು ಸದಸ್ಯರ ಗುಂಪುಗಳಿದ್ದಲ್ಲಿ ಪ್ರತಿಯೊಬ್ಬರಿಗೆ ಪ್ರವೇಶ ಶುಲ್ಕ 125 ರೂ. ಐದು ವರ್ಷ ವಯೋಮಾನದೊಳಗಿನ ಮಕ್ಕಳು ಅಥವಾ 60 ವರ್ಷ ವಯೋಮಾನ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಪ್ರವೇಶ ಶುಲ್ಕ 100 ರೂ.

ವಾರಾಂತ್ಯದಲ್ಲಿ ವಯಸ್ಕರು ಮತ್ತು 12 ವರ್ಷ ವಯೋಮಾನ ಮೇಲ್ಪಟ್ಟ ಮಕ್ಕಳಿಗೆ ಪ್ರವೇಶ ಶುಲ್ಕ 250 ರೂ. ಹತ್ತು ಮತ್ತು ಅದಕ್ಕಿಂತಲೂ ಹೆಚ್ಚು ಸದಸ್ಯರ ಗುಂಪುಗಳಿದ್ದಲ್ಲಿ ಪ್ರತಿಯೊಬ್ಬರಿಗೆ ಪ್ರವೇಶ ಶುಲ್ಕ 200 ರೂ. ಐದು ವರ್ಷ ವಯೋಮಾನದೊಳಗಿನ ಮಕ್ಕಳು ಅಥವಾ 60 ವರ್ಷ ವಯೋಮಾನ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಪ್ರವೇಶ ಶುಲ್ಕ 150 ರೂ.

ಪದವಿ ಪೂರ್ವ ಅಥವಾ 12 ನೇ ತರಗತಿವರೆಗಿನ ವಿದ್ಯಾರ್ಥಿ ಗುಂಪುಗಳಿಗೆ ಪ್ರತಿಯೊಬ್ಬರಿಗೆ ಪ್ರವೇಶ ಶುಲ್ಕ 100 ರೂ ಹಾಗೂ ಐದು ವರ್ಷದೊಳಗಿನ ಮಕ್ಕಳಿಗೆ ಪ್ರವೇಶ ಉಚಿತ ಎಂದು ಮ್ಯೂಸಿಯಂನ ಆಡಳಿತ ವಿಭಾಗದ ಮುಖ್ಯಸ್ಥೆ ಡಾ. ಅದಿತಿ ಗುಡಿ ಅವರು ತಿಳಿಸಿದ್ದಾರೆ.



Downloaded From:www.kpscvaani.com



## ಸತತ ಏಳು ದಶಕಗಳ ಕಾಲ ಹೆರಿಗೆ ಕಾಯಕ ನಡೆಸಿದ

# ನರಸಮ್ಮ

ಮೇ 12ರ ಅಂತಾರಾಷ್ಟ್ರೀಯ ನರ್ಸ್‌ಗಳ ದಿನಾಚರಣೆಯ ಪ್ರಯುಕ್ತ ಸೂಲಗಿತ್ತಿ ನರಸಮ್ಮ ಅವರ ಕುರಿತ ಲೇಖನವನ್ನು ಪ್ರಸ್ತುತ ಪಡಿಸಲಾಗಿದೆ.

ಆರ್. ರೂಪಕಲಾ

ಏನೂ ಹೆದ್ರಬೇಡ್ವೇ ನರಸಮ್ಮ ಬರ್ತಿದ್ದಾಳೆ... ಅಂದರೆ ಸಾಕು ಗರ್ಭಿಣಿ ಮಹಿಳೆಯರ ಆತಂಕ ಅರ್ಧಕ್ಕೆ ಅರ್ಧ ದೂರ ಆಗೋದು.

ಪ್ರತಿಯೊಂದು ಹೆಣ್ಣಿಗೂ ತಾಯ್ತನ ಎಷ್ಟು ಸಂಭ್ರಮದ ವಿಷಯವೋ... ಅಷ್ಟೇ ಆತಂಕದ ವಿಷಯವೂ ಹೌದು. ಆದರೆ ಗರ್ಭಿಣಿ ಮಹಿಳೆಯ ತಾಯಿ ಹಾಗು ಸುತ್ತಮುತ್ತಲಿನ ಪರಿಚಯಸ್ಥರು 'ಏನೂ ಹೆದ್ರಬೇಡ್ವೇ ನರಸಮ್ಮ ಬರ್ತಿದ್ದಾಳೆ' ಎಂಬ ಅಭಯದ ಮಾತು ಗರ್ಭಿಣಿ ಹೆಣ್ಣು ಮಕ್ಕಳಿಗೆ ಸಾಂತ್ವಾನ ನೀಡುತಿತ್ತು.

ದಿನ ತುಂಬಿದ ಗರ್ಭಿಣಿಯ ಹೊಟ್ಟೆಯ ಮೇಲೆ ಹಿತವಾಗಿ ಕೈಯಾಡಿಸುತ್ತಾ ಧೈರ್ಯ ತುಂಬಿ ಸಲೀಸಾಗಿ ಹೆರಿಗೆ ಮಾಡಿಸುತ್ತಿದ್ದ ಮಹಾತಾಯಿ ನರಸಮ್ಮ ಪಾವಗಡ ಸುತ್ತಮುತ್ತಲಿನವರಿಗೆ **"ಸೂಲಗಿತ್ತಿ ನರಸಮ್ಮ"** ಎಂದೇ ಚಿರಪರಿಚಿತರಾಗಿದ್ದರು.

ಹೆರಿಗೆ ಸಮಯದಲ್ಲಿ ನರಸಮ್ಮ ಇದ್ದರೆ ಭೀಮ ಬಲ ಇದ್ದಂತೆ ಎನ್ನುವ ಜನರ ಮಾತಿಗೆ 'ಅಯ್ಯೋ ನನ್ನ ಕೈಲಿ ಏನೈತೆ ಸ್ವಾಮಿ, ಎಲ್ಲ ಭಗವಂತ ಮಡಿಸ್ತಾವ್ನೆ... ನಾನು ಹೆಸರಿಗೆ ಮಾತ್ರ' ಎಂದು ವಿನಯವಾಗಿ ಹೇಳುತ್ತಿದ್ದ ನರಸಮ್ಮ ಎಷ್ಟೇ ಕ್ಲಿಷ್ಟ ಪರಿಸ್ಥಿತಿಯಿದ್ದರೂ ತಮ್ಮ ಅನುಭವದಿಂದ ಸುಲಭವಾಗಿ


Downloaded From:www.kpscvaani.com



### ನರ್ಸ್ ವೃತ್ತಿ ನಿರಾಕರಿಸಿದ ನರಸಮ್ಮ

ತಮ್ಮ 22ನೇ ವಯಸ್ಸಿಗೆ ಈ ಪವಿತ್ರ ವೃತ್ತಿಗೆ ತಮ್ಮನ್ನು ಅರ್ಪಿಸಿಕೊಂಡ ಇವರಿಗೆ ಪಾವಗಡ ಸರ್ಕಾರಿ ಆಸ್ಪತ್ರೆಯ ನರ್ಸ್ ವೃತ್ತಿಗೆ ಸೇರಲು ಅವಕಾಶ ಒದಗಿಬಂತು. ಆದರೆ ಈ ಅವಕಾಶವನ್ನು ನರಸಮ್ಮ ಅವರು ನಯವಾಗಿಯೇ ನಿರಾಕರಿಸಿ ಸ್ವತಂತ್ರವಾಗಿಯೇ ತಮ್ಮ ಸಮಾಜ ಸೇವೆಯನ್ನು ಮುಂದುವರೆಸಿದರು.

ಹೆರಿಗೆ ಮಾಡಿಸುತ್ತಿದ್ದರು. ಅವರ ಕೈಗುಣವೇ ಹಾಗೆ. ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ಸುತ್ತಮುತ್ತ ಸೂಲಗಿತ್ತಿ ನರಸಮ್ಮ ಎಂದೇ ಪ್ರಸಿದ್ಧಿಯಾಗಿದ್ದ ಇವರು ಮಾಡಿಸಿದ ಹದಿನೈದು ಸಾವಿರಕ್ಕೂ ಹೆಚ್ಚು ಹೆರಿಗೆಗಳಲ್ಲಿ ಒಂದೂ ಫೇಲ್ ಆಗದಿರುವುದು ನಿಜಕ್ಕೂ ಹೆಮ್ಮೆಯ ವಿಚಾರ.

ಇವರ ಸಾಧನೆ, ಕಾಯಕ ನಿಷ್ಠೆ, ಮಾತೃ ವಾತ್ಸಲ್ಯದ ಸೇವೆಯನ್ನು ಗುರುತಿಸಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. ತೊಂಭತ್ತೆಂಟು ವರ್ಷ ಕಾಲ (ಜನನಃ 16–6–1920, ಮರಣಃ 25–12–2018) ಬದುಕಿದ್ದ ಹಿರಿಯ ಜೀವ ಡಾ॥ ಸೂಲಗಿತ್ತಿ ನರಸಮ್ಮ ಅವರು ಪಾವಗಡ ತಾಲೂಕಿನ ತಿಮ್ಮನಾಯಕನ ಪೇಟೆ ಗ್ರಾಮದ ಕದಿರಪ್ಪ ಮತ್ತು ಬಾವಮ್ಮ ಅವರ ಒಟ್ಟು ಏಳು ಮಕ್ಕಳಲ್ಲಿ ಎರಡನೇ ಮಗಳು. ಪುಣ್ಯಾತ್ಮರು ಅದ್ಯಾವ ಗಳಿಗೆಯಲ್ಲಿ ನರಸಮ್ಮ ಎಂದು ಹೆಸರಿಟ್ಟರೋ ಏನೋ "ನರ್ಸ್" ಅಮ್ಮನಾಗಿ ತಮ್ಮ ವಿಶಿಷ್ಟ ಸೇವೆಯಿಂದ ಊರಿನ ಕೀರ್ತಿಯನ್ನು ಬೆಳಗಿದರು. ಹೆಣ್ಣು ಆರತಿಗೆ ಮಾತ್ರವಲ್ಲ ಸೀಮಿತವಾಗಿದಲ್ಲ, ಕೀರ್ತಿಯನ್ನೂ ತರಬಲ್ಲಳು ಎಂದು ನರಸಮ್ಮ ಅವರು ತೋರಿಸಿ ಕೊಟ್ಟಿದ್ದಾರೆ.

**ಅಜ್ಜಿಯಿಂದ ಬಳುವಳಿ**

ನರಸಮ್ಮ ಅವರಿಗೆ ಹೆರಿಗೆ ಮಾಡಿಸುವುದು ತನ್ನ ಅಜ್ಜಿ (ತಾಯಿಯ ತಾಯಿ) ಯಿಂದ ವಂಶಪಾರಂಪರಿಕವಾಗಿ ಬಂದ ಬಳುವಳಿ. ಇವರ ಅಜ್ಜಿ ಮರಿಗಮ್ಮ ಪ್ರಸೂತಿ ಪ್ರವೀಣೆಯಾಗಿದ್ದರು. ಏಕಾಗ್ರತೆಯಿಂದ ತನ್ನ ಅಜ್ಜಿಯಿಂದ ಕಲಿತ ಸುಸೂತ್ರ ಹೆರಿಗೆ ಮಾಡಿಸುವ ವಿದ್ಯೆಯನ್ನು ಯಾರಿಂದಲೂ ಏನನ್ನೂ ಬಯಸದೇ ಪರರ ಉಪಕಾರಕ್ಕಾಗಿ ಮುಡುಪಾಗಿಟ್ಟಿದ್ದರು.

**ಮೂರು ದಿನಗಳ ಕಾಲ ತಾಯಿ–ಮಗುವಿನ ಆರೈಕೆ**

ಯಾವುದೇ ಜಾತಿ–ಮತ–ವರ್ಗದವರಾದರೂ ಬೇಧವಿಲ್ಲದೆ ಸಮಾನವಾಗಿ ಮಿಡಿಯುವ ಮನಸ್ಸು ಅವರದು. ಇವರ ಈ ಕಾಯಕಕ್ಕೆ ಪ್ರತ್ಯುಪಕಾರವಾಗಿ ಒಂದು ಮೊರ ರಾಗಿ ಕೊಟ್ಟವರೂ ಇದ್ದಾರೆ. ಸೀರೆ ಉಡಿಸಿ ಮಡಿಲು ತುಂಬಿದವರೂ ಇದ್ದಾರೆ. ಆದರೆ ಮಮತಾಮಯಿ ನರಸಮ್ಮ ಅವರಿಗೆ ಯಾವ ಬೇಧವೂ ಇಲ್ಲ. ತನ್ನ ಕೆಲಸವಾದೊಡನೆ ಮಗುವನ್ನು ತೊಳೆದು ಮೊರದಲ್ಲಿ ಮಲಗಿಸಿ, ಬೆಚ್ಚಗೆ ಹೊದಿಸಿ ಮೂರು ದಿನ ತಾಯಿ–ಮಗುವನ್ನು ಕಣ್ಣಿಗೆ ಅಂಜನ ಹಾಕಿ ಕಾದು ಮಗುವಿನ ದೃಷ್ಟಿ ತೆಗೆದು ನೀವಾಳಿಸಿ ಬಾಣಂತಿಗೆ ಮತ್ತವಳ ತಾಯಿಗೆ ಒಂದಿಷ್ಟು ಸಲಹೆ ನೀಡಿ ಬಂಗಾರದಂಥ ಮಗು ಹುಟ್ಟೈತೆ, ಚೆನ್ನಾಗಿ ನೋಡ್ಕೊಳ್ರವ್ವಾ ಎಂದು ಹೇಳಿ ಹೊರಡುತ್ತಿದ್ದರು.

**ಪ್ರಸವದ ದಿನದ ಲೆಕ್ಕ ತಪ್ಪಿದ್ದೇ ಇಲ್ಲ**

ನರಸಮ್ಮ ತಮ್ಮ ಅನುಭವದಿಂದಲೇ ಗರ್ಭಿಣಿಯ ಪ್ರಸವದ (ಹೆರಿಗೆ) ದಿನವನ್ನು ಲೆಕ್ಕಾಚಾರ ಮಾಡುತ್ತಿದ್ದರು. ಅವರ ಎಣಿಕೆ ತಪ್ಪಿದ್ದೇ ಇಲ್ಲ. ಗರ್ಭಿಣಿಯರ ಆತಂಕದ ಅರಿವಿದ್ದ ನರಸಮ್ಮ ತಮ್ಮ ಮನೆ ಕೆಲಸವನ್ನೆಲ್ಲ ಬೇಗ ಮುಗಿಸಿ ಕರ್ತವ್ಯದ ಕರೆಗೆ ಓಗೊಡುತ್ತಿದ್ದರು. ಬೆಂಗಳೂರಿನಂತಹ ನಗರ ಪ್ರದೇಶಗಳಿಗೆ ಹೆಣ್ಣು ಕೊಟ್ಟಿದ್ದ ಗ್ರಾಮೀಣರು ನರಸಮ್ಮ ಇದ್ದಾರೆ ಎಂಬ ಏಕೈಕ ಧೈರ್ಯದಿಂದ ಬಾಣಂತನಕ್ಕೆ ಊರಿಗೆ ಕರೆದುಕೊಂಡು ಬರುತ್ತಿದ್ದರೆಂದರೆ ಇವರ ಪರಿಣತಿಯ ಎಷ್ಟು ಎಂಬುದು ಅರ್ಥವಾದೀತು.

ಗರ್ಭಿಣಿಯರಿಗೆ ಮೂರು ತಿಂಗಳಿಂದಲೇ ಎಲ್ಲ ಸೂಚನೆಗಳನ್ನು ತಿಳಿಸುತ್ತಿದ್ದ ನರಸಮ್ಮ ಏನು ತಿನ್ನಬೇಕು ಎನ್ನುವುದಕ್ಕಿಂತ ಏನು ತಿನ್ನಬಾರದೆಂಬ ವಿಷಯದ ಬಗ್ಗೆ ತುಂಬಾ ಸೂಕ್ಷ್ಮವಾಗಿ ಗಮನ ಕೊಡುತ್ತಿದ್ದರು.





Downloaded From:www.kpscvaani.com

**ಕೈಗುಣ ದೊಡ್ಡದು**

ಇವರು ಮೊದಲು ಹೆರಿಗೆ ಮಾಡಿಸಿದ್ದು, ತಮ್ಮ ಪತಿಯ ಸೋದರ ಮಾವನ ಪತ್ನಿ ಕನುಮಕ್ಕನ ಎರಡನೇ ಮಗುವಿಗೆ. ಸುಸೂತ್ರವಾಗಿ ಹೆರಿಗೆ ಮಾಡಿಸಿದ್ದಕ್ಕೆ ಕನುಮಕ್ಕ ಕೃತಜ್ಞತೆಯಿಂದ ನರಸೂ ಈ ಹೆರಿಗೆ ಮೊದಲ ಹೆರಿಗೆಗಿಂತ ಸಲೀಸು ಎನ್ನಿಸಿತು. ನಿನ್ನ ಕೈಗುಣ ನಿಜಕ್ಕು ದೊಡ್ಡದು. ಈ ಕೆಲಸವನ್ನು ಮುಂದುವರೆಸು ಎಂದು ಸಲಹೆ ನೀಡಿದ್ದರಂತೆ. ಮುಂದೆ ತಿಪ್ಪಪ್ಪನ ಹೆಂಡತಿ ನರಸಮ್ಮ, ಸುಬ್ಬಪ್ಪನ ಹೆಂಡತಿ ಹನುಮಕ್ಕ, ಅಗಸರ ನಿಂಗಮ್ಮ, ಬೂದಿಬೆಟ್ಟ ಲಕ್ಷ್ಮಮ್ಮ, ದೊಡ್ಡಗಂಗಮ್ಮ, ತಲಾರಿ ಅರಿಯಮ್ಮ, ನೇಯ್ಗಿ ಪದ್ಮಕ್ಕ ಹೀಗಿ ಪ್ರಾರಂಭವಾದ ಕಾಯಕಯಾತ್ರೆಯ ಒಂದೊಂದು ಯಶಸ್ಸೂ ಅವರಿಗೆ ಒಳ್ಳೆಯ ಪ್ರಚಾರ ಒದಗಿಸಿತು.

**ನರಸಮ್ಮ ಅವರ ಮೇಲೂ ಬುರ್ರಕಥೆ ಕಟ್ಟಿದ ಲಕ್ಷ್ಮಮ್ಮ**

ಆ ಕಾಲಕ್ಕೆ ದೃಶ್ಯ ಮಾಧ್ಯಮ ಇರಲಿಲ್ಲ. ಪತ್ರಿಕಾ ಮಾಧ್ಯಮ ಇದ್ದರೂ ತುಂಬಾ ಕಡಿಮೆ. ಆದರೆ ನರಸಮ್ಮ ಅವರಿಂದ ಹೆರಿಗೆ ಮಾಡಿಸಿಕೊಂಡಿದ್ದ ಬುರ್ರಕಥೆ ಲಕ್ಷ್ಮಮ್ಮ ಹತ್ತಾರು ಹಳ್ಳಿಗಳಲ್ಲಿ ವಾದ್ಯ ನುಡಿಸಿಕೊಂಡು ನರಸಮ್ಮ ಅವರ ಮೇಲೆ ಬುರ್ರ ಕಥೆ ಹೇಳಿದ್ದರಿಂದ ಬೇರೆ ಊರಿಗೂ ಎತ್ತಿನ ಗಾಡಿಯಲ್ಲಿ ಹೋಗಿ ಹೆರಿಗೆ ಮಾಡಿಸಿ ಬರುವಷ್ಟು ಪ್ರಸಿದ್ಧಿಯಾದರು. ಹೀಗೆ ನರಸಮ್ಮ ಅವರ ಹೆಸರು ಬಾಯಿಂದ ಬಾಯಿಗೆ ಪರಿಚಯವಾಗಿ ಹಳ್ಳಿಯಿಂದ ಹಳ್ಳಿಗೆ ಆಂಧ್ರ ಮತ್ತು ಕರ್ನಾಟಕ ಎರಡೂ ರಾಜ್ಯಗಳಲ್ಲಿ ಪ್ರಚಲಿತವಾಗುತ್ತಾ ಹೋಯಿತು.

ತಮ್ಮ 12ನೇ ವಯಸ್ಸಿಗೆ ಕೃಷ್ಣಾಪುರದ ಅಂಜಿನಪ್ಪ ಅವರೊಂದಿಗೆ ವಿವಾಹವಾದ ಇವರಿಗೆ 12 ಮಂದಿ ಮಕ್ಕಳು. 36 ಮಂದಿ ಮೊಮ್ಮಕ್ಕಳು. ಏಳು ದಶಕಗಳ ಕಾಲ ನಿರಂತರ ಹೆರಿಗೆ ಕಾಯಕದಲ್ಲಿ ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ಹೆರಿಗೆ ಮಾಡಿಸಿದ್ದು, ಒಂದೂ ವಿಫಲವಾಗಿಲ್ಲ. ತಮ್ಮ ಮಕ್ಕಳು, ಮೊಮ್ಮಕ್ಕಳು, ಸೊಸೆಯರ ಹೆರಿಗೆ ಕೂಡಾ ಇವರೇ ಮಾಡಿಸಿದ್ದು, ಗರ್ಭಿಣಿಯರ ದೈಹಿಕ ಲಕ್ಷಣ ನೋಡಿಯೇ ಗಂಡು ಅಥವಾ ಹೆಣ್ಣು ಮಗು ಎಂದು ಹೇಳುತ್ತಿದ್ದರು. ಮಗು ಜನನವಾದ ನಂತರ ಕಸ ಬೀಳದಿದ್ದರೆ ಅವರು ಯಾವುದೇ ಔಷಧಿ ಬಳಸದೆಯೇ ಕಸ



## ಹದಿನೈದು ಸಾವಿರ ಹೆರಿಗೆ

**ತಮ್ಮ 12ನೇ ವಯಸ್ಸಿಗೆ ಕೃಷ್ಣಾಪುರದ ಅಂಜಿನಪ್ಪ ಅವರೊಂದಿಗೆ ವಿವಾಹವಾದ ಇವರಿಗೆ 12 ಮಂದಿ ಮಕ್ಕಳು. 36 ಮಂದಿ ಮೊಮ್ಮಕ್ಕಳು. ಏಳು ದಶಕಗಳ ಕಾಲ ನಿರಂತರ ಹೆರಿಗೆ ಕಾಯಕದಲ್ಲಿ ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ಹೆರಿಗೆ ಮಾಡಿಸಿದ್ದು, ಒಂದೂ ವಿಫಲವಾಗಿಲ್ಲ. ಇವರಲ್ಲಿ ಅವರ ಮಕ್ಕಳು, ಸೊಸೆಯರು ಮತ್ತು ಮೊಮ್ಮಕ್ಕಳು ಕೂಡಾ ಸೇರಿದ್ದಾರೆ.**

ಬೀಳುವಂತೆ ಮಾಡುತ್ತಿದ್ದರು.

**ಸದಾ ನೆನಪಿನಲ್ಲಿ ಉಳಿದ ಹೆರಿಗೆ**

ಆಂಧ್ರದಿಂದ ವಲಸೆ ಬಂದಿದ್ದ ಸಾವು–ಬದುಕಿನ ನಡುವೆ ಹೋರಾಡುತ್ತಿದ್ದ ಅಲೆಮಾರಿ ಜನಾಂಗದ ಬುಡಬುಡಿಕೆ ಚಂದ್ರಪ್ಪನ ಪತ್ನಿ ಮಾರಕ್ಕನಿಗೆ ಮಾಡಿಸಿದ ಹೆರಿಗೆ ನರಸಮ್ಮ ಅವರ ನೆನಪಿನಲ್ಲಿ ಅಚ್ಚಳಿಯದೆ ಉಳಿದಿತ್ತು. ಮಗು ಹೊಟ್ಟೆಯಲ್ಲೇ ಸತ್ತಿರಬಹುದು. ಅದಕ್ಕೇ ಹೆರಿಗೆ ಕಷ್ಟವಾಗ್ತಾ ಇದೆ ಎಂದು ಹೆರಿಗೆ ಮಾಡಿಸಲು ಬಂದಿದ್ದ ಐದಾರು ಮಹಿಳೆಯರು ಚಂದ್ರಪ್ಪನಿಗೆ ಹೇಳಿದ್ದರು. ದೊಡ್ಡಜೀವ ಒಂದನ್ನು ಉಳಿಸಕ್ಕ ಸಾಕು ಎಂದು ಚಂದ್ರಪ್ಪ ಸರಿರಾತ್ರಿಯಲ್ಲಿ ನರಸಮ್ಮನ ಮನೆಯ ಬಾಗಿಲನ್ನು ತಟ್ಟಿದ್ದನ್ನು ಅವರಿಗೆ ಎಂದೂ ಮರೆಯಲಾಗಲಿಲ್ಲ. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ ನರಸಮ್ಮ ತನ್ನ ಪತಿ ಅಂಜಿನಪ್ಪ ಅವರೊಂದಿಗೆ ಕಂದೀಲು ಹಿಡಿದು ಹೊರಟೇ ಬಿಟ್ಟರು. ನಡುರಾತ್ರಿಯಲ್ಲಿ ಚಂದ್ರಪ್ಪನ ಗುಡಾರ ತಲುಪಿದ ನರಸಮ್ಮ ಸ್ವಲ್ಪ ಸಮಯ ತೆಗೆದುಕೊಂಡು ಮಾರಕ್ಕನಿಗೆ ಹೆರಿಗೆ ಮಾಡಿಸಿದರು. ಹೆರಿಗೆಯಾಗಿ ಎಲ್ಲ ಸರಿ ಹೋಗಲು ಕೋಳಿ ಕೂಗುವ ಹೊತ್ತಾಯಿತು. ಭಯ ಪಡಬೇಡಿ ತಾಯಿ–ಮಗು ಚೆನ್ನಾಗಿದ್ದಾರೆ ಎಂದು ಹೇಳಿ ಹಿಂದಿರುಗಿದ ನೆನಪು ಅಚ್ಚಳಿಯದೆ ಉಳಿದಿತ್ತು.

ಇವರ ಈ ನಿಸ್ವಾರ್ಥ ಸೇವೆಯನ್ನು ಗುರುತಿಸಿ ನರಸಮ್ಮ ಅವರಿಗೆ 2013ರಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರಿಂದ 2.50ಲಕ್ಷ ರೂ. ನಗದು ಹಾಗು ವಯೋಶ್ರೇಷ್ಠ ಸಮ್ಮಾನ್ ಪ್ರಶಸ್ತಿ, 2018ರಲ್ಲಿ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಅವರಿಂದ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಅಲ್ಲದೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, ದೇವರಾಜ ಅರಸು ಪ್ರಶಸ್ತಿ, ತುಮಕೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಪಾರಂಪರಿಕ ರಾಷ್ಟ್ರೀಯ ವೈದ್ಯ ಪರಿಷತ್ತಿನಿಂದ ವೈದ್ಯರತ್ನ ಪ್ರಶಸ್ತಿ, ಝಾನ್ಸಿರಾಣಿ ಪ್ರಶಸ್ತಿ, ಅಬ್ಬಕ್ಕ, ಗಡಿನಾಡು ರತ್ನ, ಮದರ್ ಥೆರೇಸಾ, ಮಹಾತ್ಮಗಾಂಧಿ, ರೈತ ರತ್ನ, ಕಾಯಕ ರತ್ನ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.


Downloaded From:www.kpscvaani.com

# ಗೀಳು ರೋಗಕ್ಕೆ ಸಂಬಂಧಿಸಿದಂತಹ ಪ್ರಶ್ನೆಗಳಿಗೆ ಉತ್ತರಗಳು



ಡಾ. ಶಿವಮೂರ್ತಿ. ಎನ್

**ಮನೋರೋಗವಾದ ಗೀಳು ರೋಗಕ್ಕೆ ಸಂಬಂಧಿಸಿದಂತೆ ಸಹಜವಾಗಿ ಜನರಿಗೆ ಕಾಡುವ ಪ್ರಶ್ನೆಗಳಿಗೆ ಡಾ. ಶಿವಮೂರ್ತಿ ಅವರು ಉತ್ತರವನ್ನು ನೀಡಿದ್ದಾರೆ.**

ಅಮ್ಮ ಮಗನಿಗೆ ಹೇಳ್ತಾರೆ, "ಲೋ ರಾಘು, ಏನಾಗಿದ್ಯೋ ನಿನ್ಹೆಂಡ್ತಿಗೆ. ಈ ಕೊರೊನಾ ಬಂದು ಹೋಗಾಯ್ತು. ಆದ್ರೆ ಕೈತೊಳೆಯುವುದನ್ನು ಬಿಡ್ತಾನೇ ಇಲ್ಲ ಅವಳು. ದಿನಪೂರ್ತಿ ಹೀಗೆ ಕೈತೊಳ್ಕೊಂಡು ಇದ್ರೆ ಜೀವನ ಹೆಂಗೆ" ಅಂದ್ರು.

ಇತ್ತೀಚೆಗೆ ಸುಮ ಕೈತೊಳೆಯುವುದನ್ನು ಅಭ್ಯಾಸ ಮಾಡಿಕೊಂಡಿದ್ದಾಳೆ.  ಟೀವಿ ನೋಡುತ್ತಾ ಇರುತ್ತಾಳೆ. ಕಣ್ಮುಚ್ಚಿ ತೆಗೆಯೋದರಲ್ಲಿ ನೋಡಿದರೆ ವಾಶ್ ಬೇಸಿನ್ ಹತ್ತಿರ ನಿಂತು ಕೈತೊಳೆಯುತ್ತಾ ಇರುತ್ತಾಳೆ. ಯಾಕೋ ಎಷ್ಟು ಕೈತೊಳೆದರೂ ಸಮಾಧಾನ ಆಗುತ್ತಾ ಇರುವುದಿಲ್ಲ. ಒಮ್ಮೊಮ್ಮೆ ಅವಳಿಗೂ ಬೇಸರವಾಗಿ ಯಾಕೆ ಹೀಗೆ ಅಂತ ಯೋಚಿಸೋಕು ಸಮಯಇಲ್ಲದೆ ಕೈತೊಳೆಯುತ್ತಾ ಇರುತ್ತಾಳೆ. ಇದಕ್ಕೆ ಗೀಳು (Obsessive compulsive disorder) ರೋಗ ಎನ್ನುತ್ತಾರೆ.

ಇಲ್ಲಿ ಗಮನಿಸಬೇಕಾದ ವಿಷಯ ಎಂದರೆ ಸುಮಳಿಗೆ ಆತಂಕ. ಕೈ ಕೊಳೆ ಆಗಿದೆ ಅನ್ನೋ ಭಾವನೆ. ತೊಳೆಯದಿದ್ದರೆ, ಏನೋ ಅನಾಹುತ ಆಗುತ್ತದೆ ಎನ್ನುವ ಭಯ. ಅದಕ್ಕಾಗಿ ಕೈತೊಳೆಯುತ್ತಾರೆ. ಸ್ವಲ್ಪಹೊತ್ತಿನ ನಂತರ ಮರೆತು ಮತ್ತೆ ಕೈತೊಳೆಯುವುದನ್ನು ಪ್ರಾರಂಭ ಮಾಡುತ್ತಾರೆ. ಅದಲ್ಲದೆ ಯಾವುದಾದರೂ ವಸ್ತು ಮುಟ್ಟಿದರೆ ಅದರಿಂದ ಯಾವುದೋ ಕ್ರಿಮಿ ಅವರನ್ನು ಕೊಂದು ಬಿಡಬಹುದು ಎಂಬ ಭೀತಿ ಇರುತ್ತದೆ. ಕೊರೊನಾ ವೈರಸ್‌ನ ಹಾವಳಿ ಹೆಚ್ಚು ಇದ್ದಾಗ ಇಂತಹ ಗೀಳು ರೋಗದಿಂದ ಬಳಲಿದವರು ಬಹಳ ಇದ್ದಾರೆ.

ಈ ಲೇಖನದಲ್ಲಿ ಗೀಳು ಮನೋರೋಗದ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯೋಣ ಬನ್ನಿ...

**ಗೀಳು ಎಂದರೇನು?**

ಗೀಳು, ಅಂದರೆ ರೋಗಿಯ ಮನಸ್ಸಿನಲ್ಲಿ ಕೆಲವು ವಿಚಾರಗಳು ಕೊರೆಯುತ್ತಿರುತ್ತವೆ. ಅದು ಯಾವುದೇ ಆಲೋಚನೆ ಆಗಿರಬಹುದು, ಅನುಮಾನ ಇರಬಹುದು, ವಿಚಾರ ತಲೆಗೆ ಹಚ್ಚಿಕೊಂಡು ಅದೇ ವಿಷಯ ಅವರ ದೌರ್ಬಲ್ಯ ಆಗಬಹುದು ಅಥವಾ ಯಾವುದೇ ಘಟನೆಯಿಂದ ಮನಃಪಟಲದಲ್ಲಿ ಉಳಿದು ಆ ಬಿಂಬ, ಘಟನೆ ಮನಸ್ಸಿನೊಳಕ್ಕೆ ಪದೇಪದೇ ಬರುವುದು. ಅದೇನೋ ಅಸಂಬದ್ಧ ವಿಷಯ ಅಂತ ಗೊತ್ತಿದ್ದರೂ ಅವರನ್ನು ಎಡಬಿಡದೆ ಕಾಡುವ ಯೋಚನೆಗಳು, ಇಲ್ಲವೆ ಭಾವನೆಗಳಿಗೂ ಇದೇ ಹೆಸರಿದೆ.

ಈ ಗೀಳಿನ ವಿಚಾರಗಳು ವ್ಯಕ್ತಿಗೆ ತಿಳಿದಿದ್ದರೂ ಅವನ್ನು ಹತೋಟಿಯಲ್ಲಿ ಇಡುವುದರಲ್ಲಿ ವಿಫಲವಾಗುತ್ತಾರೆ. ಈ ವಿಚಾರಗಳು ಮನಸ್ಸಿನೊಳಗೆ ಪದೇಪದೇ ನುಗ್ಗಿ ಬರಲು ಆ ವ್ಯಕ್ತಿ ಕಾರಣವಲ್ಲ ಎಂದು ತಿಳಿದಿದ್ದರೂ ಈ ರೀತಿಯ ಆಲೋಚನೆ, ಅನುಮಾನಗಳನ್ನು, ಹತೋಟಿಯಲ್ಲಿಡಲು ಪ್ರಯತ್ನಿಸಿದರೂ ವಿಫಲರಾದಾಗ, ಭಯ, ಆತಂಕ, ಬೇಸರ, ದುಃಖಗಳು ಅವರನ್ನು ಕಾಡುತ್ತವೆ. ಇದನ್ನು ಗೀಳು ಮನೋರೋಗ  ಎನ್ನುತ್ತಾರೆ.

**ಗೀಳು ರೋಗದ ವಿಧಗಳಾವುವು?**

ಗೀಳು ಮನೋರೋಗದಲ್ಲಿ ಮೂರು ವಿಧಗಳಿವೆ.

ಎ) ಬರಿ ಮನಸ್ಸಿನಲ್ಲಿ ಆಗಾಗ ಯೋಚನೆಗಳು ಮಾತ್ರ ಬರಬಹುದು: ಉದಾಹರಣೆಗೆ ಕೈ ಗಲೀಜಾಗಿದೆ ಎಂದು ಮತ್ತೆಮತ್ತೆ ತೊಳೆಯುವುದು, ಮನೆಯ ಬಾಗಿಲಿಗೆ ಬೀಗಹಾಕಿ ಬಂದೆನೋ ಇಲ್ಲವೆ ಎಂಬ ಅನುಮಾನ. ತನಗೆ ಕ್ಯಾನ್ಸರ್



Downloaded From:www.kpscvaani.com

ನಂತಹ ದೊಡ್ಡ ಖಾಯಿಲೆ ಇದೆ ಎನ್ನುವ ಅನುಮಾನ. ಇಂತಹ ಯೋಚನೆಗಳು ಪದೇಪದೇ ಮನಸ್ಸಿಗೆ ಬರುವುದು.

ಬಿ) ಗೀಳು ವರ್ತನೆಗಳು ತೋರುವುದು: ಪದೇಪದೇ ಕೈತೊಳೆಯುವುದು, ದೇವರಿಗೆ ಕೆಟ್ಟಮಾತು ಬೈದುಬಿಡುತ್ತೇನೆ ಎಂಬ ಹೆದರಿಕೆಯಿಂದ ಬಾಯಿಯನ್ನು ಗಟ್ಟಿಯಾಗಿ ಕೈಯಿಂದ ಮುಚ್ಚಿಕೊಳ್ಳುವುದು, ಬ್ಯಾಂಕಿನಲ್ಲಿ ಪದೇಪದೇ ಎಣಿಸಿದ ನೋಟನ್ನು ಎಣಿಸುವುದು.

ಸಿ) ಯೋಚನೆ ಮತ್ತು ವರ್ತನೆ ಎರಡೂ ಕೂಡಿದ ಗೀಳು: ಮನೆಯಲ್ಲಿ ಗಲೀಜು ತುಂಬಿದೆ ಎಂಬ ಗೀಳು ಇಟ್ಟುಕೊಂಡಿರುವ ಮಹಿಳೆ ದಿನಪೂರ್ತಿ ಸಾರಿಸುತ್ತಾ ಇರುವುದು, ಕೆಟ್ಟಮಾತುಗಳು ಬರುತ್ತದೆ ಎಂದು ದೇವರ ಮುಂದೆ ಹೆದರಿ ನಾನು ಮುಂದೆ ತಪ್ಪು ಮಾಡುವುದಿಲ್ಲ, ಎಂದು ಇಪ್ಪತ್ತು ಮೂವತ್ತು ಬಾರಿ ಕಿರುಚಿಕೊಳ್ಳುವುದು, ಈ ರೀತಿಯ ಲಕ್ಷಣಗಳು, ಯೋಚನೆಗಳು ಮತ್ತು ವರ್ತನೆಗಳನ್ನು ಈ ಗುಂಪಿನ ರೋಗಿಗಳಲ್ಲಿ ಕಾಣಬಹುದು.

**ಗೀಳು ರೋಗದ ತೀವ್ರತೆ ಏನು? ಮತ್ತು ಅದರಿಂದ ಆಗಬಹುದಾದ ಪರಿಣಾಮಗಳೇನು?**

ಓದುಗರ ಮನಸ್ಸಿಗೆ ಈಗ ಅನೇಕ ವಿಚಾರಗಳು ಬರುತ್ತಿರಬೇಕು. ಹಾಗೇ ಅವಲೋಕನ ಮಾಡಿಕೊಂಡರೆ ತಮ್ಮಲ್ಲೂ ಒಂದಲ್ಲ ಒಂದು ಗೀಳುತನ ಇದೆ ಎಂದು ಅನಿಸಿರಬೇಕು. ಉದಾಹರಣೆಗೆ ಹಾಡುವುದು, ಪದೇಪದೆ ಕೆಮ್ಮುವುದು, ಸುಮ್ಮನೆ ನಗುವುದು, ಹೊರಗಿನವರಿಗೆ ಅರ್ಥ ಆಗದಂತೆ ಕೋಪ ಮಾಡಿಕೊಳ್ಳುವುದು ಇತರೆ. ಹಲವು ಜನರಿಗೆ ಹತೋಟಿಯಲ್ಲಿ ಇಟ್ಟುಕೊಂಡು ಸ್ವತಃ ನಿಯಂತ್ರಣ ಮಾಡಬಹುದಾದ ಗೀಳಾಗಿರುತ್ತದೆ.

ಒಮ್ಮೊಮ್ಮೆ ಹಿತಕರವಾದ ಗೀಳು ಆಗಿರುತ್ತದೆ. ಕವಿತೆ, ಕವನ ಬರೆಯುವುದು ಒಂದು ತರಹದ ಗೀಳೆ. ಆದರೆ ತನಗೆ ಮತ್ತು ಇತರರಿಗೆ ಖುಷಿ ಕೊಡುತ್ತದೆ. ಆದರೆ ಹಲವು ಗೀಳು ರೋಗಿಗಳಿಗೆ ತನ್ನ ಹತೋಟಿಗೆ ನಿಲುಕದ ಯೋಚನೆಗಳು ಬಂದು, ಆ ವ್ಯಕ್ತಿಗೆ ನೋವನ್ನು ಉಂಟು ಮಾಡಬಹುದು. ತೀವ್ರ ಸ್ವರೂಪದ ಗೀಳುರೋಗಿಗಳು ತಾನು ಹುಚ್ಚನಾಗುತ್ತಿದ್ದೇನೆಂದು ಭಾವಿಸಿ. ತಾನು ಬದುಕಿರಲು ಯೋಗ್ಯನಲ್ಲ ಎಂದು ತಿಳಿದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡಬಹುದು.

**ಗೀಳು ರೋಗದ ಇತರ ಲಕ್ಷಣಗಳನ್ನು ತಿಳಿಯಬಹುದೇ?**

ಗೀಳು ರೋಗವು ಅನೇಕ ರೀತಿಯಲ್ಲಿ ಪ್ರಕಟವಾಗಬಹುದು. ರೋಗಿಗಳು ತೋರಬಹುದಾದ ಲಕ್ಷಣಗಳೆಂದರೆ, ತಲೆನೋವು, ನಿದ್ರಾಹೀನತೆ, ಸದಾ ಯೋಚನಾ ಮಗ್ನರಾಗುವುದು.

ಗೀಳು ತೀವ್ರ ಸ್ವರೂಪದ್ದಾದಾಗ ರೋಗಿಗಳು ತಾವು ಸಂಪೂರ್ಣ ಅಪ್ರಯೋಜಕರೆಂದು ಭಾವಿಸಿ, ಆವೇಗಕ್ಕೆ ಒಳಗಾಗಿ ರಚನಾತ್ಮಕ ಯೋಚನೆ ಮಾಡಲು ಅಸಮರ್ಥರಾಗುತ್ತಾರೆ. ಆಗ ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆ ಬರಬಹುದು. ಅನೇಕ ರೋಗಿಗಳು ಆತ್ಮಹತ್ಯೆಗೆ ಪ್ರಯತ್ನ ಕೂಡ ಮಾಡಬಹುದು. ಸಂಶೋಧನೆಗಳ ಪ್ರಕಾರ ಗೀಳು ಮನೋರೋಗ ಹೊಂದಿರುವ ಶೇ 18 ರಷ್ಟು ರೋಗಿಗಳು ಆತ್ಮಹತ್ಯೆಗೆ ಪ್ರಯತ್ನ ಪಟ್ಟಿರುವ ಸಂಗತಿ ಬಯಲಾಗಿದೆ. ಅದಲ್ಲದೇ, ಶೇ 33 ರಷ್ಟು ರೋಗಿಗಳು ಆತ್ಮಹತ್ಯೆ ಮಾಡಿಕೊಳ್ಳಲು ಆಲೋಚನೆ ಮಾಡುತ್ತಾರೆ ಮತ್ತು ಈ ಯೋಚನೆಗಳು ಅವರನ್ನು ಪದೇಪದೇ ಕಾಡುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.





Downloaded From:www.kpscvaani.com



**ವ್ಯತಿರಿಕ್ತ ಯೋಚನೆಗಳು ಗೀಳು ರೋಗಿಗಳಿಗೆ ಕಾಣಿಸಿಕೊಳ್ಳಬಹುದೇ?**

ಹೌದು. ಲೇಖನಗಳಲ್ಲಿ ಉಲ್ಲೇಖ ಆಗಿರುವಂತೆ ಗೀಳು ರೋಗಿಗಳು ಬಯಸುವುದು ಒಂದಾದರೆ, ಆಶಿಸುವುದು ಒಂದು. ಆದರೆ ಅವೆರಡನ್ನೂ ಬಿಟ್ಟು ಮಾಡುವುದು ಮೂರನೇಯದಾಗಿರುತ್ತದೆ. ಹೀಗೆ ಮಾಡಿದ ನಂತರ ನಾನೇಕೆ ಹೀಗೆ ಎಂದು ಯೋಚಿಸುತ್ತಾ ತನಗೆ ಹುಚ್ಚು ಹಿಡಿದಿರಬಹುದೆಂದು ಭಾವಿಸಿ ಮನೋವೇದನೆ ಹಚ್ಚಿಕೊಂಡು ಮರುಗುತ್ತಾರೆ.

ಕ್ರೈಯನ್ಸ್ ಎಂಬಾತ ವರದಿ ಮಾಡಿರುವ ಒಬ್ಬ ಹುಡುಗಿಯ ನೈಜ ಘಟನೆಯ ಬಗ್ಗೆ ಈಗ ತಿಳಿಯಿರಿ. ಈ ಕಥೆ ಗೀಳು ರೋಗದ ತೀವ್ರಾವಸ್ಥೆಗೆ ಒಂದು ಉದಾಹರಣೆಯಾಗಿದೆ.

ಅವರು ಹೇಳುವಂತೆ, ಆ ಹುಡುಗಿ ವಿಚಿತ್ರ ವ್ಯತಿರಿಕ್ತ ಯೋಚನೆಯನ್ನು ಹೊಂದಿರುತ್ತಾಳೆ. ಅವಳು ತನ್ನ ಪ್ರೀತಿಯ ಸ್ನೇಹಿತನ ಬಗೆಗೆ ಯೋಚಿಸಿದಾಗ ಅವನಿನ್ನು ಏಕೆ ಬದುಕಿದ್ದಾನೆ, ಸಾಯಬಾರದೇಕೆ ಎಂದು ಯೋಚಿಸುತ್ತಿದ್ದಳು. ಅವಳ ತಾಯಿ ಮೆಟ್ಟಿಲುಗಳನ್ನಿಳಿದು ಕೆಳಕ್ಕೆ ಹೋಗುತ್ತಿರುವಾಗ ಅವಳು ಕೆಳಕ್ಕೆ ಬಿದ್ದುತಲೆಗೆ ಪೆಟ್ಟಾಗಿ ರುಂಡ ಮುರಿಯ ಬಾರದೇಕೆ ಎಂದು ಯೋಚಿಸುತ್ತಿದ್ದಳು. ಅತೀ ಹೆಚ್ಚು ಪ್ರೀತಿಸುವ ಅವಳ ಸೋದರಿ ತನ್ನ ಪುಟ್ಟ ಮಗಳೊಂದಿಗೆ ಸಮುದ್ರ ತೀರಕ್ಕೆ ಹೊರಟಾಗ, ಅವರಿಬ್ಬರೂ ನೀರಿನಲ್ಲಿ ಮುಳುಗಿ ಸಾಯಲಿ ಎಂದು ಮನಸ್ಸಿನಲ್ಲಿ ಕೋರುತ್ತಿದ್ದಳು. ಈ ಎಲ್ಲಾ ಯೋಚನೆಗಳು ಅವಳನ್ನು ಭಯಭೀತಿಗೆ ಒಳಪಡಿಸುತ್ತಿತ್ತು.  ಉದ್ರೇಕಗೊಳಿಸುತ್ತವೆ. ಅವಳು ಅವರನ್ನು ಅತೀ ಹೆಚ್ಚು ಪ್ರೀತಿಸುತ್ತಾಳೆ. ಆದರೂ ಅವಳೇಕೆ ಈ ಬಗೆಯ ಭಯಂಕರ ವಿಚಾರಗಳನ್ನು ಯೋಚಿಸುತ್ತಾಳೆ ಎಂದು ತಿಳಿಯಲಾಗದೆ ಪೇಚಿಗೆ ಸಿಕ್ಕಿಹಾಕಿಕೊಳ್ಳುತ್ತಾಳೆ.

ಇದೆಲ್ಲ ಅವಳಿಗೆ ಹುಚ್ಚು ಹಿಡಿಸಿದಂತೆ ಮಾನಸಿಕ ಹಿಂಸೆ ಕೊಡುತ್ತದೆ. ಈ ರೀತಿಯ ವಿಚಿತ್ರ ಮತ್ತು ಭಯಾನಕ ಯೋಚನೆಗಳನ್ನು ಮಾಡುವ ಬದಲು ಸಾಯುವುದೇ ಸರಿ ಎಂದು ಆತ್ಮಹತ್ಯೆ ಮಾಡಿಕೊಳ್ಳಲು ಆಲೋಚನೆ ಮಾಡುತ್ತಾಳೆ.

ಹೀಗೆ ಗೀಳುರೋಗಿಗಳ ಮನಸ್ಥಿತಿ ನಮ್ಮ ಯೋಚನೆಗೆ ನಿಲುಕದ್ದು ಆಗಿರುತ್ತದೆ.

**ಗೀಳು ರೋಗ ಬರಲು ಕಾರಣವೇನು?**

ನಮ್ಮ ಮೆದುಳು ಕಾರ್ಯನಿರ್ವಹಿಸಲು ಅನೇಕ ರಾಸಾಯನಿಕಗಳು ನರಗಳ ಮಿಂಚು (ಇಂಪಲ್ಸ್) ಹರಿದು ಯೋಚಿಸುವ ಮತ್ತು ಮನಃಸ್ಥಿತಿ (ಎಮೋಷನ್ಸ್) ನಿರ್ವಹಣೆ ಮಾಡಲು ಸಹಾಯ ಮಾಡುತ್ತವೆ. ಅವುಗಳಲ್ಲಿ ಸರಟೊನಿನ್ ಎಂಬ ನರವಾಹಕಗಳ ಅಸಮತೋಲನ ಉಂಟಾದಾಗ ಈ ಕಾಯಿಲೆ ಬರುತ್ತದೆ ಎಂದು ಸಂಶೋಧನೆಯಿಂದ ತಿಳಿದು ಬಂದಿದೆ. ಯಾರಿಗಾದರೂ ಗೀಳು ಮನೋರೋಗ ಇದ್ದರೆ ಅವರಿಗೆ ಐದಾರು ವರ್ಷ ವಯಸ್ಸಿನಲ್ಲಿಯೇ ಕೆಲವು ಲಕ್ಷಣಗಳನ್ನು ತೋರಬಹುದು. ಬಹಳ ಶಿಸ್ತಾಗಿ ಇರುವ ಮಗು, ಸಂಖ್ಯೆಗಳ ಬಗ್ಗೆ ಅಥವಾ ಟೈಲ್ಸ್‌ನ ಮೇಲೆ ಇರುವ ಗೆರೆಗಳ ಬಗ್ಗೆಯೂ ಹೆಚ್ಚು ಗಮನ ಕೊಡುವ ಮಗು, ಹಾಗೂ ಸ್ವಚ್ಛತೆಯ ಬಗ್ಗೆ ಗಮನ ಕೊಡುವ ಮಗು ಮುಂದೆ ಗೀಳು ಮನೋರೋಗದ ರೋಗಿಯಾಗುವ ಸಾಧ್ಯತೆ ಇರುತ್ತದೆ.

**ಗೀಳು ರೋಗಕ್ಕೆ ಚಿಕಿತ್ಸೆ ಇದೆಯೇ? ವಿವರ ತಿಳಿಯಬಹುದೇ?**

ಹೌದು. ಗೀಳು ರೋಗಕ್ಕೆ ಚಿಕಿತ್ಸೆ ಇದೆ. ಆದರೆ ದೀರ್ಘ ಕಾಲಾವಧಿಯವರೆಗೆ ಚಿಕಿತ್ಸೆ ಅವಶ್ಯಕತೆ ಇದೆ.  ಅನೇಕ ಔಷಧೋಪಚಾರದಿಂದ ಸಂಪೂರ್ಣವಾಗಿ ಈ ಗೀಳು ರೋಗವನ್ನು ಗುಣಪಡಿಸಬಹುದಾಗಿದೆ. ಮನೋ ವೈದ್ಯರ ಸಹಾಯ ಪಡೆದು ಹೆಚ್ಚಿನ ಮಾಹಿತಿ ಪಡೆಯಬಹುದು. ಔಷಧಿಯ ಜೊತೆಗೆ ಮನೋ ವೈದ್ಯರ ಮಾರ್ಗದರ್ಶನ ಕೂಡ ಬಹಳ ಮುಖ್ಯ.

ನಿಮ್ಮ ಯೋಚನೆಯನ್ನು ಸರಿದಾರಿಗೆ ತರಲು ಮತ್ತು ಮೈಮನಸ್ಸುಗಳನ್ನು ಹತೋಟಿಗೆ ತರಲು ತರಬೇತಿ ಕೊಡುವ ನಡವಳಿಕಾ ಚಿಕಿತ್ಸೆ (ಸೈಕೋಥೆರಪಿ) ಮುಖ್ಯವಾಗುತ್ತದೆ. ಮನಸ್ಸನ್ನು ಹತೋಟಿಗೆ ತರುವ ಧ್ಯಾನ, ಯೋಗ, ಉಪವಾಸ, ಪ್ರಕೃತಿ ವೀಕ್ಷಣೆ, ಸಂಗೀತ, ದೀರ್ಘ ಉಸಿರಾಟ ಇವು ವ್ಯಕ್ತಿಯ ಭಯ, ಆತಂಕ, ಬೇಸರದಂತಹ ರೋಗ ಲಕ್ಷಣಗಳನ್ನು ನಿಯಂತ್ರಣ ಮಾಡಬಲ್ಲವು.

**ಗೀಳು ರೋಗ ಇದೆ ಎಂಬ ಅನುಮಾನ ಬಂದರೆ ಏನು ಮಾಡಬೇಕು?**


ಹತ್ತಿರದ ಮನೋವೈದ್ಯರನ್ನು ಭೇಟಿ ಮಾಡಿ ಸಲಹೆ ಪಡೆಯಿರಿ. ಮಾನಸಿಕ ಹಿಂಸೆ ಅನುಭವಿಸುವ ಅವಶ್ಯಕತೆ ಇಲ್ಲ. ವೈದ್ಯರೊಂದಿಗೆ ಸಮಾಲೋಚನೆ ಮಾಡಿ ಪರಿಹಾರ ಪಡೆಯಿರಿ.



Downloaded From:www.kpscvaani.com

**ಕುದುರೆಮುಖ ವನ್ಯಜೀವಿ ವಿಭಾಗದ ಸುಪರ್ದಿಯಲ್ಲಿರುವ ಹನುಮನ ಗುಂಡಿ ಜಲಪಾತ ಕಾನನ ಪ್ರೇಮಿಗಳಿಗೆ ಜೀವ ಚೈತನ್ಯ ನೀಡುವ ಸುಮಧುರ ತಾಣ.**

ಆರ್.ಕೆ. ಪ್ರಸಾದ್ ಶೆಣೈ



# ಹಾಲಿನಂತೆ ಹರಿಯುವ ಹನುಮನ ಗುಂಡಿ ಜಲಪಾತ

**ಕು**ದುರೆಮುಖದ ಕಾಡುಗಳೆಂದರೆ ಸ್ವರ್ಗದ ತುಣುಕೊಂದು ಭುವಿಗೆ ಇಳಿದಂತೆ ಕಾಣುವ ನಯನ ಮನೋಹರ ತಾಣ. ಇಲ್ಲಿನ ಕಾಡುಗಳು, ಇಲ್ಲಿನ ಜೀವವೈವಿಧ್ಯಗಳ ನಿಗೂಢತೆ, ಇಲ್ಲಿ ಹುಟ್ಟಿ ರಾಜ್ಯದೆಲ್ಲೆಡೆ ಹರಿದುಹೋಗುವ ನದಿಗಳ ಶ್ರುತಿಬದ್ಧವಾದ ಹಾಡು, ಎಲ್ಲಾ ಕಾಲಗಳಲ್ಲೂ ಕನಸಿನಂತೆ ಮುತ್ತಿಕೊಳ್ಳುವ ಮಂಜಿನ ಪರದೆ, ಸುತ್ತಲೂ ಮಂಜಿನ ಪರದೆಯಲ್ಲೇ ಮುಳುಗೇಳುವ ಬೆಟ್ಟದ ಸಾಲುಗಳು, ಇವನ್ನೆಲ್ಲಾ ನೋಡುತ್ತಿದ್ದರೆ ನಿಜಕ್ಕೂ ಭೂಲೋಕವು ಸ್ವರ್ಗವಾದಂತನಿಸುತ್ತದೆ.

ಭೂಸ್ವರ್ಗದಲ್ಲೇ ಭೋರ್ಗರೆದು ಮೈ ಮನಸಲ್ಲಿ ರೋಮಾಂಚನ ಸೃಷ್ಟಿಸುವ ಜಲಪಾತವೇ ಹನುಮನ ಗುಂಡಿ (ಸೂತನಬ್ಬಿ ಜಲಪಾತ). ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ ಇದರ ಸುಪರ್ದಿಯಲ್ಲಿರುವ ಈ ಜಲಪಾತ, ಕಾನನ ಪ್ರೇಮಿಗಳಿಗೆ, ನಿಜಕ್ಕೂ ಪರಿಸರವನ್ನು ಪ್ರೀತಿಸುವವರಿಗೆ ಜೀವಚೈತನ್ಯ ನೀಡುವ ಭೂರಮೆಯ ಸಿರಿ. ಸ್ವರ್ಗದಿಂದ ಉದುರಿ ಬೀಳುತ್ತಿದ್ದಾಳೆ ಎಂದನಿಸುವ ಶ್ವೇತ ವೈಯ್ಯಾರಿ. ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ-ಕಳಸ ರಸ್ತೆಯ ಹತ್ತಿರವಿರುವ ಈ ಜಲಪಾತ ನಮ್ಮ ನಾಡಿನ ಪರಿಸರದ ರಕ್ಷಣಾ ಕೋಟೆ ಕುದುರೆಮುಖ ಅರಣ್ಯದಲ್ಲಿದೆ. ಹನುಮಾನ್ ಗುಂಡಿ, ಹನುಮನ ಗುಂಡಿ, ಸೂತನಬ್ಬಿ ಜಲಪಾತ ಅಂತಲೂ ಈ ಜಲಪಾತ ಖ್ಯಾತಿ ಪಡೆದಿದೆ.

ಒಂದು ಕಾಲದಲ್ಲಿ ಕುದುರೆಮುಖ ಅದಿರು ಕಂಪನಿ ಕುದುರೆಮುಖದ ಪರ್ವತ ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಸುತ್ತಿದ್ದಾಗ ರಾಶಿ ರಾಶಿ ಪ್ರವಾಸಿಗರು ಈ ಜಲಪಾತಕ್ಕೆ ಭೇಟಿ ನೀಡುತ್ತಿದ್ದರು. ಕಂಪನಿ ಇಲ್ಲಿ ಗಣಿಗಾರಿಕೆ ನಿಲ್ಲಿಸಿದ ಮೇಲೆಯೂ ಪ್ರವಾಸಿಗರ ಸಂಖ್ಯೆ ಏನೂ ಕಡಿಮೆಯಾಗಲಿಲ್ಲ. ಕೊನೆಗೆ ಪ್ರವಾಸಿಗರ ಸಂಖ್ಯೆ ವಿಪರೀತವಾಗಿ ಜಲಪಾತದ ತುಂಬೆಲ್ಲಾ ಪ್ಲಾಸ್ಟಿಕ್, ಬಾಟಲಿ ಮುಂತಾದ ಕಸಗಳೇ ತುಂಬಿ ಕೊಳ್ಳತೊಡಗಿದವು.


Downloaded From:www.kpscvaani.com



ಜಲಪಾತವು ದುರ್ಗಮ ಕಾಡಿನಲ್ಲಿರುವುರಿಂದ ರಾತ್ರಿ ಹೊತ್ತು ಈ ಪ್ರದೇಶಗಳಿಗೆ ಬರುವ ವನ್ಯಜೀವಿಗಳಿಗೆ ಈ ಪ್ಲಾಸ್ಟಿಕ್ ಮತ್ತು ಒಡೆದ ಬಾಟಲಿನ ಚೂರುಗಳಿಂದ ಪ್ರಾಣಕ್ಕೆ ಕುತ್ತು ಬರಲಾರಂಭಿಸಿತು. ಈ ಕಾರಣಕ್ಕೆ ಒಂದಷ್ಟು ಕಾಲ ಅರಣ್ಯ ಇಲಾಖೆಯು ವನ್ಯ ಜೀವಿಗಳ ಕಾಳಜಿಯಿಂದ ಹನುಮಾನ್ ಗುಂಡಿ ಜಲಪಾತದ ಪ್ರವೇಶವನ್ನು ನಿರ್ಬಂಧಿಸಿತ್ತು. ಆದರೆ ಈಗ ಬಹು ಕಾಲದ ಬಳಿಕ ಮತ್ತೆ ಹನುಮಾನ್ ಗುಂಡಿ ಜಲಪಾತವನ್ನು ನಿಸರ್ಗ ಪ್ರೇಮಿಗಳಿಗಾಗಿ ಮುಕ್ತಗೊಳಿಸಲಾಗಿದೆ.

**ದಟ್ಟ ಕಾಡಿನ ದಿಟ್ಟ ಜಲಪಾತ:**

ಕುದುರೆಮುಖದ ದಟ್ಟ ಕಾಡಿನ ಕಡಿದಾದ ಬಂಡೆಗಳ ಮೇಲಿಂದ ಧುಮುಕ್ಕುತ್ತಾ, ಕಿವಿಗೆ ಇಂಪಾಗುವಂತೆ ತಣ್ಣಗೆ ಭೋರ್ಗರಿಯುತ್ತಾ ಹಾಲ್ನೊರೆಯಂತೆ ಇಳಿದು ಬರುವ ಈ ಜಲಪಾತ ನೋಡುವುದೇ ರೋಮಾಂಚನ ಅನುಭೂತಿ. ಈ ರೋಮಾಂಚನ ಅನುಭೂತಿಯನ್ನು ನಮ್ಮದಾಗಿಸಿಕೊಳ್ಳಲು, ಆಳವಾದ ಪ್ರದೇಶದಲ್ಲಿರುವ ಸುಮಾರು 200-400 ಮೆಟ್ಟಿಲುಗಳನ್ನು ಇಳಿಯಲೇಬೇಕು. ಸುಮಾರು 100 ಅಡಿ ಇಳಿದ ನಂತರವೇ ನಮಗೆ ಜಲಪಾತದ ದರ್ಶನವಾಗುತ್ತದೆ. ಹೀಗೆ ಇಳಿಯುವಾಗ ಪ್ರಪಾತಕ್ಕೆ ಇಳಿದಂತೆ ಭಾಸವಾಗುತ್ತದೆ, ಬೇರೆಯೇ ಹೊಸತಾದ ಲೋಕಕ್ಕೆ ಹೋದಂತನಿಸುತ್ತದೆ. ಮೆಟ್ಟಿಲು ಇಳಿಯುವಾಗಲೇ ದೊಡ್ಡದಾಗಿ ಜಲಪಾತ ಧುಮ್ಮಿಕ್ಕುವ ಸದ್ದು ಕಿವಿಗೆ ಕೊಡುವ ಅನುಭವವೇ ಬೇರೆ. ದಟ್ಟವಾದ ಕಾಡಿನಿಂದ ಆವೃತವಾಗಿರುವ ಈ ಜಲಪಾತದ ಹಿನ್ನೆಲೆ ಕಣ್ಮನ ಸೆಳೆದು ಬಿಡುತ್ತದೆ.

ಸುಮಾರು 150 ಅಡಿ ಎತ್ತರದಿಂದ ಧುಮ್ಮಿಕ್ಕುವ ಈ ಜಲಪಾತ ಪರಿಶುದ್ಧ ಪರಿಸರದ ಪ್ರತಿನಿಧಿಯಂತೆ ಕಾಣುತ್ತದೆ. ಜಲಪಾತದ ಎತ್ತರ ಸಣ್ಣದಾದರೂ ಇಲ್ಲಿನ ನುಣುಪಾದ ಬಂಡೆಗಲ್ಲುಗಳ ಆಕರ್ಷಣೆಯೇ ಬೇರೆ. ನೀರು ಆ ಬಂಡೆಗಲ್ಲುಗಳ ಮೇಲೆ ಬಿದ್ದಾಗ ಕಾಣುವ ದೃಶ್ಯವೇ ನಯನ ಮನೋಹರವಾದುದು. ಅಷ್ಟು ನೈಜತೆ, ಸೌಂದರ್ಯ, ಶುಭ್ರತೆ ಈ ಜಲಪಾತಕ್ಕಿದೆ. ಅಷ್ಟೇ ಅಲ್ಲದೇ ಕಾಡಿನ ಜಲಮೂಲಗಳು, ಗಿಡಮರ ಬಳ್ಳಿಗಳು ಮನುಷ್ಯನ ಉಳಿವಿಗೆ ಎಷ್ಟೊಂದು ಮಹತ್ವದ್ದು ಎನ್ನುವ ಅರಿವು ನಮಗೆ ಈ ಪ್ರದೇಶದಲ್ಲಾದರೆ ಖಂಡಿತವಾಗಿಯೂ ಪ್ರವಾಸಿಗರಲ್ಲಿ ಪರಿಸರ ಪ್ರೀತಿ ಹೆಚ್ಚಬಹುದು. ಇಲ್ಲಿ ನೀರು ಮುಟ್ಟುವ ಅವಕಾಶವಿದೆ, ಆದರೆ ನೀರಿಗಿಳಿಯುವುದು ಅಪಾಯಕರವಾದ್ದರಿಂದ ನೀರಿಗಿಳಿದು ಮಜಾ ಮಾಡಲು ಅವಕಾಶವಿಲ್ಲ, ಆದರೆ ನಿಸರ್ಗ ಪ್ರೇಮಿಗಳು ಈ ಸುಂದರ ಜಲಪಾತದ ಅಂದವನ್ನು, ಮಾಧುರ್ಯವನ್ನು ಮೈಮನದಲ್ಲಿ ತುಂಬಿಕೊಳ್ಳಬಹುದು.

ಮಳೆಗಾಲವಾದ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ನೀರಿನ ಹರಿವು ಹೆಚ್ಚು ಇರುವುದರಿಂದ ಇಲ್ಲಿ ಪ್ರವೇಶ ನಿರ್ಬಂಧಿಸಲಾಗುತ್ತದೆ. ಆದರೆ ಆಗಸ್ಟ್ ನಿಂದ ಬೇಸಿಗೆಯವರೆಗೂ ಇಲ್ಲಿ ಪ್ರವೇಶಕ್ಕೆ ಅವಕಾಶವಿದೆ. ಆದರೆ ಜಲಪಾತ ಮೈತುಂಬಿಕೊಳ್ಳುವುದನ್ನು ನೋಡಿ ಆನಂದಿಸಬೇಕೆಂದರೆ ಆಗಸ್ಟ್ ನಿಂದ ಜನವರಿಯೊಳಗೆ ಬಂದರೆ ಇದೊಂದು ರಮಣೀಯ ತಾಣ ಎನ್ನಿಸುತ್ತದೆ.


ಚಳಿಗಾಲದಲ್ಲಿಯೂ ಜಿಟಿ ಜಿಟಿ ಮಳೆಯಾಗುವುದರಿಂದ ಇಲ್ಲಿನ ಹಸಿರು, ಹರಿವು ಅಷ್ಟು ಕರಗಿರುವುದಿಲ್ಲ. ಬೇಸಿಗೆಯವರೆಗೂ ಇಲ್ಲಿನ ಚೆಲುವು ಸ್ವರ್ಗಮಯವಾಗಿರುತ್ತದೆ. ಒಂದು ಸುಂದರ ಜಲಪಾತವನ್ನು ನಿಮ್ಮ ಮೈಮನದಲ್ಲಿ ತುಂಬಿಕೊಳ್ಳುವ ಆಸೆ ಇದ್ದರೆ, ನಿಜಕ್ಕೂ ನೀವು ಪ್ರಕೃತಿಯನ್ನು ಆರಾಧಿಸುತ್ತೀರಿ ಎಂದಾದರೆ ಈ ಜಲಪಾತವನ್ನು ಕಣ್ತುಂಬಿಕೊಳ್ಳಬಹುದು. ನೀವು ಕುಟುಂಬ ಸದಸ್ಯರ ಜೊತೆಗೆ ಪ್ರಕೃತಿಯ ಈ ಸುಂದರ ತಾಣವನ್ನು ಸವಿಯಲು ಇಲ್ಲಿಗೆ ಧಾರಾಳವಾಗಿ ಭೇಟಿ ನೀಡಬಹುದು.

ಆದರೆ ನೆನಪಿರಲಿ, ಇದು ನಿಶ್ಯಬ್ದ ತುಂಬಿದ ವನ್ಯಜೀವಿಗಳ ತಾಣವಾದ್ದರಿಂದ ಇಲ್ಲಿನ ಶಾಂತತೆಯ ಪರಿಸರವನ್ನು ಹಾಳು ಮಾಡಬಾರದು. ಕಾಡಿನ ಪರಿಸರವು ನೈರ್ಮಲ್ಯಗೊಳ್ಳದಂತೆ ಅಲ್ಲಿ ಕಸ, ಪ್ಲಾಸ್ಟಿಕ್ ಕವರ್, ಬಾಟಲಿ ಮುಂತಾದವುಗಳನ್ನು ಎಸೆಯಬಾರದೆಂದು ಪ್ರವಾಸಿಗರಿಗೆ ತಿಳಿಹೇಳುವ ಮೂಲಕ ಕುದುರೆಮುಖ ಅರಣ್ಯ ಇಲಾಖೆಯವರು ತಮ್ಮ ಕಾಳಜಿಯನ್ನು ತೋರಿಸುತ್ತಿದ್ದಾರೆ. ಕಾಡಿನ ರಕ್ಷಣೆ ನಮ್ಮ ಆದ್ಯ ಕರ್ತವ್ಯ ಕೂಡ. ಹಾಗಾಗಿ ಕಾಡನ್ನು ಸಂರಕ್ಷಿಸಿದಾಗ ಮಾತ್ರ ನಮ್ಮ ಮುಂದಿನ ಪೀಳಿಗೆಯವರಿಗೂ ಈ ಸುಂದರ ಪರಿಸರವನ್ನು ಉಳಿಸಬಹುದು. ■

**ಹೋಗುವ ದಾರಿ:**

**ಹುಮಮನ ಗುಂಡಿ ಜಲಪಾತ ಬೆಂಗಳೂರಿನಿಂದ ಸುಮಾರು 339 ಕಿ.ಮೀ ದೂರವಿದೆ. ಬೆಂಗಳೂರಿನಿಂದ 308 ಕಿ.ಮೀ ದೂರವಿರುವ ಚಿಕ್ಕಮಗಳೂರು ಜಿಲ್ಲೆಯ ಕಳಸಕ್ಕೆ ಬಂದರೆ ಅಲ್ಲಿಂದ ಹನುಮಾನ್ ಗುಂಡಿ ಜಲಪಾತಕ್ಕೆ 38 ಕಿ.ಮೀ ದೂರವಿದೆ. ಶೃಂಗೇರಿಯಿಂದ 36 ಕಿ.ಮೀ ದೂರದಲ್ಲಿದೆ. ಅಂದ ಹಾಗೆ ಈ ಜಲಪಾತ ಕುದುರೆಮುಖದ ಲಖ್ಯಾಡ್ಯಾಮ್ ಮತ್ತು ಕುದುರೆಮುಖ ಪಟ್ಟಣದ ನಡುವೆ ಸಿಗುತ್ತದೆ. ರಸ್ತೆ ಪಕ್ಕದಲ್ಲಿಯೇ ಸೂತನಬ್ಬಿ ಜಲಪಾತ ಎಂದು ಬರೆದ ಫಲಕ ಕೂಡ ಕಾಣಸಿಗುತ್ತದೆ. ಹಾಗಾಗಿ ದಾರಿ ಹುಡುಕುವುದು ಕಷ್ಟದ ಕೆಲಸವಲ್ಲ. ತಮ್ಮದೇ ಕಾರು ಅಥವಾ ಬೈಕ್ ಇತ್ಯಾದಿಗಳಲ್ಲಿ ಹೋಗುವುದು ಹೆಚ್ಚು ಅನುಕೂಲ. ಕಳಸದಲ್ಲಿಯೂ ರಮಣೀಯ ತಾಣಗಳಿದ್ದು ಅಲ್ಲಿ ಪ್ರವಾಸ ಮಾಡಿ ಹನುಮನಗುಂಡಿಗೂ ಭೇಟಿ ನೀಡಬಹುದು. ಅಂದ ಹಾಗೆ ಜಲಪಾತ ವೀಕ್ಷಣೆಗೆ ರೂ.40 ಪ್ರವೇಶ ದರವಿದೆ. ಬೆಳಗ್ಗೆ 9 ಗಂಟೆಯಿಂದ ಸಂಜೆ 4.30ರ ವರೆಗೆ ಜಲಪಾತ ವೀಕ್ಷಣೆಗೆ ಅವಕಾಶವಿದೆ.**


Downloaded From:www.kpscvaani.com



# ನೃತ್ಯಲೋಕದ ರಸಋಷಿ
# ಪ್ರೊ.ಎಂ.ಆರ್. ಕೃಷ್ಣಮೂರ್ತಿ

ವೈ. ಕೆ. ಸಂಧ್ಯಾ ಶರ್ಮ


**ನಾ**ಟ್ಯರಂಗದ ದಿಗ್ಗಜ ಅತ್ಯಂತ ಹಿರಿಯ ನೃತ್ಯಗುರು ಎಂ.ಆರ್.ಕೃಷ್ಣಮೂರ್ತಿ ಅವರ ಹೆಸರನ್ನು ಕೇಳದವರೇ ಇಲ್ಲ. ಅವರ ಹಿರಿದಾದ ಸಾಧನೆ, ನಡೆದು ಬಂದ ಹಾದಿ, ಹಾಕಿಕೊಟ್ಟ ಮೇಲ್ಪಂಕ್ತಿ ಮುಂದಿನ ಯುವ ನೃತ್ಯ ಜನಾಂಗಕ್ಕೆ ಉತ್ತಮ ಮಾದರಿ, ಪರಿಪೂರ್ಣ ವ್ಯಕ್ತಿತ್ವದ ದ್ಯೋತಕ. ಉತ್ತಮ ನೃತ್ಯ ಸಾಧಕನೊಬ್ಬನ ಜೀವನ-ದಿನಚರಿ, ನಡೆ ಹೇಗಿರಬೇಕೆಂಬುದಕ್ಕೆ ಅವರು ನಿದರ್ಶನವೆಂದರೂ ಅತಿಶಯೋಕ್ತಿಯಲ್ಲ. ಅವರು ಬೆಳೆದು ಬಂದ ದಿವ್ಯ ಹಾದಿ ಅನುಪಮ. ಹಾಕಿಕೊಟ್ಟಿರುವ ಶಿಸ್ತಿನ ಜೀವನದ ಅಡಿಪಾಯ ಅವರ ಶಿಷ್ಯರಿಗೆ ಎಂದೂ ಚಿರಸ್ಮರಣೀಯ.

ಬೆಂಗಳೂರಿನ ಬಸವನಗುಡಿಯ ಅವರ ಕಲಾದೇಗುಲ ಒಳಪ್ರವೇಶಿಸಿದವರಿಗೊಂದು ಅನನ್ಯ ಅನುಭವ. 'ಕೈ ಮುಗಿದು ಒಳಗೆ ಬಾ- ಇದು ಕಲಾಕ್ಷಿತಿ' ಎಂಬ ದೈವೀಕ ಭಾವ ಹುಟ್ಟು ಹಾಕುವ ಪವಿತ್ರ ಪರಿಸರ. ವಿಶಾಲವಾದ ಪ್ರಾಂಗಣದಲ್ಲಿ ನಗರದ ಗೌಜು-ಗದ್ದಲವಿರದ ನಿರ್ಮಲ ಪ್ರಶಾಂತ ವಾತಾವರಣ. ಸುತ್ತ ಕಣ್ತಂಪಾಗಿಸುವ ಮುದವಾದ ಹಸಿರು ಗಿಡ-ಮರ-ಬಳ್ಳಿಗಳು. ನಡುವೆ ಹಿರೇಕರ ಕಾಲದ ಬಹು ಹಳೆಯ ಭವ್ಯ ಬಂಗಲೆ. ಅನೇಕ ಸಾರ್ಥಕ ಜೀವ-ಚೇತನಗಳು ಬಾಳಿ ಬೆಳಗಿದ ತಾಣ. ಅದೇ ಎಂಭತ್ತಾರರ ಅನುಭವೀ ನಾಟ್ಯಕೋವಿದ ರಸಋಷಿ ಕೃಷ್ಣಮೂರ್ತಿ ಅವರು ಸರಳವಾಗಿ ಜೀವನ ನಡೆಸುತ್ತಿರುವ ನಿವಾಸ ಹಾಗೂ ನಾಟ್ಯರಂಗದ ನೆಲೆವೀಡು.

ಮನೆಯ ಸುತ್ತ ನಳನಳಿಸುವ ಹಸಿರು


Downloaded From:www.kpscvaani.com

ರಾಜಿ, ಉತ್ಸಾಹ ಚಿಮ್ಮಿಸುವ ಬಣ್ಣ ಬಣ್ಣದ ಅರಳಿ ನಿಂತ ಆಕರ್ಷಕ ಪುಷ್ಪಗಳು, ಪುಟ್ಟ ದೇವಾಲಯಗಳಂಥ ವಿವಿಧ ಮೂರ್ತಿಗಳ ಪುಟ್ಟ ಪುಟ್ಟ ಗುಡಿಗಳು, ನೆಲದ ಮೇಲೆ, ಗೋಡೆಗಳಲ್ಲಿ ಕಲಾತ್ಮಕ ಚಿತ್ತ-ಚಿತ್ತಾರಗಳು, ರಂಗೋಲಿ ಚಿತ್ರಗಳು. ಗಂಟೆ-ಗೋಪುರಗಳು. ಮನೆಯ ಪಾರ್ಶ್ವದಿಂದ ಹಾದು ಹೋದರೆ ಹಿತ್ತಲಲ್ಲಿ ಹರವಾದ ರಂಗಸಜ್ಜಿಕೆಯ ವೇದಿಕೆ- ನೂರಾರು ಜನ ಒಟ್ಟಿಗೆ ಕುಳಿತು ವೀಕ್ಷಿಸಬಹುದಾದಂಥ ವಿಶಾಲವಾದ ರಂಗಮಂದಿರ. ಪ್ರತಿದಿನ ಗೆಜ್ಜೆ ಸದ್ದುಗಳು ನಿನದಿಸುವ ತಾಣದಲ್ಲಿ ನೃತ್ಯ ತರಬೇತಿ-ತಾಲೀಮು ನಿರಂತರ.



ಪ್ರತಿದಿನ ನೃತ್ಯಾಕಾಂಕ್ಷಿಗಳಿಗೆ ತಾಳ-ಲಯಗಳೊಂದಿಗೆ ಗಾಯನ-ಪಕ್ಕವಾದ್ಯದೊಂದಿಗೆ ನರ್ತಿಸುವ ನಲಿವಿನ ವಾತಾವರಣ. ಹಿರಿಯ ವಿದ್ಯಾರ್ಥಿಗಳು ಪ್ರಾತ್ಯಕ್ಷಿಕೆಯೊಂದಿಗೆ ಮಾರ್ಗದರ್ಶನ ಮಾಡುತ್ತಿದ್ದರೆ, ನಟುವಾಂಗ ಮಾಡುತ್ತ ತಪ್ಪದೆ ಅವರೆದುರಿಗೆ ಕುಳಿತಿರುವ ಮಹಾಗುರು ಎಷ್ಟೋ ಬಾರಿ ತಾವೇ ಮೇಲೆದ್ದು ಆಂಗಿಕಾಭಿನಯ-ಅಡವುಗಳನ್ನು ಹೇಳಿಕೊಡುವ, ತಿದ್ದುವ ಪರಿಪಾಠ. ಇವೆಲ್ಲ ಇಲ್ಲಿ ನೋಡಲು ಸಿಗುವ ಅಪರೂಪದ ದೃಶ್ಯಗಳು! ಬೆಳಗಿನಿಂದ ರಾತ್ರಿಯವರೆಗೂ ಈ ಹಿರಿಯ ಗುರುಗಳು ತಮ್ಮ ವಯಸ್ಸನ್ನೂ ಮರೆತು ನಿಗದಿತವಾಗಿ ತಾಲೀಮಿನ ಜಾಗದಲ್ಲಿ ಉಪಸ್ಥಿತರಿರುತ್ತಾರೆಂದರೆ ನಿಜಕ್ಕೂ ಅವರಿಗೆ ಗೌರವಪೂರ್ವಕ ಪ್ರಣಾಮಗಳು.

ಹಿರಿಯ ಚೇತನ 'ಕಿಟ್ಟು ಸಾರ್' ಎಂದೇ ಶಿಷ್ಯವೃಂದದಲ್ಲಿ ಜನಪ್ರಿಯರಾಗಿರುವ ಏಳು ದಶಕಗಳ ನಾಟ್ಯಸಾಧಕ ಯಾವ ಹಮ್ಮು ಬಿಮ್ಮು ಇಲ್ಲದೆ ಸರಳವಾಗಿ ಮನಬಿಚ್ಚಿ ಮಾತನಾಡುವ ವೈಖರಿ ಕಂಡಾಗ ಯಾರಿಗಾದರೂ ಅಚ್ಚರಿಯಾದೀತು.

'ತುಂಬಿದ ಕೊಡ ತುಳುಕದು' ಎಂಬ ಅನುಭವ ಅವರೊಡನೆ ಮುಖಾಮುಖಿ ಮಾತಿಗೆ ಕುಳಿತಾಗ.

ಅಂದಿನ ಮದರಾಸಿನ 'ಕಲಾಕ್ಷೇತ್ರ'ದ ಖ್ಯಾತಿ ಬಲ್ಲವರು, ಇಂದು 'ಮಿನಿಕಲಾಕ್ಷೇತ್ರ' ದಂತಿರುವ 'ಕಲಾಕ್ಷಿತಿ'ಯ ಹಾಗೂ ವಿಶ್ವಪ್ರಸಿದ್ಧ ನಾಟ್ಯ ಗುರು ರುಕ್ಮಿಣೀದೇವಿಅರುಂಡೇಲ್ ಶಿಷ್ಯ, ಅವರ ಮಾನಸ ಪುತ್ರನಂತಿರುವ 'ಕಿಟ್ಟು ಸರ್' ಕಳೆದ ಮೂರು ದಶಕಗಳಿಂದ ಸಾವಿರಾರು ಶಿಷ್ಯರನ್ನು ಉತ್ತಮ ಅಡಿಪಾಯ ಹಾಕಿ ಗಟ್ಟಿ ವ್ಯಕ್ತಿತ್ವ ರೂಪಿಸಿ ಅವರನ್ನು ಅಪ್ಪಟ ಪಂದನಲ್ಲೂರು ಶೈಲಿಯ ನೃತ್ಯ ಕಲಾವಿದರನ್ನಾಗಿ ರೂಪಿಸುತ್ತಿದ್ದಾರೆಂದರೆ ಉತ್ಪ್ರೇಕ್ಷೆಯಲ್ಲ. ಇಲ್ಲಿ ಮದರಾಸಿನ ಆ ಕಲಾಕ್ಷೇತ್ರದ ವಾತಾವರಣವೇ ಬಿಂಬಿತವಾಗಿಸುವಲ್ಲಿ ಕಿಟ್ಟು ಸರ್ ಯಶಸ್ವಿಯಾಗಿದ್ದಾರೆ.

ಶಿಸ್ತಿನ ಜೀವನಕ್ಕೆ ಎರಕ ಹುಯ್ಯುವ ಇಲ್ಲಿನ ನಾಟ್ಯ ಕಲಿಕೆಯ ಪದ್ಧತಿ ವಿಶಿಷ್ಟ.



ಕೇವಲ ನೃತ್ಯ ಕಲಿಸುವುದಷ್ಟೇ ಇಲ್ಲಿನ ಪಠ್ಯಕ್ರಮವಲ್ಲ. ನೃತ್ಯಾಕಾಂಕ್ಷಿಗಳ ಸರ್ವಾಂಗೀಣ ಬೆಳವಣಿಗೆ ಕಲಾಕ್ಷಿತಿಯ ಗುರಿ. ಪರಿಪೂರ್ಣ ವ್ಯಕ್ತಿತ್ವ ರೂಪಿಸುವತ್ತ ಆದ್ಯತೆ. ಇಲ್ಲಿನ ಬೋಧನಾಕ್ರಮವೇ ವಿಭಿನ್ನ. ಪ್ರತಿಯೊಬ್ಬ ವಿದ್ಯಾರ್ಥಿಯೂ ತರಗತಿಗೆ ಬಂದೊಡನೆ ಶ್ಲೋಕಗಳ ಪಠಣ ಕಡ್ಡಾಯ. ಉಚ್ಚಾರಣೆ, ಧ್ವನಿ ಏರಿಳಿತ, ವ್ಯಾಕರಣಗಳ ಬಗ್ಗೆ ಗಮನ ಕೊಡುವ ಇದು ಸನಾತನ ಸಂಸ್ಕೃತಿಯ ಜ್ಞಾನಾರ್ಜನೆಯ ಭಾಗವೂ ಹೌದು. ತಾಳ-ಲಯಜ್ಞಾನಗಳಿಗಾಗಿ ಸಂಗೀತವನ್ನು ಕನಿಷ್ಠ ಆರು ವರ್ಷಗಳು, ಸರಿಯಾದ ಕ್ರಮದಲ್ಲಿ ಕನಿಷ್ಠ 2 ವರ್ಷಗಳು ಅಡವುಗಳನ್ನು ಕರಗತ ಮಾಡಿಕೊಳ್ಳಬೇಕಾದ್ದು ಇಲ್ಲಿನ ಸಂಪ್ರದಾಯ. ಹಾಗೆಯೇ ಸತತ ಅಭ್ಯಾಸಕ್ರಮದ ಮೂಲಕ ನೃತ್ಯವನ್ನು ಜೊತೆಯಲ್ಲಿ ಪ್ರಸಾಧನ ಕಲೆಯನ್ನು, ನಟುವಾಂಗವನ್ನೂ ಕಲಿಸಲಾಗುವುದು. ಜೊತೆಗೆ ಅವುಗಳ ಪಠ್ಯವನ್ನೂ ಹೇಳಿ ಕೊಡಲಾಗುವುದು. ವರ್ಷಪೂರ್ತಿ ಇವುಗಳಿಗೆ ಪೂರಕವಾಗಿ ವಿವಿಧ ಕಾರ್ಯಾಗಾರಗಳು, ವಿಚಾರ ಸಂಕಿರಣ-ವಿಶೇಷ ಉಪನ್ಯಾಸಗಳನ್ನೂ ಆಯೋಜಿಸುವ ಪರಿಪಾಠವಿದೆ. ಈ ಎಲ್ಲ ಅಂಶಗಳಿಂದ 'ಕಲಾಕ್ಷಿತಿ' ಇನ್ನಿತರ ನೃತ್ಯಶಾಲೆಗಳಿಗಿಂತ ವಿಶಿಷ್ಟ ನೆಲೆಯಲ್ಲಿ ನಿಲ್ಲುತ್ತದೆ.

ಕಲಾಕ್ಷಿತಿಯ ವಿಶೇಷ ಪರಿಕಲ್ಪನೆಯನ್ನು ಸಾಕಾರಗೊಳಿಸಿರುವ ಕೃಷ್ಣಮೂರ್ತಿ ಅವರಿಗೆ ಅಂಥ ಆಳವಾದ



Downloaded From:www.kpscvaani.com

ಭದ್ರ ಅಡಿಪಾಯ, ವಿದ್ಯಾರ್ಜನೆ ದೊರೆತದ್ದರ ಹಿನ್ನಲೆಯಲ್ಲಿ ಒಂದು ರೋಚಕ ಕಥೆಯಿದೆ. ತಂದೆ ರಾಜಾರಾವ್- ತಾಯಿ ಸೇತುಬಾಯಿ, ತುಂಬು ಕುಟುಂಬ. ಬಾಲ್ಯದಿಂದಲೂ ಕಿಟ್ಟು ಅವರಿಗೆ ಸಂಗೀತ-ನೃತ್ಯ ಮುಂತಾದ ಲಲಿತಕಲೆಗಳಲ್ಲಿ ಒಲವು. ಮನೆಯ ಹತ್ತಿರವೇ ಇದ್ದ ಖ್ಯಾತ ಕಥಕ್ ನೃತ್ಯ ಗುರು ಮಾಯಾರಾವ್ ಅವರ ಮನೆಗೆ ಹೋಗುತ್ತಾ, ಅಲ್ಲಿ ನಡೆಯುತ್ತಿದ್ದ ನೃತ್ಯಾಭ್ಯಾಸ ನೋಡುತ್ತ ಮೊದಲ ಹೆಜ್ಜೆಗಳನ್ನು ಹಾಕಿದ್ದು ಕಥಕ್ ನೃತ್ಯಶೈಲಿಯಲ್ಲೇ. ಮಾಯಾ ರಾವ್ ಅವರಲ್ಲಿ ಕಥಕ್ ನೃತ್ಯದ ಪ್ರಾರಂಭಿಕ ಅಭ್ಯಾಸ ಶುರುವಾಯಿತು. ಆದರೂ ತರುಣದಲ್ಲೇ ಕೃಷ್ಣಮೂರ್ತಿಗೆ ಭರತನಾಟ್ಯ ನೃತ್ಯ ಕಲಿಯುವಾಸೆ ಇತಂತೆ, ಅದನ್ನು ಮನೆಯಲ್ಲಿ ಏಕಲವ್ಯನಂತೆ ಅಭ್ಯಾಸ ಮಾಡುತ್ತಿದ್ದರಂತೆ ಕೂಡ. ಕ್ರಮೇಣ ಕಲಿಯುವ ಅಭೀಪ್ಸೆ ಬಲಿಯಿತು.

ಆಚಾರ್ಯ ಪಾಠಶಾಲೆಯಲ್ಲಿ ಇಂಟರ್ ಮೀಡಿಯೇಟ್ ಶಿಕ್ಷಣ ಮುಗಿಯುತ್ತಿದ್ದಂತೆ ತಂದೆ ರಾಜಾರಾಯರು ಮಗನ ಅತ್ಯಾಸಕ್ತಿಯನ್ನು ಗಮನಿಸಿ, ಆ ಕಾಲದ ಖ್ಯಾತ ನಾಟ್ಯ ದಂಪತಿಗಳಾದ ಪ್ರೊ.ಯು.ಎಸ್.ಕೃಷ್ಣರಾವ್ ಹಾಗೂ ಚಂದ್ರಭಾಗಾ ದೇವಿ ಅವರ ಬಳಿ ಕರೆದೊಯ್ದರಂತೆ. ಆಗವರು ಹದಿನಾರರ ಯುವಕ ಕೃಷ್ಣಮೂರ್ತಿಯನ್ನು ಸೀದಾ ನೃತ್ಯ ಗಂಗೋತ್ರಿ ಎನಿಸಿದ್ದ ಮದರಾಸಿನ ರುಕ್ಮಿಣೀದೇವಿ ಅರುಂಡೇಲರ 'ಕಲಾಕ್ಷೇತ್ರ'ಕ್ಕೆ ಕಳಿಸಿದರು. ಅವರಿಗಾಗಲೇ ಈ ಹುಡುಗನಲ್ಲಿ ಹುದುಗಿದ್ದ  ನಾಟ್ಯ ತೇಜಸ್ಸು ಗೋಚರಿಸಿರಬೇಕು. ಪ್ರತಿಭಾನ್ವಿತ ವಿದ್ಯಾರ್ಥಿಯಾದ, ಭವಿಷ್ಯದ ಭರತನಾಟ್ಯದ ಪಂದನಲ್ಲೂರು ಬಾನಿಯವಕ್ತಾರನನ್ನು ಸರಿಯಾದ ಜಾಗಕ್ಕೇ ಸೇರಿಸಿದ ಯಶಸ್ಸು ಆ ನೃತ್ಯ ದಂಪತಿಗಳಿಗೆ ಸಲ್ಲಬೇಕು.

ಮದರಾಸು-ಕಲಾಕ್ಷೇತ್ರ ಹೊಸಜಾಗ-ಹೊಸ ಪರಿಸರ- ಭಾಷೆ-ಸಂಸ್ಕೃತಿ-ಊಟ-ತಿಂಡಿ ಎಲ್ಲವೂ ಭಿನ್ನ. ಮನೆಯಲ್ಲಿ ಸುಕುಮಾರನಂತೆ ಬೆಳೆದಿದ್ದ ಹುಡುಗನಿಗೆ ಗುರುಕುಲದ ಶಿಸ್ತುಬದ್ಧ ಜೀವನ ಮೊದಲಿಗೆ ಕಠಿಣವೆನಿಸಿತು. ಪ್ರಾರಂಭದ ದಿಗಿಲು ಬರುಬರುತ್ತಾ ದೂರಾಗಿ, ತಾಯಮಮತೆಯ ರುಕ್ಮಿಣಿದೇವಿ ಅವರ ಸಾನಿಧ್ಯದಲ್ಲಿ ನೆಮ್ಮದಿ-ಆತ್ಮವಿಶ್ವಾಸ ನೆಲೆಯೂರಿತು. ಎಲ್ಲರ ಬಾಯಲ್ಲಿ 'ಅತ್ತೆ' ಎಂದು ಕರೆಸಿಕೊಳ್ಳುತ್ತಿದ್ದ ಆಕೆ ಇವರಿಗೂ



ಪ್ರೀತಿಯ ಅತ್ತೆಯಾದರು. ವಿಶೇಷ ಆಸ್ಥೆಯಿಂದ ಇವರನ್ನು ನೋಡಿಕೊಳ್ಳುತ್ತಿದ್ದ 'ಅತ್ತೆ' ಇಂದೂ ಅವರ ಸ್ಮೃತಿಪಟಲದಲ್ಲಿ ಅಮರ.

ಅಲ್ಲಿ ಕೃಷ್ಣಮೂರ್ತಿಗೆ ಮೊದಲ ವರ್ಷ ಕಲಿಸಿದ್ದು 'ಕಥಕ್ಕಳಿ' ನೃತ್ಯವನ್ನು. ಅಲ್ಲಿ ಇವರಂತೆ ಹಲವು ಪುರುಷ ಅಭ್ಯಾಸಿಗಳಿದ್ದರು. ಭರತನಾಟ್ಯದ ಬಗ್ಗೆ ಕನವರಿಸುತ್ತಿದ ಹುಡುಗನಿಗೆ ಅಚ್ಚರಿ ಮೂಡಿತಾದರೂ ಆಗ ಕಥಕ್ಕಳಿಯ ಪ್ರಾಶಸ್ತ್ಯ ಅರಿವಾಗಲಿಲ್ಲ. ವಿಧೇಯ ವಿದ್ಯಾರ್ಥಿಗೆ ಆಯ್ಕೆಯಿರಲಿಲ್ಲ. ನಿಷ್ಠೆಯ ಸ್ವಭಾವದ ಕೃಷ್ಣಮೂರ್ತಿ ಚಂದೂ ಫಣಿಕ್ಕರ್ ಅವರ ಮಾರ್ಗದರ್ಶನದಲ್ಲಿ ಬದ್ಧತೆಯಿಂದ ಕಥಕ್ಕಳಿ ನೃತ್ಯ ಕಲಿತು ಪ್ರದರ್ಶನಗಳನ್ನು ನೀಡಲಾರಂಭಿಸಿದ



ಮೇಲೆಯೇ ಅವರಿಗೆ 'ಕಥಕ್ಕಳಿ'ಯ ಪ್ರಾಮುಖ್ಯ ಅರಿವಾದದ್ದು. ಪ್ರಾರಂಭಿಕವಾಗಿ 'ಕಥಕ್ಕಳಿ' ಕಲಿಯುವ ಅವಶ್ಯಕತೆ ಕೂಡಲೇ ಮನಗಂಡರು. ಪಾತ್ರಗಳ ಚಿತ್ರಣಕ್ಕೆ ಹೇಳಿ ಮಾಡಿಸಿದಂಥ, ಮುಖಭಾವಗಳನ್ನು ಸಮರ್ಪಕವಾಗಿ, ನವರಸಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಲು ಸಹಕಾರಿಯಾದ ಈ ಮಾಧ್ಯಮದ ಬಗ್ಗೆ ಅವರಲ್ಲಿ ಇಂದಿಗೂ ಅಪಾರ ಗೌರವವಿದೆ.

ಮುಂದಿನ ವರ್ಷ ಅವರಿಗೆ ಭರತನಾಟ್ಯ ಕಲಿಯುವ ಅವಕಾಶ ದೊರೆಯಿತು. ಕಲಾಕ್ಷೇತ್ರ ನೃತ್ಯದಿಗ್ಗಜರಾದ ಎನ್.ಎಸ್.ಜಯಲಕ್ಷ್ಮೀ, ಪುಷ್ಪಾಶಂಕರ್, ವಸಂತಾವೇದಾಂ, ಅಡಿಯಾರ್‌ಲಕ್ಷ್ಮಣ್ ಮತ್ತು ಶಾರದಾ ಹಾಫ್ಮನ್ಮುಂತಾದವರ ನುರಿತ ಗರಡಿಯಲ್ಲಿ ಹಗಲಿರುಳೂ ಪರಿಶ್ರಮಿಸಿ ವಿದ್ಯಾರ್ಜಿಸಿ, ಭರತನಾಟ್ಯ ಶೈಲಿಯಲ್ಲಿ ಪಳಗಿದರು. ಅವರ ಖಚಿತವಾದ ಪರಿಪೂರ್ಣ ನೃತ್ತಗಳನ್ನು 'ಅತ್ತೆ'ಯೂ ಮೆಚ್ಚುಗೆ ವ್ಯಕ್ತಪಡಿಸಿದ್ದು ಅವರ ಧನ್ಯತೆಯ ಕ್ಷಣ. ಸದಾ ಪರಿಪೂರ್ಣತೆಗಾಗಿ ತುಡಿಯುತ್ತಿದ್ದ ಗುರು ರುಕ್ಮಿಣಿದೇವಿಯವರು ಯಾರೇ ತಪ್ಪು ಮಾಡಲಿ ಪ್ರತಿ ಹಂತದಲ್ಲೂ ಅವರನ್ನು ತಿದ್ದಿ ತೀಡಿ, ಸರಿಯಾಗಿ ಮಾಡುವವರೆಗೂ ಬಿಡುತ್ತಿರಲಿಲ್ಲ.

ಕಲಾಕ್ಷೇತ್ರ ಕೇವಲ ನೃತ್ಯ ಕಲಿಕೆಯ ತಾಣವಾಗಿರಲಿಲ್ಲ. ಅಲ್ಲಿ ಸಂಗೀತ, ವೀಣೆ ಮುಂತಾದ ಎಲ್ಲ ವಾದ್ಯಗಳೂ, ಚಿತ್ರಕಲೆ, ಪೇಯಿಂಟಿಂಗ್, ಕಲಂಕಾರಿ ಮುಂತಾದ ಎಲ್ಲ ಕರಕುಶಲ ವಿದ್ಯೆಗಳನ್ನೂ ಹೇಳಿಕೊಡಲಾಗುತ್ತಿತ್ತು. ಆದ್ದರಿಂದ ಇಲ್ಲಿಗೆ ಬಂದವರಿಗೆ ಸಕಲ ಕಲೆಗಳ ಪರಿಚಯ, ತರಬೇತಿ ದೊರೆಯುತ್ತಿತ್ತು.


Downloaded From:www.kpscvaani.com



ಪದಂ ಮತ್ತು ಜಾವಳಿಗಳ ಜೀವಂತ ಭಂಡಾರವೆನಿಸಿದ್ದ ಅಂದಿನ ಖ್ಯಾತ ನೃತ್ಯ ಕಲಾವಿದೆ ಮೈಲಾಪುರ ಗೌರಿ ಅಮ್ಮಾಳರಲ್ಲಿ ಸಾಂಪ್ರದಾಯಕ ನೃತ್ಯಾಭಿನಯವನ್ನೂ ಕರಗತ ಮಾಡಿಕೊಂಡರು ಕೃಷ್ಣಮೂರ್ತಿ. ಕಲಿಯಲು ವಿಪುಲ ಅವಕಾಶ ಆ ಗುರುಕುಲದಲ್ಲಿ. ಪರಿಣತ ಕಲಾವಿದರ ತಂಡವೇ ಅಲ್ಲಿ ಬೀಡುಬಿಟ್ಟಿತ್ತು. ಸುತ್ತಲೂ ಸಂಗೀತ ದಿಗ್ಗಜರಾದ ಟೈಗರ್ವರದಾಚಾರ್, ಪಾಪ ನಾಸಂಶಿವಂ, ಶಮ್ಮನಗುಡಿ, ಮೈಸೂರು ವಾಸುದೇವಾಚಾರ್ ಮುಂತಾದ ಸಂಗೀತ ಕೋವಿದರು, ವಾಗ್ಗೇಯಕಾರರ ವಲಯವೇ ಸುತ್ತುವರಿದಿದ್ದರಿಂದ ಕಲಾ ಸರಸ್ವತಿಯ ಸಾಂಗತ್ಯ. ಹೀಗಾಗಿ ಅವರ ಭಾಗ್ಯಕ್ಕೆ ಎಣೆಯೇ ಇರಲಿಲ್ಲ. ಪ್ರಸಿದ್ಧ ನೃತ್ಯ ಗುರು ಇ. ಕೃಷ್ಣ ಅಯ್ಯರ್ 'ಹೆಣ್ಣುಮಕ್ಕಳು ಮದುವೆ ಮಾಡಿಕೊಂಡು ಹೋದ ನಂತರ ನೃತ್ಯ ಬಿಟ್ಟುಬಿಡುತ್ತಾರೆ, ಪುರುಷರಿಂದಲೇ ನೃತ್ಯಕಲೆ ವೃದ್ಧಿ ' ಎಂದು ಇವರಿಗೆ ಅಮಿತ ಪ್ರೋತ್ಸಾಹ ನೀಡಿದರು. ವರ್ಷಗಟ್ಟಲೆ ಅಡವುಗಳ ಅಭ್ಯಾಸ, ಸಂಗೀತದಲ್ಲಿ ಪರಿಶ್ರಮ, ತಾಳ–ಲಯಗಳ ಬಗ್ಗೆ ಆಳವಾದ ಜ್ಞಾನ–ನೃತ್ಯ ಕಲಿಕೆಗೆ ಯಾವುದೇ ನಿರ್ದಿಷ್ಟ ಸಮಯಾವಧಿ ಇಲ್ಲದ್ದರಿಂದ ಬೆಳಗಿನಿಂದ ಬೈಗಿನವರೆಗೂ ನೃತ್ಯಾಭ್ಯಾಸವೊಂದೇ, ಅದರಲ್ಲೇ ನಲಿವು–ಸಾರ್ಥಕ್ಯ ಭಾವ. ಅಂಗಶುದ್ಧಿ ನಾಟ್ಯ ಅವರ ಧ್ಯೇಯ. ನಟುವಾಂಗ ಕಲಿಕೆಯೂ ಜೊತೆ ಜೊತೆಯಲ್ಲೇ. ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಯೇ ಕಲಾಕ್ಷೇತ್ರದ ಪರಮ ಗಂತವ್ಯ. ಇಂಥ ಒಂದು ದೈವೀಕ ಕಲಾಮೂಸೆಯಲ್ಲರಳಿದ ಕೃಷ್ಣಮೂರ್ತಿ ಅವರಿಗೆ, ನೇರ ಗುರು ರುಕ್ಮಿಣಿ ಅವರ ಮೌಲಿಕ ತರಬೇತಿಯ ಸುಪರ್ದಿಯಲ್ಲಿ ವಿಕಸನಗೊಂಡ ಧನ್ಯತಾಭಾವ ಇಂದಿಗೂ ಅದು ನೆನಪಿನಲ್ಲಿ ಚಿರಾಯು.

ಸತತ ಹದಿನಾಲ್ಕು ವರ್ಷಗಳ ಕಾಲ, ದೀರ್ಘಾವಧಿಯ ತಪಸ್ಸಿನಂತೆ ಧ್ಯಾನಸ್ಥರಾಗಿ ಭರತ ನಾಟ್ಯವನ್ನು ಕಣಕಣವಾಗಿ ಅರಗಿಸಿಕೊಂಡ ಕೃಷ್ಣಮೂರ್ತಿ ದೃಢ ಸಂಕಲ್ಪದಿಂದ ತಮ್ಮ ಗುರಿ ಸಾಧಿಸಿದರು. ಹೊರಗಿನ ಪ್ರಪಂಚದ ಗೊಡವೆಯೇ ಇಲ್ಲದೆ, ವರ್ಷಾನುಗಟ್ಟಲೆ ಪಂದನಲ್ಲೂರು ಬಾನಿಯಲ್ಲಿ ನುರಿತು, ಪರಿಪೂರ್ಣತೆಯ ಪ್ರತೀಕವಾಗಿ ಬೆಳೆದರು ಎಂದರೆ ಉತ್ಪ್ರೇಕ್ಷೆಯಲ್ಲ. ಅದೇ ತಾನೇ ಕೇಂದ್ರ ಸರ್ಕಾರವು ಸ್ಥಾಪಿಸಿದ ಪ್ರಪ್ರಥಮ ಸ್ಕಾಲರ್ಷಿಪ್ ಮತ್ತು ಪುರುಷ ನರ್ತಕ ಪ್ರಶಸ್ತಿಯೂ ಕೃಷ್ಣಮೂರ್ತಿ ಅವರಿಗೆ ದೊರೆತದ್ದು ಅವರ ಹಿರಿಮೆ–ಹೆಗ್ಗಳಿಕೆ.

ವೃತ್ತಿಪರ ನೃತ್ಯಕಲಾವಿದರಾಗಿ ಹೊರಹೊಮ್ಮಿದ ಕೃಷ್ಣಮೂರ್ತಿ ಭರತನಾಟ್ಯದಲ್ಲಿ ಸಂಪೂರ್ಣ ವಿದ್ವತ್ತನ್ನು ಗಳಿಸಿದ ನಂತರ ಅವರು ಕಲಾಕ್ಷೇತ್ರದಲ್ಲೇ ನೃತ್ಯ ಶಿಕ್ಷಕರಾಗಿ ಸಮರ್ಪಣಾ ಮನೋಭಾವದಿಂದ ಮುಂದುವರಿದರು. ಈ ನಡುವೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ರುಕ್ಮಿಣೀಅರುಂಡೇಲ್ ಅವರೊಡನೆ ಆಕೆಯ ವಿವಿಧ ನೃತ್ಯರೂಪಕಗಳಲ್ಲಿ, ಏಕವ್ಯಕ್ತಿ ಪ್ರಸ್ತುತಿಯಾಗಿ, ಸಮೂಹನೃತ್ಯಗಳಲ್ಲಿ ಭಾಗವಹಿಸುತ್ತ ಅಸಂಖ್ಯಾತ ನೃತ್ಯ ಪ್ರದರ್ಶನಗಳನ್ನು ನೀಡಿದ್ದು ಅವರ ಅಗ್ಗಳಿಕೆ. ನೃತ್ಯವನ್ನೇ ಹಾಸಿ ಹೊದ್ದು ಉಸಿರಾಡುತ್ತಿದ್ದ ಅವರಿಗೆ ನೃತ್ಯವೇ ಸರ್ವಸ್ವವಾಯಿತು. ಹೀಗಾಗಿ ನಲವತ್ತು ವರ್ಷಗಳ ಕಾಲ ನಿಸ್ವಾರ್ಥವಾಗಿ ಇನ್ನಿತರ ಯಾವ ಲೌಕಿಕ ಆನಂದ–ಬಂಧನಗಳಿಗೂಸಿಲು ಕದೆ, ನರ್ತನದ ದೈವೀಕ ಸಂಭ್ರಮದ ಜೀವನದಲ್ಲಿ ಕಳೆದು ಹೋದುದ್ದು, ವಿದ್ಯಾರ್ಥಿಗಳ ಜನಪ್ರಿಯ 'ಕಿಟ್ಟು ಸರ್' ಅವರ ವೈಶಿಷ್ಟ್ಯ.

ಮುಂದೆ ಕೃಷ್ಣಮೂರ್ತಿ ಅವರ ಬದುಕಿನ ಎರಡನೆಯ ಅಧ್ಯಾಯ ಬೆಂಗಳೂರಿನಲ್ಲಿ ಆರಂಭವಾಯಿತು. 1986ರಲ್ಲಿ ರುಕ್ಮಿಣೀದೇವಿಯವರು ಅಸ್ತಂಗತರಾದಾಗ ಕಲಾಕ್ಷೇತ್ರ, ಕೃಷ್ಣಮೂರ್ತಿ ಅವರ ಪಾಲಿಗೆ ಬರಿದೋ ಬರಿದು. ಶೂನ್ಯತಾ ಭಾವ, ಹೃದಯ ಭಾರ. 1991ರಲ್ಲಿ ಕೃಷ್ಣಮೂರ್ತಿ ಅವರು ಕಲಾಕ್ಷೇತ್ರ ತೊರೆದು, ತಮ್ಮ ತವರೂರು ಬೆಂಗಳೂರಿಗೆ ಮರಳಿದರು. ಆಗ ಅವರಿಗೆ ಒತ್ತಾಸೆಯಾದವರು ಅವರ ಅಕ್ಕ ರುಕ್ಮಾ ನಾರಾಯಣ್. ಇಡೀ ಜೀವನವನ್ನು ನೃತ್ಯಕ್ಷೇತ್ರಕ್ಕೆ ಸಮರ್ಪಿಸಿಕೊಂಡ ಅವರಿಗೆ ದಿಕ್ಸೂಚಿಯಾದವರು ಈ ಅಕ್ಕನವರೇ. ಅವರ ಬಾಳು ಸಾರ್ಥಕವಾಗಿ ಕಳೆಯಲು ಪ್ರೇರಕರಾಗಿ, ಕಲಾಕ್ಷೇತ್ರಕ್ಕೆ ಪರ್ಯಾಯವಾಗಿ 'ಕಲಾಕ್ಷಿತಿ'ಯನ್ನು ನಿರ್ಮಿಸಲು ಕಾರಣೀಭೂತರಾಗಿ, ರಾಜಧಾನಿಯ ನೃತ್ಯಾಸಕ್ತರಿಗೆ ಶುದ್ಧವಾದ ಕಲಾಪರಿಸರವನ್ನು ರೂಪಿಸಲು ನೆರವಾದರು.

ಸೋದರಿಯ ಪ್ರೋತ್ಸಾಹ–ನೆರವುಗಳನ್ನು ಸ್ಮರಿಸುವ ಕೃಷ್ಣಮೂರ್ತಿಗಳು ತಾವು ಬೆಂಗಳೂರಿನಲ್ಲಿ ಕಲಾಕ್ಷಿತಿ ಸಂಸ್ಥೆಯನ್ನು ಸ್ಥಾಪಿಸಲು ಶ್ರೀಮತಿ ರುಕ್ಮಿಣೀದೇವಿಅರುಂಡೇಲ್ ಅವರೇ ಮುಖ್ಯ ಪ್ರೇರಣೆ ಎಂದು ಕೃಷ್ಣಮೂರ್ತಿ ಕೃತಜ್ಞತೆಯಿಂದ ನೆನೆಯುತ್ತಾರೆ. ಗುರುಗಳಿಂದ ಕಲಿತ ವಿದ್ಯೆಯನ್ನು ಇಂದಿನ





Downloaded From:www.kpscvaani.com

ಪೀಳಿಗೆಗೆ ಧಾರೆ ಎರೆಯುವುದೇ ತಮ್ಮ ಜೀವನ ಧ್ಯೇಯ...ಕರ್ತವ್ಯವೆನ್ನುತ್ತಾರೆ. ಪರಂಪರಾನುಗತವಾಗಿ ಬೆಳೆದು ಬಂದಿರುವ ಮಾರ್ಗದಲ್ಲೇ ಮುಂದುವರಿಯಲು ಇಚ್ಚಿಸುವ, ಈ ಬಗ್ಗೆ ಖಚಿತ ಅಭಿಪ್ರಾಯ ಇವರದಾದರೂ ಪ್ರಾಯೋಗಿಕ ಪ್ರಯತ್ನಗಳಿಗೆ ತಮ್ಮ ಆಕ್ಷೇಪವಿಲ್ಲ ಎನ್ನುತ್ತಾರೆ ಕೂಡ.

'ದೈವಭಕ್ತಿ ಮತ್ತು ಗುರು ಭಕ್ತಿ ಇಲ್ಲದೆ ಈ ಪವಿತ್ರವಾದ ವಿದ್ಯೆ ಖಂಡಿತಾ ಒಲಿಯುವುದಿಲ್ಲ' ಎಂಬ ದೃಢವಾದ ನಂಬಿಕೆ ಅವರದು. ಕಲಾ ಉತ್ಕೃಷ್ಟತೆಯ ಬಗ್ಗೆಯೇ ಹೆಚ್ಚಿನ ಒತ್ತನ್ನು ನೀಡುವ ಈ ಕರ್ಮಯೋಗಿ, ತಮ್ಮ ನೃತ್ಯಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳು ಭರತನಾಟ್ಯದ ಸೂಕ್ಷ್ಮ ಅಂಶಗಳಲ್ಲಿ ಉತ್ತಮ ತರಬೇತಿ ಪಡೆದು ಅದರ ಸಾರ ಸರ್ವಸ್ವವನ್ನು ಸರಿಯಾಗಿ ಗ್ರಹಿಸುವಂತೆ ಅತೀವ ಎಚ್ಚರ-ಗಮನ ಕೊಡುತ್ತಾರೆ. ತಾವು ಕಲಿತ ಪದ್ಧತಿಗೆ ಲವಲೇಶವೂ ಚ್ಯುತಿ ಬಾರದಂತೆ ಅದರ ಮೂಲ ರೂಪ ಉಳಿಸಿಕೊಳ್ಳುವತ್ತ ನಿಗಾವಹಿಸುತ್ತ ಬಂದಿರುವುದು ಇವರ ವಿಶೇಷ. ಈ ನಿಟ್ಟಿನಿಂದ ಇಂದು ಕಲಾಕ್ಷಿತಿಯಲ್ಲಿ ತರಬೇತಿಗೊಳ್ಳುವುದು ವಿದ್ಯಾರ್ಥಿಗಳಿಗೆ ಅತ್ಯಂತ ಪ್ರತಿಷ್ಠೆ ಮತ್ತು ಹೆಗ್ಗಳಿಕೆಯ ಸಂಗತಿ.

ದೇಶ-ವಿದೇಶಗಳಲ್ಲಿ ರುಕ್ಮಿಣಿದೇವಿಯವರ ಈ ನೇರಶಿಷ್ಯನ ಪ್ರತಿಭೆಯ ಪ್ರದರ್ಶನಗಳು ಅಸಂಖ್ಯ ನಡೆದಿರುವುದಲ್ಲದೆ, ಅವರು ಭಾಗವಹಿಸಿದ ನೃತ್ಯರೂಪಕಗಳ ಸಂಖ್ಯೆಯೂ ಅಗಣಿತ. ಶಬರಿ ಮೋಕ್ಷಂ, ಕಣ್ಣಪ್ಪಾರ್ ಕೊರವಂಜಿ, ರುಕ್ಮಿಣೀಕಲ್ಯಾಣಂ, ಚೂಡಾಮಣಿ ಪ್ರದಾನಂ, ಆಂಡಾಳ್ಚರಿತಂ, ಸೀತಾಸ್ವಯಂವರಂ, ಪುರಂದರದಾಸ ಮುಂತಾದ ನೃತ್ಯರೂಪಕಗಳಲ್ಲಿ ಇವರದು ಸ್ಮರಣೀಯ ಪಾತ್ರಗಳು.

ನೊಬೆಲ್ ಪ್ರಶಸ್ತಿ ವಿಜೇತ ಸರ್.ಸಿ.ವಿ.ರಾಮನ್ ಅವರ ಸಮಕ್ಷಮ ವರ್ಲ್ಡ್‌ಕಲ್ಚರ್‌ನಲ್ಲಿ ಹಾಗೂ ಬೆಂಗಳೂರಿನ ಗಾಯನ ಸಮಾಜದಲ್ಲಿ ಯುವ ಕೃಷ್ಣಮೂರ್ತಿ 1968ರಲ್ಲಿ 'ಅರಂಗೇಟ್ರಂ' ಮಾಡಿದ್ದು ಇವರ ಜೀವನದ ಎರಡು ವಿಶೇಷ ಸಂದರ್ಭಗಳು.

ಯಾವುದೇ ಪ್ರಚಾರವನ್ನು ಬಯಸದ ಇವರು ಇಂದಿಗೂ ಎಲೆಮರೆಯ ಕಾಯಂತೆಯೇ ತಮ್ಮ ತಪೋವನದಲ್ಲಿ ಶಾಂತ ಜೀವನ ನಡೆಸುತ್ತಿದ್ದಾರೆ. ನಿಜವಾದ ಕಲೆಯ ಬೆಲೆಯನ್ನು ಬಲ್ಲವರಿಗೆ ಮಾತ್ರ ಇವರ ವಿದ್ವತ್ತು ಮತ್ತು ವ್ಯಕ್ತಿತ್ವದ ಔನ್ನತ್ಯ ಅರಿವಾಗುವುದು.

ಒಬ್ಬ ವಿದ್ಯಾರ್ಥಿ ನೃತ್ತ-ನೃತ್ಯ-ಅಭಿನಯಗಳೆಲ್ಲದರ ಮೇಲೆ ಪ್ರಾವೀಣ್ಯ ಸಾಧಿಸಿದ ಮೇಲೆಯೇ ಅಂದರೆ ಸುಮಾರು ಹತ್ತಾರು ವರ್ಷಗಳು ಅಭ್ಯಾಸ ಮಾಡಿ ಪರಿಶ್ರಮಿಸಿದ ನಂತರವೇ ಇಲ್ಲಿ 'ರಂಗಪ್ರವೇಶ'ದ ವಿಧಿ. ಅದನ್ನು ನಿರ್ಧರಿಸುವವರು ಗುರುಗಳೇ. ಅದಕ್ಕೆ ಮುನ್ನ ವಿದ್ಯುಕ್ತವಾಗಿ 'ಗೆಜ್ಜೆಪೂಜೆ'. ನೃತ್ಯಕಲಾವಿದರ ನಕ್ಷತ್ರ-ಶುಭಮೂಹೂರ್ತ ಎಲ್ಲವನ್ನೂ ಕೂಲಂಕಷ ವಿಚಾರಿಸಿ, ಹೊಂದಿದ ಶುಭ ಮುಹೂರ್ತದಲ್ಲಿ ಕಲಾಕ್ಷಿತಿಯಲ್ಲಿ ಪ್ರಭಾತದಲ್ಲೇ ಅತ್ಯಂತ ಶ್ರದ್ಧೆಯಿಂದ ರುದ್ರ, ಹವನ-ಹೋಮ, ಪೂಜೆ-ಪುನಸ್ಕಾರಗಳು ನಡೆಯುತ್ತವೆ. ಗೆಜ್ಜೆಗೂ ದೈವೀಕ ಆಯಾಮದಲ್ಲಿ ಪೂಜೆ ಸಲ್ಲಿಕೆ- ಗುರುಗಳಿಂದ ಆಶೀರ್ವಾದ ಪೂರ್ವಕವಾಗಿ ನೀಡಿಕೆ. ಅನಂತರ ಗೆಜ್ಜೆಪೂಜೆಯ ಕಲಾವಿದರು ಕನಿಷ್ಠ ಎರಡು ಕೃತಿಗಳನ್ನಾದರೂ ಆ ಸಂದರ್ಭದಲ್ಲಿ ನರ್ತಿಸುವುದು ವಾಡಿಕೆ. ಜನಸಮೂಹದ ಮುಂದೆ ಪ್ರದರ್ಶನ ನೀಡುವ ಭೀತಿ ನಿವಾರಣೆಯ ಕಾರಣವೂ ಇದಕ್ಕಿರಬಹುದು.

ರಂಗಪ್ರವೇಶಗಳಲ್ಲಿ ಹೊಲಿದ ಉಡುಪುಗಳನ್ನು ಧರಿಸುವುದು ವರ್ಜ್ಯ. ಸೀರೆಯನ್ನು ಮೂರು ಹಂತಗಳಲ್ಲಿ ಕಲಾತ್ಮಕವಾಗಿ ಮಡಿಚಿ ಉಟ್ಟುಕೊಳ್ಳುವ ಸಂಪ್ರದಾಯ ಇಂದಿಗೂ ಚಾಚೂ ತಪ್ಪದೆ ನಡೆದುಕೊಂಡು ಬಂದಿದೆ. ಸರಳವಾದ ಆಭರಣಗಳು, ಮೊಗ್ಗಿನ ಜಡೆ (ಪಟ್ಟೆ), ಸೂರ್ಯ-ಚಂದ್ರ ಧರಿಸುವುದು ಕಡ್ಡಾಯವೇನಲ್ಲ. ಇಲ್ಲಿ ಕಲಾಪ್ರದರ್ಶನ, ವಿಧಿ-ವಿಧಾನಗಳಿಗೆ ಆದ್ಯತೆ ನೀಡಲಾಗುವುದೇ ಹೊರತು ಆಡಂಬರ-ಅನಗತ್ಯ ವೆಚ್ಚಗಳಿಗಲ್ಲ. ತನಗೆ ತಾನೇ ಅವುಗಳಿಗೆ ಕಡಿವಾಣ ಬೀಳುವುದು ಸ್ವಾಗತಾರ್ಹ ಸಂಗತಿ. ಮೂವತ್ತಕ್ಕೂ ಹೆಚ್ಚಿನ ರಂಗಪ್ರವೇಶಗಳು ಇಲ್ಲೇ ಕಲಾಕ್ಷಿತಿಯ ಆವರಣ-ವೇದಿಕೆಯ ಮೇಲೆಯೇ ಯಶಸ್ವಿಯಾಗಿ ನಡೆದಿವೆ. ಕೆಲವು ಹೊರಗಿನ ಕಲಾಮಂದಿರಗಳಲ್ಲೂ ಬಹು ಸರಳವಾಗಿ ನಡೆದಿವೆ. ಸರಳತೆಯೇ ಕಲಾಕ್ಷಿತಿಯ ಧ್ಯೇಯ ಮತ್ತು ಸದಾಶಯ.

ಅನುಕೂಲವಂತರ ಕುಟುಂಬದಲ್ಲಿ ಜನಿಸಿದ್ದರೂ ಕಲಾಸಾಧನೆಗಾಗಿ ಕೃಷ್ಣಮೂರ್ತಿ ಅವರು ಕಲಾಕ್ಷೇತ್ರದಂಥ ತಪೋವನ ಸೇರಿ, ಅಪಾರ ದೇಹಶ್ರಮದ ನೃತ್ಯಸಾಧನೆಗೈದು, ಬ್ರಹ್ಮಚಾರಿಯಾಗಿದ್ದುಕೊಂಡು ಇಡೀ ಜೀವನವನ್ನು ಕಲಾಸೇವೆಯಲ್ಲಿ ಕಳೆದವರು.

ಇವರ ಅಪ್ಪಟ ಪ್ರತಿಭೆಯನ್ನು ಗುರುತಿಸಿ, ಅನೇಕ ಪ್ರಶಸ್ತಿ-ಪುರಸ್ಕಾರಗಳು ಹಿಂಬಾಲಿಸಿಕೊಂಡು ಬಂದಿವೆ. ಕರ್ನಾಟಕ ಸರ್ಕಾರದ "ಕಲಾಶ್ರೀ" ಪ್ರಶಸ್ತಿ, ಬೆಂಗಳೂರು ಗಾಯನ ಸಮಾಜದಿಂದ 'ವರ್ಷದ ಕಲಾವಿದ ಪ್ರಶಸ್ತಿ', ನಾಟ್ಯ ತಪಸ್ವಿ, ಸಂಗೀತ ಸುಮಲತಾ ನಾಟ್ಯ ರಸಋಷಿ, ಪುರವಂಕರ ಸಂಗೀತ ಪ್ರಶಸ್ತಿ, ಕರ್ನಾಟಕ ಸರ್ಕಾರದ 'ಹಿರಿಯ ನಾಗರೀಕ' ಮನ್ನಣೆ, 'ಪುರಂದರ ಪ್ರಶಸ್ತಿ', ಎಲ್ಲಕ್ಕೂ ಕಳಶಪ್ರಾಯವಾಗಿ ರಾಜ್ಯ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ' ಮತ್ತು ಜಿನಿವಾ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪ್ರದಾನವಾಗಿದೆ.


ಸದಾ ಕ್ರಿಯಾಶೀಲರಾದ, ಕೃಷ್ಣಮೂರ್ತಿ ಅವರು ಈ ಇಳಿವಯಸ್ಸಿನಲ್ಲೂ ಸುಮ್ಮನೆ ಕೂಡದೇ ಅನೇಕ ಹೊಸ ಹೊಸ ನೃತ್ಯ ಸಂಯೋಜನೆಗಳನ್ನು ಮಾಡುವುದರಲ್ಲಿ ನಿರತರು. ಪ್ರೊ.ಎಂ.ಆರ್.ಕೆ ಅವರು ಸಂಯೋಜಿಸಿರುವ ಅನೇಕ ಸುಂದರ ಸಂಯೋಜನೆಗಳಲ್ಲಿ ಪ್ರಮುಖವಾದವುಗಳೆಂದರೆ- ಕರ್ನಾಟಕ ಶಾಸ್ತ್ರೀಯ ಸಂಗೀತದೊಂದಿಗೆ ಹಿಂದೂಸ್ತಾನೀ ಸಂಗೀತವನ್ನು ಬೆಸೆದ ಪಂಚಕನ್ಯಾದೇವೀಸ್ತುತಿ, ಶ್ರೀಕೃಷ್ಣದೀಪಿಕಾ, ಯುಗಾದಿ ವೈಭವ, ರಸವಿಲಾಸ, ವಚನ ವಲ್ಲರಿ, ಗೋಕುಲ ನಿರ್ಗಮನ ಮತ್ತು ಅಕ್ಕ ಮಹಾದೇವಿ ಮುಂತಾದವು.

ಕಲಾಕ್ಷಿತಿ ತಂಡವು ನಾಡಿನ ಎಲ್ಲ ಪ್ರತಿಷ್ಠಿತ ನೃತ್ಯೋತ್ಸವ, ವೇದಿಕೆಗಳು, ದೇವಾಲಯಗಳಲ್ಲಿ ಮತ್ತು ಅಂತಾರಾಷ್ಟ್ರೀಯ ಪ್ರತಿನಿಧಿಗಳ ಸಮ್ಮುಖದಲ್ಲಿ ಅನೇಕಾನೇಕ ನೃತ್ಯಪ್ರದರ್ಶನಗಳನ್ನು ನೀಡಿರುವುದು ಹೆಗ್ಗಳಿಕೆಯ ಸಂಗತಿ. ದೇಶ-ವಿದೇಶಗಳಲ್ಲೂ ಕಲಾಕ್ಷಿತಿಯ ಖ್ಯಾತಿಯನ್ನು ಮನಗಂಡ ಪ್ರಮುಖ ಸಂಸ್ಥೆಗಳು ತಪ್ಪದೆ ಆಹ್ವಾನಿಸುವ ಗೌರವ, ಸಂಸ್ಥೆಯ ಹಾಗೂ ಗುರುಗಳ ಅನನ್ಯತೆಯನ್ನು ಸಾರಿ ಹೇಳುತ್ತವೆ. ಭಾರತೀಯ ನೃತ್ಯ ಇತಿಹಾಸದಲ್ಲಿ 'ಕಲಾಕ್ಷಿತಿ' ಸಂಸ್ಥೆಯು ಒಂದು ಭದ್ರವಾದ ಹಾಗೂ ಶಾಶ್ವತವಾದ ಉನ್ನತ ಸ್ಥಾನವನ್ನು ಗಳಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ■



Downloaded From:www.kpscvaani.com

# ಪದಬಂಧ-42




ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ವಿಜ್ಞಾನವನ್ನು ಬಲ್ಲವನು (3)
2. ಓಟನ್ನು ಚಲಾಯಿಸಲು ಏರ್ಪಾಟು ಮಾಡಿರುವ ಸ್ಥಳ (4)
4. ಸಾಗಿಸುವಿಕೆಗೊಂದು ಪರ್ಯಾಯ ಪದ (3)
5. ನಗುತ್ತಿರುವ ವದನ (4)
7. ಲಿಖಿತ ಮೂಲಕ ಮಾಡಿಕೊಳ್ಳುವ ಅರಿಕೆ (3)
9. ಮಲೆನಾಡಿನ ಹೆಬ್ಬಾಗಿಲು ಎಂದು ಹೆಸರಾಗಿರುವ ಈ ನಗರವು ಜಿಲ್ಲೆಯೂ ಆಗಿದೆ (4)
11. ಕಠೋರವಾದ ಕೈ! (2)
12. ಗರತಿಯ ನಡಗೆ! (2)
13. ಓಟನ್ನು ನೀಡುವುದು (4)
15. ಕರದಲ್ಲಿ ಕೊನೆಗೊಂಡಿರುವ ಮಿಶ್ರಣ (3)
17. ಶೌರ್ಯಸಾಹಸಗಳನ್ನು ವರ್ಣಿಸುವ ಕಾವ್ಯ (4)
19. ದನವಿರುವ ಮನೆ (3)
20. ಸುಮಾರು ಮೂರು ಮೈಲುಗಳ ಒಂದು ಅಳತೆ (4)
21. ನಯವಾಗಿ ಹೊಳೆಯುತ್ತಿರುವ ಅಕ್ಷಿ (3)

## ಮೇಲಿಂದ ಕೆಳಕ್ಕೆ

1. ವಿವಾದವಿಲ್ಲದೆ ನಡೆದ ಮದುವೆ! (3)
2. ಮನದನ್ನೆ ಇರುವ ಗೃಹ (2)
3. ಗಮನವಿಟ್ಟು ನೋಡಿ!ಆಕಾಶ ಕಾಣುತ್ತಿದೆ! (3)
4. ಮರ ಬೆಟ್ಟ ಮುಂತಾದವುಗಳ ತುದಿ ಉಲ್ಟಾಕಾಣುತ್ತಿದೆ (3)
6. ವಾರದ ಕೊನೆಗೆ ಕಾಣಿಸಿರುವ ಆರೋಹಿ (3)
7. ನೆಯ್ಗೆ ಯಂತ್ರವಿದು (2)
8. ಬಿನ್ನಹಕ್ಕೊಂದು ಪರ್ಯಾಯ ಪದ (3)
10. ರಾಕ್ಷಸನಿಲ್ಲಿ ತಿರುಗಿ ನಿಂತಿದ್ದಾನೆ (3)
11. ಭಾರೀ ಪೆಟ್ಟಿಗೆಯಲ್ಲಿ ತಿರುವು ಮುರುವಾಗಿದೆ (3)
12. ಯುದ್ಧವಿಲ್ಲಿ ಉಲ್ಟಾ ಕಾಣುತ್ತಿದೆ (3)
13. ಮಧುರ ಫಲಗಳನ್ನು ನೀಡುವ ವೃಕ್ಷ (2)
14. ಇದು ಹೊಸದು (3)
16. ಕರಿಯಲ್ಲಿರುವ ಸುಗಂಧದ್ರವ್ಯ (3)
18. ವ್ಯವಸಾಯಗಾರನ ಅಳಲು! (3)
19. ಸದರಿಯಲ್ಲಿಯೇ ಯೋಗ್ಯವಾದುದು ಇದೆ! (2)

## ಉತ್ತರ

**ಎಡದಿಂದ ಬಲಕ್ಕೆ**

1. ವಿಜ್ಞಾನಿ 2. ಮತಗಟ್ಟೆ 4. ರವಾನೆ 5. ಹಸನ್ಮುಖ 7. ಮನವಿ 9. ಶಿವಮೊಗ್ಗ 11. ಕರ 12. ಗತಿ 13. ಮತದಾನ 15. ಸಂಕರ 17. ವೀರಕಾವ್ಯ 19.ಸದನ 20. ಹರಿದಾರಿ 21.ನಯನ

**ಮೇಲಿಂದ ಕೆಳಕ್ಕೆ**

1. ವಿವಾಹ 2. ಮನೆ 3. ಗಗನ 4. ರಖಿಶಿ 6. ಸವಾರ 7. ಮಗ್ಗ 8. ವಿನಂತಿ 10. ವನದಾ 11 .ಕದೂಸಂ 12.ಗಳಕಾ 13. ಮರ 14. ನವೀನ 16.ಕಸ್ತೂರಿ 18. ವ್ಯಸನ 19. ಸರಿ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಟ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : D P Muralidhar, Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com




ಏಪ್ರಿಲ್ 11 ರಂದು ಭಾರತ ಚುನಾವಣಾ ಆಯೋಗದ ಉಪ ಮುಖ್ಯ ಚುನಾವಣಾ ಆಯುಕ್ತರಾದ ಅಜಯ್ ಭಾಡೂ ಅವರು ವಿಧಾನಸಭಾ ಚುನಾವಣೆ ಪೂರ್ವತಯಾರಿ ಪರಿವೀಕ್ಷಣೆಗಾಗಿ ರಾಜ್ಯಕ್ಕೆ ಆಗಮಿಸಿದ್ದ ವೇಳೆ ಮುಖ್ಯ ಚುನಾವಣಾ ಕಚೇರಿಯಲ್ಲಿ ಸಭೆ ನಡೆಸಿರುವುದು.



ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮೈಸೂರಿನ ಕೂರ್ಗಳ್ಳಿಯ ಕೈಗಾರಿಕಾ ಪ್ರದೇಶದಲ್ಲಿರುವ ಶಾಹಿ ಎಕ್ಸ್‌ಪೋರ್ಟ್ ಗಾರ್ಮೆಂಟ್ಸ್‌ನ ನೌಕರರಲ್ಲಿ ಮತದಾನದ ಜಾಗೃತಿ ಮೂಡಿಸುತ್ತಿರುವುದು. ಜಿಲ್ಲಾಧಿಕಾರಿಗಳಾದ ಡಾ.ಕೆ.ವಿ.ರಾಜೇಂದ್ರ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ.ಎಂ.ಗಾಯಿತ್ರಿ ಅವರು ಸೇರಿದಂತೆ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದಾರೆ.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



# ಪ್ರಜಾಪ್ರಭುತ್ವ ನಮ್ಮಿಂದ
# ಮತದಾನ ಹೆಮ್ಮೆಯಿಂದ

Downloaded From:www.kpscvaani.com